ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಫೆಬ್ರವರಿ 16, 2011 ರೂ. 12/-

ಸಾಹಿತ್ಯ ಸಮ್ಮೇಳನ ಜಾತ್ರೆ ಬಯಲಲ್ಲಿ ಹಲವು ಅನಾಥ ಪ್ರಶ್ನೆಗಳು



ಮಾಟಮಂತ್ರ ಪರಿಹಾರಕ್ಕೆ

ಬೆತ್ತಲೆ ಸೇವೆ

ಚರ್ಚ್ ದಾಳಿ

ಕ್ರಿಮಿನಲ್‌ಗಳು ಸೇಫ್!



ಬಿಬಿಎಂಪಿ ಮೇಯರ್ ಕಮೀಷನರ್ ಕಚ್ಚಾಟ

ನಾಗೇಂದ್ರರೆಡ್ಡಿ ಎನ್‌ಕೌಂಟರ್ ಅಂಡರ್ ವರ್ಲ್ಡ್ ಪರಾರಿ

ಮಂಡ್ಯ ಕಲ್ಲುಗಳ್ಳ ಶಾಸಕರ ಗೂಂಡಾಗಿರಿ

ಕಡಲ ಮಕ್ಕಳ ತುತ್ತಿಗೆ ಕುತ್ತು

ರ್ ಎಂ ಪಿ ಎಂಬ ನುಂಗುಬಾಕ

ನೋ ಕಾಮೆಂಟ್ಸ್

"ಪ್ರಸಕ್ತ ಭೂಹಗರಣ, ಸ್ವಜನಪಕ್ಷಪಾತ, ಭ್ರಷ್ಟಾಚಾರದಂತಹ ಆರೋಪಗಳಿಂದ ಮಾನಸಿಕ ಖಿನ್ನತೆಗೊಳಗಾಗಿರುವ ಯಡಿಯೂರಪ್ಪನವರನ್ನು ಮೊದಲು ಮಾನಸಿಕ ತಜ್ಞರಿಗೆ ತೋರಿಸಿ, ಕೌನ್ಸೆಲಿಂಗ್‌ಗೆ ಒಳಪಡಿಸಿ ಸೂಕ್ತ ಚಿಕಿತ್ಸೆ ಕೊಡಿಸಬೇಕು."

- ಸಿದ್ಧರಾಮಯ್ಯ

"ಆಂಗ್ಲಭಾಷೆಯ ಆಕ್ರಮಣಕಾರಿ ನೀತಿಯಿಂದಾಗಿ ಪ್ರಪಂಚದ ಸರಿಸುಮಾರು 6000ಕ್ಕೂ ಹೆಚ್ಚು ಭಾಷೆಗಳು ಭಾಗಶಃ ನಶಿಸಿಹೋಗಿವೆ. ಕನ್ನಡ ಭಾಷೆ ಬದುಕ ಬೇಕಾದರೆ ಕನ್ನಡ ಸರ್ಕಾರ ಆಡಳಿತದಲ್ಲಿರಬೇಕು. ಜೊತೆಗೆ ಸರ್ಕಾರಿ ಯಂತ್ರಾಂಗವನ್ನು ಸಂಪೂರ್ಣವಾಗಿ ಕನ್ನಡಮಯ ಮಾಡಬೇಕು. ಪ್ರಾಥಮಿಕ ಶಾಲೆಗಳಲ್ಲಿ ಕಡ್ಡಾಯವಾಗಿ ಕನ್ನಡವನ್ನು ಕಲಿಸಬೇಕು. ಆದರೆ ನಮ್ಮ ಕೆಲಸಾಲೆಗಳಲ್ಲಿ ಕನ್ನಡ ಮಾತನಾಡಿದರೆ ದಂಡ ವಿಧಿಸುವಂತ ಪರಿಸ್ಥಿತಿ ಇರುವುದು ಶೋಚನೀಯ."

- ಪ್ರೊ. ಜಿ ವೆಂಕಟಸುಬ್ಬಯ್ಯ

"ಭಾರತದ ಕೋರ್ಟುಗಳ ಮುಂದೆ ಇರುವ ಎಲ್ಲಾ ಪ್ರಕರಣಗಳು ಬಗೆಹರಿಯಲು ಕನಿಷ್ಠ 320 ವರ್ಷಗಳು ಬೇಕು."

- ಶೇಖರ್ ಕಪೂರ್, ಚಿತ್ರ ನಿರ್ದೇಶಕ

"ಈಜಿಪ್ಟ್ ಜನತೆಯ ನಿಜವಾದ ಆಗ್ರಹವೇನು ಎಂಬುದು ಸ್ಪಷ್ಟ. ಅವರು ದಮನದಿಂದ ವಿಮೋಚನೆ ಬಯಸುತ್ತಿದ್ದಾರೆ. ಆದರೆ ಸ್ಪಷ್ಟವಾಗದಿರುವುದೇನೆಂದರೆ ಭವಿಷ್ಯ ಹೇಗಿರಬೇಕು ಎನ್ನುವ ಬಗ್ಗೆ ಅವರಲ್ಲಿ ಸಮ್ಮತಿಯಿದೆಯೇ ಎನ್ನುವುದು."

- ಜಾರ್ಜ್ ಜಾಪೆ, ಕೇಂಬ್ರಿಡ್ಜ್ ಶ್ವವಿದ್ಯಾಲಯ

"ನಾನು ಬಿನಾಯಕ್ ಸೇನ್‌ರ ಹೆತ್ತ ತಾಯಿಯಾಗಿರಬಹುದು. ಆದರೆ ಆತ ಪ್ರಾಯಶಃ ಪ್ರಪಂಚದ ಎಲ್ಲಾ ತಾಯಂದಿರ ಮಗ."

ಅನಸೂಯ ಸೇನ್, ಬಿನಾಯಕ್ ಸೇನ್‌ರ ತಾಯಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ರಾಜ್ಯದಲ್ಲಿ ನಕ್ಸಲ್ ಹಾವಳಿಯನ್ನು ಬೇರುಮಟ್ಟ ಕಿತ್ತು ಹಾಕಲಿದೆ."

- ಬಿ.ಎಸ್. ಯಡಿಯೂರಪ್ಪ

"ಅಕ್ರಮ ಅದುಗೆ ಅನಿಲ ಸರಬರಾಜು ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಮುಂದಾಗಿರುವ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಕೊಲೆ ಬೆದರಿಕೆ ಬಂದಿದೆ."

- ಪತ್ರಿಕಾ ವರದಿ

"ಒರಿಸ್ಸಾದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪೋಸ್ಕೋ ಕಬ್ಬಿಣದ ಅದಿರು ಗಣಿಗಾರಿಕೆಗೆ ಇನ್ನೂ ಅರವತ್ತು ಶರತ್ತುಗಳನ್ನು ವಿಧಿಸಿ ಶರತ್ತಿನ ಒಪ್ಪಿಗೆಯನ್ನು ನೀಡಲಾಗಿದೆ."

- ಜೈರಾಂ ರಮೇಶ್, ಪರಿಸರ ಮಂತ್ರಿ

"ಲೈಂಗಿಕ ಹಗರಣದಲ್ಲಿ ಸಿಲುಕಿಕೊಂಡಿರವ ನನ್ನನ್ನು ಬಚಾವು ಮಾಡಲು ಪ್ರಭಾವಿ ರಾಜಕಾರಣಿಯ ಬೆಂಬಲಿಗರಿಬ್ಬರು ನೂರು ಕೋಟಿ ಲಂಚ ಕೇಳಿದ್ದರು."

- ಸ್ವಾಮಿ ನಿತ್ಯಾನಂದ

"ನನ್ನ ಚುನಾವಣಾ ಗೆಲುವಿಗೆ ಭಗವಾನ್ ಶ್ರೀ ಕೃಷ್ಣನೇ ಕಾರಣ. 2000ನೇ ಇಸವಿಯಲ್ಲಿ ನಾನು ಮನುಶರ್ಮ ಎನ್ನುವವರು ಬರೆದ ಭಗವಾನ್ ಶ್ರೀ ಕೃಷ್ಣನ ಆತ್ಮಕಥೆಯ ಎಂಟೂ ಸಂಪುಟಗಳನ್ನೂ ನಾನು ಓದಿದ್ದೆ. ಅದರಲ್ಲಿ 'ಕರ್ಮ ಯೋಗದ' ಪರಿಕಲ್ಪನೆ ಹಾಗೂ ತನ್ನ ಶತ್ರುಗಳನ್ನು ಮಣಿಸಲು ಕೃಷ್ಣನು ರೂಪಿಸಿದ ಯುದ್ಧತಂತ್ರಗಳು ನನ್ನನ್ನು ಗಾಢವಾಗಿ ಪ್ರಭಾವಿಸಿದವು. ನನ್ನ ಶತ್ರುಗಳ ಬಲಹೀನತೆಯನ್ನು ನಾನೂ ಸೂಕ್ಷ್ಮವಾಗಿ ಅಧ್ಯಯನ ಮಾಡಿದೆ. ಅದೇ 2005ರ ನನ್ನ ಮೊದಲ ಗೆಲುವಿಗೂ ಮತ್ತು 2010ರ ನನ್ನ ಎರಡನೇ ಗೆಲುವಿಗೂ ಕಾರಣವಾಯಿತು."

- ನಿತೀಶ್ ಕುಮಾರ್, ಬಿಹಾರದ ಮುಖ್ಯಮಂತ್ರಿ

ಹಿಂದೂತ್ವವಾದಿಗಳು ಎನ್ನಲು ಹಿಂಜರಿಕೆ ಏಕೆ?

"ಮತೀಯ ಮೂಲಭೂತವಾದಿಗಳ ಸಹಿತ ಅನೇಕ ಮೂಲಗಳಿಂದ ದೇಶಕ್ಕೆ ಬೆದರಿಕೆಯಿದೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ಭಯೋತ್ಪಾದಕ ದಾಳಿಗಳ ಹಿಂದೆ ಕೆಲವು ಹೊಸ ಗುಂಪುಗಳನ್ನು ಶಂಕಿಸಲಾಗಿದೆ."


-ಮನಮೋಹನ್ ಸಿಂಗ್

ನಾಲ್ಕೂ ಬಿಟ್ಟವರು!

"ನನ್ನ ಆಯ್ಕೆ ಸರಿಯಾಗಿಯೇ ಇದೆ. ಕೇಂದ್ರ ಜಾಗೃತ ಆಯೋಗದ ಮುಖ್ಯ ಆಯುಕ್ತರಾಗಲು ಬೇಕಾದ ಎಲ್ಲಾ ಅರ್ಹತೆಗಳೂ ನನ್ನಲ್ಲಿದ್ದವು. ಅಲ್ಲದೆ ನನ್ನ ವಿರುದ್ಧ ಪಾಮೋಲಿನ್ ಪ್ರಕರಣ ಸಂಬಂಧ ಪ್ರಾಸಿಕ್ಯೂಷನ್‌ಗೆ ಕೋರ್ಟ್ ಆದೇಶಿಸಿರಲಿಲ್ಲ, ಇದನ್ನು ಕೂಡಾ ನಾನು ಗಮನಕ್ಕೆ ತಂದಿದ್ದೆ. ನನ್ನನ್ನು ಬಿಟ್ಟುಬಿಡಿ. ನನ್ನ ಕೆಲಸ ನಿರ್ವಹಿಸಿಕೊಂಡು ಹೋಗುತ್ತೇನೆ."

-ಕಳಂಕಿತ ಸಿವಿಸಿ ಥಾಮಸ್

ಹಿಂದೂತ್ವದ 'ಅಭಿವೃದ್ಧಿ' ಮತ್ತು ವಿಶ್ವಬ್ಯಾಂಕಿನ 'ಗುಡ್ ಗವರ್ನೆನ್ಸ್'



ಶಿವಸುಂದರ್

ಚಾರ್ವಾಕ

ಕರ್ನಾಟಕದ ಜನರಿಗೆ ಈಗ 'ಅಭಿವೃದ್ಧಿ' ಎನ್ನುವ ಮಾತೇ ವಾಕರಿಕೆ ತರಿಸುವಂತಾಗಿದೆ. ಯಡಿಯೂರಪ್ಪನವರು ಹಗಲುರಾತ್ರಿ 'ಅಭಿವೃದ್ಧಿ'ಯ ಮಂತ್ರ ಜಪಿಸಿ ಜಪಿಸಿ ಕರ್ನಾಟಕ ಎಷ್ಟು ಅಭಿವೃದ್ಧಿಯಾಗಿಬಿಟ್ಟಿದೆ ಎಂದರೆ ಅದರ ಹೊಟ್ಟೆಉರಿ ತಡೆದುಕೊಳ್ಳಲಾಗದೆ ವಿರೋಧ ಪಕ್ಷಗಳು ಮೈ-ಕೈ ಪರಚಿಕೊಳ್ಳುತ್ತಿವೆ ಎಂಬುದು ಮುಖ್ಯಮಂತ್ರಿಗಳ ದೂರು. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತ, ಹೊಟ್ಟೆ ತುಂಬುವಷ್ಟು ಸಂಬಳ ಕೊಡಿ ಎಂದು ತಮ್ಮ ಮೇಲೆ ಮಲ ಸುರಿದುಕೊಂಡು ಪ್ರತಿಭಟಿಸಿದ ದಲಿತ ಕಾರ್ಮಿಕರು, ತಿಂಗಳೆಲ್ಲಾ ದುಡಿದರೂ ರೋಜ್‌ಗಾರ್ ಯೋಜನಾದಲ್ಲಿ ಸಿಗುವಷ್ಟು ಸಂಬಳವೂ ದೊರೆಯದೆ ಮಳೆ-ಬಿಸಿಲೆನ್ನದೆ ಬೀದಿಯಲ್ಲಿ ಪ್ರತಿಭಟಿಸುತ್ತಿರುವ ಅಂಗನವಾಡಿ ಕಾರ್ಮಿಕರು -ಇಂಥವರೆಲ್ಲಾ ರಾಜ್ಯದ ಅಭಿವೃದ್ಧಿ ನೋಡಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಇಲ್ಲವೇ ಪ್ರತಿಪಕ್ಷದ ಪಿತೂರಿಯಿಂದಾಗಿಯೇ ಬೀದಿಯಲ್ಲಿ ಗಲಭೆ ಮಾಡುತ್ತಿದ್ದಾರೆ.

ಇನ್ನು ಈ ಅಭಿವೃದ್ಧಿಯ ಪ್ರಕ್ರಿಯೆಯ ಫೀಸೆಂದು ಮಾನ್ಯ ಯಡಿಯೂರಪ್ಪನವರು ಹತ್ತಿಪ್ಪತ್ತು ಸಾವಿರ ಕೋಟಿ ರೂಪಾಯಿಗಳ ಆಸ್ತಿ ಮಾಡಿಕೊಂಡಿದ್ದರೆ ಅದು ನೈತಿಕವಾಗಿ ಸರಿ ಇಲ್ಲದಿರಬಹುದು ಆದರೆ ಕಾನೂನಾತ್ಮಕ ತಪ್ಪೇನೂ ಅಲ್ಲವೆಂದು ಈಗಾಗಲೇ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿಯವರೂ ಅಪ್ಪಣೆ ಕೊಡಿಸಿದ್ದಾರೆ. ನೈತಿಕ ತಪ್ಪುಗಳಿಂದ ಹೊರಬರುವ ರೀತಿ ಭಾರತೀಯರಿಗೆ ಹೇಗಿದ್ದರೂ ಕರತಲಾಮಲಕ. ದೇವರ ಹುಂಡಿಗೆ ಹಣ ಹಾಕಿಬಿಟ್ಟರೆ ಸಾಕು ನೈತಿಕ ಅಪರಾಧಗಳಿಗೆ ನೋ ಡ್ಯೂ ಸರ್ಟಿಫಿಕೇಟ್ ಸಿಕ್ಕಿಬಿಡುತ್ತದೆ. ಬಿಜೆಪಿಯಲ್ಲಿ ಸ್ವಲ್ಪ ವ್ಯತ್ಯಾಸ. ಅವರು ನಿತಿನ್ ಗಡ್ಕರಿ ಹುಂಡಿಗೆ ಅಥವಾ ಅವರ ಮಕ್ಕಳ ಮದುವೆ ಜವಾಬ್ದಾರಿ ನೋಡಿಕೊಂಡರೆ ಸಾಕು ಶಾಪ ವಿಮೋಚನೆಯಾಗಿಬಿಡುತ್ತದೆ.,

ಯಡಿಯೂರಪ್ಪನವರಿಗೆ ಇನ್ನೂ ಒಂದು ದೇವರು ಅವರ ಎಲ್ಲಾ ನೈತಿಕ ಅಪರಾಧಕ್ಕೆ ಪಾರ್ಡನ್ ಪೇಪರ್ ದಯಪಾಲಿಸಿ ಶಹಭಾಷ್‌ಗಿರಿ ಕೊಡುತ್ತಿದೆ. ಅದು ವಿಶ್ವಬ್ಯಾಂಕ್! ಗುಜರಾತ್ ಮತ್ತು ಕರ್ನಾಟಕ ಅದರ ಪ್ರಕಾರ ಅತ್ಯಂತ "ಒಳ್ಳೆಯ ಆಡಳಿತ" ಇರುವ ರಾಜ್ಯಗಳಲ್ಲಿ ಪ್ರಮುಖವಾದವಂತೆ. ಅವರ ಪ್ರಕಾರ ಅಭಿವೃದ್ಧಿಗೂ ಜನಪರ ಸಿದ್ಧಾಂತಗಳಿಗೂ ಯಾವುದೇ ಸಂಬಂಧವಿಲ್ಲವಂತೆ!

ಸಮಾಜವಾದ, ಕಮ್ಯುನಿಸಮ್ ಇನ್ನಿತ್ಯಾದಿ ಇಸಮ್‌ಗಳಿಗೆ ಬಲಿಯಾಗಿ ಅಭಿವೃದ್ಧಿಯಿಂದ ವಂಚಿತರಾಗಬಾರದೆಂದು ಅದು ಇಡೀ ಜಗತ್ತಿಗೆ ಆದೇಶ ನೀಡುತ್ತಿದೆ. ಅದನ್ನೇ ಅದು *ಗುಡ್ ಗವರ್ನೆನ್ಸ್* ಅಂದರೆ ಒಳ್ಳೆ ಆಡಳಿತವೆಂದೂ ನಾಮಕರಣ ಮಾಡಿದೆ. ಯಾರು ಯಾರು ಅದರ ಆದೇಶವನ್ನು ಚಾಚೂತಪ್ಪದೇ ಪಾಲಿಸುತ್ತಿದ್ದಾರೋ ಅವರೆಲ್ಲಾ ಒಳ್ಳೆ ಆಡಳಿತಗಾರರು. ಅವರು ದೇಶದ ಬಡಜನತೆಯನ್ನು ಎಷ್ಟೇ ಬೀದಿ ಪಾಲು ಮಾಡಿದ್ದರೂ, ಎಷ್ಟೇ ದಮನ, ದೌರ್ಜನ್ಯ ನಡೆಸಿದ್ದರೂ ಅದು ಒಳ್ಳೆ ಆಡಳಿತವೇ.

ಆದರೆ ಅಭಿವೃದ್ಧಿಯ ಬಗ್ಗೆ ಜನರ ಮಾನದಂಡವೇ ಬೇರೆ ಇರುತ್ತದೆ. ವಿಶ್ವಬ್ಯಾಂಕಿನ ಮುದ್ದಿನ ಶಿಶು ಆಂಧ್ರದ ಚಂದ್ರಬಾಬು ನಾಯ್ಡು ತನ್ನ ರಾಜ್ಯದಲ್ಲಿ ಎಷ್ಟೇ ಅಭಿವೃದ್ಧಿ ಮಾಡಿದ್ದಾನೆಂದು ತುತ್ತೂರಿ ಬಜಾಯಿಸಿದಾರೂ ಆತನ ಆಡಳಿತಾವಧಿಯಲ್ಲಿ ನೇಣು ಹಾಕಿಕೊಂಡ ಸಾವಿರಾರು ರೈತರ ಕುಟುಂಬಗಳ ಪಾಲಿಗೆ ಅದು ಅಭಿವೃದ್ಧಿಯಾಗಿರಲಿಲ್ಲ. ಅದೇ ರೀತಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಹಿಂದೂತ್ವಾವಾದಿ ಎನ್‌ಡಿಎ ಸರ್ಕಾರ ಹಿಂದೂ ಅಭಿವೃದ್ಧಿ ದರವನ್ನು ಸಾಧಿಸಿದೆಯೆಂದು ಕೊಚ್ಚಿಕೊಂಡು ಭಾರತ ಪ್ರಕಾಶಿಸುತ್ತಿದೆ ಎಂದು ಅಬ್ಬರಿಸುತ್ತಿದ್ದರೂ ಅವರ ಆಡಳಿತಾವಧಿಯಲ್ಲಿ ಪಡಬಾರದ ಪಾಡಿಗೆ ಬಿದ್ದ ಈ ದೇಶದ ಕೂಲಿ ಕಾರ್ಮಿಕ ಜನತೆ ಅವರ ಆಡಳಿತದಲ್ಲಿ ಅಭಿವೃದ್ಧಿಯೆಂಬುದು ತಮ್ಮ ಅಭಿವೃದ್ಧಿಯಾಗಿರಲಿಲ್ಲವೆಂದು ಸ್ಪಷ್ಟ ತೀರ್ಪು ಕೊಟ್ಟರು. ಈಗ ಯುಪಿಎ-2 ಸರ್ಕಾರವೂ ಅದೇ ಮಾರ್ಗವನ್ನು ಹಿಡಿದಿದೆ.

ಅಂದರೆ ಒಂದು ವಿಷಯ ಸ್ಪಷ್ಟವಾಗಿದೆ. ವಿಶ್ವಬ್ಯಾಂಕಿನ *ಗುಡ್ ಗವರ್ನೆನ್ಸ್* ಆಗಲೀ ಹಿಂದೂ ಅಭಿವೃದ್ಧಿ ದರವಾಗಲೀ ಸಾಮಾನ್ಯರ ಅಭಿವೃದ್ಧಿಯ ಪರವಾಗಿಲ್ಲವೆಂಬುದು ಸ್ಪಷ್ಟವಾಗಿದೆ.

ಏಕೆಂದರೆ ಸಿದ್ಧಾಂತಗಳಿಗೂ ಅಭಿವೃದ್ಧಿಯ ಪರಿಗೂ ನೇರ ಸಂಬಂಧವಿದೆ.

ಜಾತ್ಯತೀತತೆ ಹಾಗೂ ಕೋಮುವಾದ ಎಂಬ ಸಿದ್ಧಾಂತಗಳು ಕೇವಲ ಸಾಮಾಜಿಕ ಸಿದ್ಧಾಂತಗಳಲ್ಲ, ಅದು ಕೇವಲ ಸಾಮಾಜಿಕ ಸಿದ್ಧಾಂತ ಮಾತ್ರವೇ ಆಗಿದ್ದರೆ ಹಿಂದೂ ಅಭಿವೃದ್ಧಿ ದರ ಎಂಬ ಮಾತೇಕೆ ಬರುತ್ತಿತ್ತು? ಅದೇರೀತಿ ವಿಶ್ವಬ್ಯಾಂಕ್ ಪ್ರತಿಪಾದಿಸುತ್ತಿರುವ ಗುಡ್ ಗವರ್ನೆನ್ಸ್ ಸಹ ಸಿದ್ಧಾಂತವೇ ಇಲ್ಲದ ಪರಿಶುದ್ಧ ಅಭಿವೃದ್ಧಿಯೇನಲ್ಲ.

ಕೋಮುವಾದ ಒಂದು ನಿರ್ದಿಷ್ಟ ಆರ್ಥಿಕ ಪರಿಸ್ಥಿತಿ ಹುಟ್ಟಿಹಾಕುವ ಸಾಮಾಜಿಕ ಸಂಕ್ಷೋಭೆಯಿಂದಲೇ ಉದ್ಭವಿಸುತ್ತದೆ. ಹಾಗೂ ಅದಕ್ಕೆ ಆ ಬಗೆಯ ಆರ್ಥಿಕ ಚಿಂತನೆಯ ತಳಹದಿಯೂ ಇರುತ್ತದೆ. ಉದಾಹರಣೆಗೆ ಒಂದು ನಿಜವಾದ ಸಮಾಜವಾದಿ ಆರ್ಥಿಕತೆಯ ಅಡಿಪಾಯದ ಮೇಲೆ ಕೋಮುವಾದಿ ಸಿದ್ಧಾಂತ ಹುಲುಸಾಗಿ ಬೆಳೆಯಲು ಬೇಕಾದ ವಾತಾವರಣ ಸಿಗುವುದಿಲ್ಲ, ಏಕೆಂದರೆ ಒಂದು ನಿಜವಾದ ಸಮಾಜವಾದಿ ಆರ್ಥಿಕತೆ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ವಾತಾವರಣವನ್ನು ಹುಟ್ಟಿಹಾಕಿರುತ್ತದೆ. ಅದರ ಮೂಲ ಸೆಲೆಯೇ ಎಲ್ಲರೂ ಒಂದೇ ಎಂಬ ತತ್ವವಾಗಿರುತ್ತದೆ. ಹೀಗಾಗಿ ಅಂತಹ ಸಾಮಾಜಿಕ, ಆರ್ಥಿಕ, ರಾಜಕೀಯ ಸನ್ನಿವೇಶದಲ್ಲಿ ನಾನು ಮತ್ರ ಶ್ರೇಷ್ಠ ಉಳಿದವರು ನನಗಿಂತ ಕನಿಷ್ಠ ಎಂಬ ಸಿದ್ಧಾಂತ ಬೆಳೆಯಲು ಭೌತಿಕ ತಳಹದಿಯೇ ಇರುವುದಿಲ್ಲ,

ಆದರೆ ಕೋಮುವಾದಿ ಸಿದ್ಧಾಂತದ ಮೂಲ ನೆಲೆಯೇ ಕೆಲವರು ಶ್ರೇಷ್ಠ ಉಳಿದವರು ಗುಲಾಮರು ಎಂಬ ತಾರತಮ್ಯ, ಅಂತಹ ಸಿದ್ಧಾಂತ ತೀವ್ರ ತಾರತಮ್ಯವಿರುವ ಆರ್ಥಿಕ, ಸಾಮಾಜಿಕ ಪರಿಸರದಲ್ಲಿ ಹುಟ್ಟುತ್ತದೆ ಹಾಗೂ ಅಂತಹ ತಾರತಮ್ಯವಾದೀ ವ್ಯವಸ್ಥೆಯನ್ನು ತಾತ್ವಿಕವಾಗಿ ಎಲ್ಲಾ ರಂಗಗಳಲ್ಲೂ ಪೋಷಿಸುತ್ತದೆ. ಎಲ್ಲರೂ ಅಭಿವೃದ್ಧಿಯಲ್ಲಿ ಸಮಪಾಲು ಪಡೆಯಲಾಗುವುದಿಲ್ಲ ಎಂಬುದೇ ಅದರ ಆರ್ಥಿಕ ತತ್ವ. ಅಷ್ಟು ಮಾತ್ರವಲ್ಲ. ಇಂದಿನ ಪರಿಸ್ಥಿತಿಯಲ್ಲಿ ಈ ತಾರತಮ್ಯವಾದಿ ಹಿಂದೂತ್ವ ಸಿದ್ಧಾಂತಕ್ಕೂ-ವಿಶ್ವಬ್ಯಾಂಕಿನ ಗುಡ್ ಗವರ್ನೆನ್ಸ್‌ಗೂ ನೇರವಾದ ಹಾಗೂ ಪೂರಕವಾದ ಸಂಬಂಧಗಳೇ ಇವೆ.

ಆದ್ದರಿಂದಲೇ ಕೇಂದ್ರದಲ್ಲಿದ್ದ ಎನ್‌ಡಿಎ ಸರ್ಕಾರವಾಗಲೀ, ಬಿಜೆಪಿ ಹಾಗೂ ಅದರ ಮಿತ್ರಪಕ್ಷಗಳು ಅಧಿಕಾರದಲ್ಲಿದ್ದ ರಾಜ್ಯಗಳಲ್ಲಾಗಲೀ ಆಚರಣೆಯಲ್ಲಿ ಇದ್ದದ್ದು ವಿಶ್ವಬ್ಯಾಂಕ್ ಪ್ರಣೀತ ಆರ್ಥಿಕ ಸಿದ್ಧಾಂತಗಳೇ. ಅದನ್ನೇ ಬೇಕಾದರೆ ಹಿಂದೂವಾದಿ ಆರ್ಥಿಕ ಪ್ರಣಾಳಿಕೆ ಎಂದೂ ಕರೆಯಬಹುದು ಅಥವಾ ವಿಶ್ವಬ್ಯಾಂಕ್ ಪ್ರಾಯೋಜಿತ "ಗುಡ್ ಗವರ್ನ್‌ಮೆಂಟ್"ಗಳೆಂದೂ ಹೇಳಬಹುದು.

ಹಿಂದೂವಾದಿ ಆರ್ಥಿಕ ಪ್ರಣಾಳಿಕೆ ಹಾಗೂ ವಿಶ್ವಬ್ಯಾಂಕಿನ ಗುಡ್ ಗವರ್ನೆನ್ಸ್ ಎರಡೂ ಸಹ ದೈತ್ಯ ಕಾರ್ಪೊರೇಟ್ ಉದ್ಯಮಿಗಳ ಪರವಾದ ಆರ್ಥಿಕ ನೀತಿಗಳು ಜಾರಿಗೆ ತರಬೇಕೆಂದು ಪ್ರತಿಪಾದಿಸುತ್ತವೆ. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿ ಇದ್ದ ಅವಧಿಯಲ್ಲಿ ಈ ದೇಶ ಬಹುರಾಷ್ಟ್ರೀಯ ಕಂಪನಿಗಳಿಗೆ ಹಾಗೂ ಈ ದೇಶದ ದೈತ್ಯ ಉದ್ಯಮಿಗಳಿಗೆ ಹರಾಜಾದಷ್ಟು ಬೇರೇ ಯಾವುದೇ ಅವಧಿಯಲ್ಲೂ ಆಗಿರಲಿಲ್ಲ, ಈಗ ಯುಪಿಎ ಸರ್ಕಾರ ಅದನ್ನು ಮೀರಿಸುವ ಎಲ್ಲಾ ಸೂಚನೆಗಳನ್ನು ತೋರುತ್ತಿದೆ. ಹೀಗಾಗಿಯೇ ಅದಕ್ಕೂ ಸಾಮಾಜಿಕವಾಗಿ ದಮನ ನೀತಿ ಬೇಕೇಬೇಕು. ಆದರೆ ಅದು ಬಿಜೆಪಿ ಬಗೆಯ ಕೋಮು ದಮನವಲ್ಲ, ಪ್ರಭುತ್ವದ ದಮನವಾಗಿರುತ್ತದೆ ಅಷ್ಟೆ.

ಈ ದೈತ್ಯರು ಅಭಿವೃದ್ಧಿಯಾದರೆ ಅಭಿವೃದ್ಧಿಯ ಫಲ ತಾನಾಗಿಯೇ ತೊಟ್ಟಿಕ್ಕುತ್ತಾ ಎಲ್ಲರಿಗೂ ಹರಿದುಬರುತ್ತದೆ ಎಂಬುದೇ ಆಗಿನ ಹಾಗೂ ಈಗಿನ ತಿಳಿವಳಿಕೆ. ಈ ಕಾರ್ಪೊರೇಟ್ ಉದ್ಯಮಪತಿಗಳ ಲಾಭ ಹೆಚ್ಚಿಸಬೇಕೆಂದರೆ ಜನವಿರೋಧಿ ಅಭಿವೃದ್ಧಿ ನೀತಿಗಳನ್ನು ಜಾರಿಗೆ ತರಲೇಬೇಕಾಗಿತ್ತು. ಇಂತಹ ಆರ್ಥಿಕ ನೀತಿಗಳನ್ನು ಸರ್ವಾಧಿಕಾರವಿರುವ ರಾಷ್ಟ್ರಗಳಲ್ಲಿ ತಂದಷ್ಟು ಸುಲಭವಾಗಿ ಒಂದು ತೋರಿಕೆಯ ಪ್ರಜಾತಂತ್ರವಿರುವ ರಾಷ್ಟ್ರದಲ್ಲಿ ತರಲು ಸಾಧ್ಯವಿರುವುದಿಲ್ಲ. ಅದಕ್ಕೆ ಜನರ ಒಪ್ಪಿಗೆಯ ಲೇಪನವನ್ನು ಹಚ್ಚಬೇಕಾಗುತ್ತದೆ.

ಅಂತಹ ಸಂದರ್ಭಗಳಲ್ಲೇ ಕೋಮುವಾದಿ ಪಕ್ಷವೊಂದರ ಹಾಗೂ ಸಿದ್ಧಾಂತವೊಂದರ ಅಗತ್ಯ ಬೀಳುತ್ತದೆ. ಜನತೆಯೇ ಸ್ವಇಚ್ಛೆಯಿಂದ ತಮ್ಮ ಪ್ರಗತಿ ಹಾಗೂ ಅಭಿವೃದ್ಧಿಯ ಬಲಿಗೊಟ್ಟು ಉದ್ಯಮಿಗಳ ಅಭಿವೃದ್ಧಿ ಮಾಡುವ ಆರ್ಥಿಕ ನೀತಿಗಳಿಗೆ ಒಪ್ಪಿಗೆ ಕೊಡುವಂತೆ ಅಭಿವೃದ್ಧಿಯ ಹೆಸರಲ್ಲಿ ಹುಸಿ ರಾಷ್ಟ್ರೀಯವಾದ ಹಾಗೂ ಹುಸಿ ಅಭಿಮಾನವನ್ನು ಹುಟ್ಟಿಹಾಕಲಾಗುತ್ತದೆ. ಗುಜರಾತಿನ ಹತ್ಯಾಕಾಂಡದ ನಂತರ ನಡೆದ ಚುನಾವಣೆಯಲ್ಲಿ ಮೋದಿ ಹುಟ್ಟಿಹಾಕಿದ್ದು ಇದೇ ಬಗೆಯ ಹುಸಿ ಗುಜರಾತಿ ಅಸ್ಮಿತೆಯನ್ನೇ . 2004ರ ಚುನಾವಣೆಯಲ್ಲಿ ಎನ್‌ಡಿಎ ಸರ್ಕಾರ ಭಾರತ ಪ್ರಕಾಶಿಸುತ್ತಿದೆ ಎಂಬ ಹೆಸರಿನಲ್ಲಿ ಹುಟ್ಟುಹಾಕಲು ಯತ್ನಿಸಿದ್ದು ಇದೇ ಬಗೆಯ ಹುಸಿ ದೇಶಪ್ರೇಮವನ್ನೇ. ಈಗ ಯಡಿಯೂರಪ್ಪನವರು ಹುಟ್ಟುಹಾಕಲು ಪ್ರಯತ್ನಿಸುತ್ತಿರುವುದೂ ಹುಸಿ ಕರ್ನಾಟಕಾಭಿಮಾನ, ಹಿಂದೂ ಅಸ್ಮಿತೆ ಹಾಗೂ ಅದರ ಜೊತೆಗೆ ಜಾತಿ ಅಭಿಮಾನ. ಇವರ ಸಿದ್ಧಾಂತಗಳಲ್ಲಿ ದೇಶವೆಂದರೆ ಮಣ್ಣು ಭೂಪಟಗಳೇ ಹೊರತು ಈ ದೇಶದ ಬಡ ಜನತೆಯಲ್ಲ, ಈ ದೇಶದ ಅಭಿವೃದ್ಧಿಯೆಂದರೆ ಕಾರ್ಪೊರೇಟ್ ಶಕ್ತಿಗಳ ಅಭಿವೃದ್ಧಿಯೇ ವಿನಹ ಈ ದೇಶದ ಜನರ ಅಭಿವೃದ್ಧಿಯಲ್ಲ.

ಸಕಲರ ಅಭಿವೃದ್ಧಿಯೆಂಬ ಬದಲಿಗೆ ಬಲವಿದ್ದವನು ಮಾತ್ರ ಬದುಕಬೇಕೆಂಬುದು ಇಂದು ವಿಶ್ವ ಮಟ್ಟದಲ್ಲಿ ಜಾರಿಯಲ್ಲಿರುವ ನವ ಉದಾರವಾದಿ ಆರ್ಥಿಕ ಸಿದ್ಧಾಂತ ಹೂರಣವಾದರೆ, ಕೆಲವರು ತಮ್ಮ ಜನ್ಮಜಾತ ಹಕ್ಕಿನಂತೆ ಹೆಚ್ಚು ಅಭಿವೃದ್ಧಿ ಹೊಂದುವುದೂ ಕೆಲವರು ಅವರ ಗುಲಾಮರಾಗಿರುವುದೂ ಸಹಜವಾದದ್ದೇ ಎಂದು ಹಿಂದೂ ಆರ್ಥಿಕ ಚಿಂತನೆ ಪ್ರತಿಪಾದಿಸುತ್ತದೆ. ಅದರೊಡನೆ ಅದರ ತೀವ್ರ ದಲಿತ ವಿರೋಧಿ ಹಾಗೂ ಮುಸ್ಲಿಂ ವಿರೋಧಿ ಚಿಂತನೆಗಳು ಇದಕ್ಕೆ ಪೂರಕವಾಗಿ ಬರುತ್ತದೆ. ಇದನ್ನು ಕರ್ನಾಟಕದ ಜನ ತಮ್ಮ ಅನುಭವದಿಂದಲೇ ಕಳೆದ ಹಲವು ವರ್ಷಗಳಿಂದ ಕಂಡುಕೊಳ್ಳುತ್ತಿದ್ದಾರೆ.



ವಿಧಾನಸೌಧದ ಗೋಡೆಯ ಮೇಲೆ ಈ ದೇಶದ ಮಹಾನ್ ನಾಯಕನಿಗೆ ದಲಿತನೆಂಬ ಕಾರಣಕ್ಕೆ ಜಾಗ ನಿರಾಕರಿಸಿದ ಈ ಕೋಮುವಾದಿಗಳು ಅಭಿವೃದ್ಧಿಯಲ್ಲಿ ದಲಿತರಿಗೆ ಜಾಗ ಕೊಡುವರೇ?

ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಫ್ಯಾಸಿಸಮ್ ಎಂದರೇನು ಎಂದು ಕೇಳಿದ್ದಕ್ಕೆ ಒಬ್ಬ ಚಿಂತಕ "ಫ್ಯಾಸಿಸಮ್ ಎಂದರೆ ಕಾರ್ಪೊರೇಟ್ ಶಕ್ತಿಗಳ ಹಾಗೂ ಪ್ರಭುತ್ವದ ನಡುವಿನ ಮೈತ್ರಿ" ಎಂದನಂತೆ. ಆದ್ದರಿಂದ ವಿಷಯ ಸ್ಪಷ್ಟವಾಗಿದೆ. ಹಿಂದೂತ್ವ ಸಿದ್ಧಾಂತ ಬಡಜನರ ಅಭಿವೃದ್ಧಿ ವಿರೋಧಿಯೂ ಆಗಿದೆ. ಸಾಮ್ರಾಜ್ಯಶಾಹಿಗಳ ಗುಲಾಮತನವನ್ನೂ ಬೋಧಿಸುತ್ತದೆ. ತಾರತಮ್ಯವನ್ನೇ ಸಿದ್ಧಾಂತವಾಗಿ ಉಸಿರಾಡುವ ಪಕ್ಷ ಅಭಿವೃದ್ಧಿಯ ಪಥದಲ್ಲಿ ಮಾತ್ರ ತಾರತಮ್ಯ ರಹಿತ ಸಿದ್ಧಾಂತವನ್ನು ಪಾಲಿಸುತ್ತದೆಂದು ಭಾವಿಸುವುದು ರಾಜಕೀಯ ಮುಠ್ಠಾಳತನ.

ತಾರತಮ್ಯದ ಕೆಸರಿನಲ್ಲಿ ಮಾತ್ರ ಹಿಂದೂತ್ವದ ಕಮಲ ಅರಳುತ್ತದೆ. ●


ಮಾಟ ಮಂತ್ರ ಪರಿಹಾರಕ್ಕೆ ಬೆತ್ತಲೆ ಪೂಜೆ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಮುಖ್ಯಮಂತ್ರಿ ಯಡಿಯೂರಪ್ಪನಿಗೆ ತಲೆ ಕೆಟ್ಟಿದೆ. ...ನ್ನು ಹಿಡಿದಿದೆ, ಮತಿಭ್ರಮಣೆಯಾಗಿದೆ. ಇಲ್ಲದಿದ್ದರೆ ...ನ್ನು ಜೀವಸಹಿತ ಮುಗಿಸಲು ವಿರೋಧ ಪಕ್ಷಗಳು ...ಟ-ಮಂತ್ರ ಮಾಡಿಸಿ ಷಡ್ಯಂತ್ರ ರೂಪಿಸುತ್ತಿರುವುದರಿಂದ ... ಜೀವ ಬೆದರಿಕೆ ಇದೆ. ಮನೆಯಿಂದ ವಿಧಾನಸೌಧಕ್ಕೆ ...ದರೆ ಮನೆಗೆ ಜೀವಂತವಾಗಿ ವಾಪಸ್ ಬರುತ್ತೇನೆಂಬ ...ಸೆ ನನ್ನಲ್ಲಿಲ್ಲ... ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ...ರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಶಿಷ್ಯ ...ಮಾರ್ಗದ ಮೂಲಕ ನನ್ನನ್ನು ಜೀವಸಹಿತ ಮುಗಿಸಲ್ಲು ...ದ ಕಸರತ್ತು ಮಾಡುತ್ತಿದ್ದಾರೆ" ಎಂದೆಲ್ಲ ಅಸಂಬದ್ಧವಾಗಿ ...ಡಿಯೂರಪ್ಪ ಮಾತನಾಡುತ್ತಿರಲಿಲ್ಲ.



...ಭೂಒಡರೋಡೆ, ಭ್ರಷ್ಟಾಚಾರ, ಹಲವಾರು ಹಗರಣಗಳಲ್ಲಿ ...ತ್ಯ ಮಿಂದೇಳುತ್ತಿರುವ ಯಡ್ಡಿಗೆ ಅದ್ಯಾವುದರ ಬಗ್ಗೆಯೂ ...ನಿಲುವು ತೆಗೆದುಕೊಳ್ಳಲಾಗುತ್ತಿಲ್ಲ. ಯಾವುದನ್ನೂ ...ರ್ಥಿಸಿಕೊಳ್ಳಲಾಗುತ್ತಿಲ್ಲ. ಆದ್ದರಿಂದ ಈಗ ತನ್ನ ವಿರುದ್ಧ ...ರೋಧ ಪಕ್ಷಗಳು ಮಾಟಮಂತ್ರ ಮಾಡಿ ತನ್ನನ್ನು ಮುಗಿ... ಪ್ರಯತ್ನ ನಡೆಸುತ್ತಿದ್ದಾರೆ ಎಂದೆಲ್ಲ ಸಾರ್ವಜನಿಕವಾಗಿ ...ಬತ್ತುಕೊಂಡಿದ್ದಾರೆ.

...ಯಡಿಯುರಪ್ಪ ಮಾಟಮಂತ್ರ, ವಾಮಾಚಾರಗಳ ಬಗ್ಗೆ ...ಲ್ಲ ಮಾತನಾಡಿರುವುದು ಇದೇ ಮೊದಲಲ್ಲ. 2007ರ ...ಬರ್‌ನಲ್ಲೂ ಹೀಗೇ ಅರಚಾಡಿದ್ದರು. "ನನ್ನನ್ನು ಮುಗಿಸಲು ...ವೇಗೌಡ ಮತ್ತು ಅವರ ಪುತ್ರರು ಮಾಟಮಂತ್ರ ...ಡಿಸಿದ್ದಾರೆ. ಇದರಿಂದ ನನಗೆ ಜೀವಭಯವಿದೆ. ಅವರು ...ಲ್ಲಿ ಮಾಟಮಂತ್ರ ಮಾಡಿಸುತ್ತಿದ್ದಾರೆ ಎಂದು ನನಗೆ ...ದಿದೆ. ನಾನು ಗೃಹ ಇಲಾಖೆಗೆ ಪತ್ರ ಬರೆದು ದೇವೇಗೌಡ ...ತ್ತು ಅವರ ಪುತ್ರರ ವಿರುದ್ಧ ದೂರು ಸಲ್ಲಿಸುತ್ತೇನೆ. ನನ್ನ ...ಣಕ್ಕೆ ಹಾನಿ ಆದರೆ ಅದಕ್ಕೆ ಅವರೇ ಕಾರಣರಾಗುತ್ತಾರೆ. ...ಪ್ರಾಣಕ್ಕೆ ಎಷ್ಟು ಅಪಾಯ ಇದೆ ಎಂದರೆ ನಾನು ...ಲೇ ನನ್ನ ವಿಲ್ ಬರೆದಿಡುತ್ತೇನೆ" ಎಂದೆಲ್ಲ ಅಂದು ...ಬುಡ ಇಲ್ಲದಂತೆ ಆರೋಪಿಸಿದ್ದರು.

...ಕಿಂಚಿತ್ತಾದರೂ ಬುದ್ಧಿ ಇರುವ ಯಾವ ಮನುಷ್ಯ ...ಟಮಂತ್ರದಿಂದ ತನಗೆ ಜೀವಬೆದರಿಕೆ ಇದೆ ಎನ್ನುತ್ತಾನೆ? ...ಕಾರಣಕ್ಕೇ ತಾನು ಹೆದರಿದ್ದೇನೆ ಎಂದು ಹೇಳಿಕೆ ...ತ್ತಾನೆ? ಈಗಿನ ಆಧುನಿಕ ಯುಗದಲ್ಲೂ ಸುಶಿಕ್ಷಿತನಾದ, ...ಾರದಲ್ಲಿರುವ, ಒಂದು ರಾಜ್ಯದ ಆಡಳಿತದ ಚುಕ್ಕಾಣಿ ...ಲ್ಲಿ ನಡೆಸುತ್ತಿರುವ ಯಡ್ಡಿಯಂತಹ ವ್ಯಕ್ತಿಯೋರ್ವ ...ಟಮಂತ್ರದಂತಹ ಮೂಢ ಆಚರಣೆಯಲ್ಲಿ ಇಷ್ಟೊಂದು ನಂಬಿಕೆ ಇಟ್ಟಿದ್ದಾನೆಂದರೆ ಅದು ಹುಚ್ಚಲ್ಲದೆ ಇನ್ನೇನು?

ಯಡಿಯೂರಪ್ಪ ತನ್ನ ಭ್ರಷ್ಟಾಚಾರದಿಂದ ಕರ್ನಾಟಕದ ಮಾನವನ್ನು ದೇಶದಾದ್ಯಂತ ಹರಾಜು ಹಾಕಿದ್ದಾಯಿತು. ಈಗ ಮಾಟಮಂತ್ರಕ್ಕೆ ಹೆದರುವ ಮೂಲಕ ಇತರೆ ರಾಜ್ಯದವರು ನಮ್ಮ ರಾಜ್ಯದ ಬಗ್ಗೆ ಅಪಹಾಸ್ಯ ಮಾಡುವಂತಾಗಿದೆ. ಕರ್ನಾಟಕದ ರಾಜಕೀಯ ಇಂತಹ ಪಾತಾಳಕ್ಕೆ ತಲುಪಿರುವುದನ್ನು ಕಂಡು ಅವರೆಲ್ಲ ಗಹಗಹಿಸಿ ನಗುತ್ತಿದ್ದಾರೆ. ಇಂಟರ್‌ನೆಟ್‌ನಲ್ಲಂತೂ ಕರ್ನಾಟಕ ಇವತ್ತು ಹಲವಾರು ಜೋಕ್‌ಗಳಿಗೆ ಸಾಮಗ್ರಿಯನ್ನು ನೀಡುತ್ತಿದೆ.

ಇದೆಲ್ಲ ಇಷ್ಟೇ ಆಗಿದ್ದರೆ ಎಲ್ಲರೂ ಹೊಟ್ಟೆತುಂಬ ನಕ್ಕು ಸುಮ್ಮನಾಗಬಹುದಿತ್ತು. ಆದರೆ ಈ 'ಮಾಟಮಂತ್ರ'ದ ಪರಿಣಾಮದಿಂದ ರಕ್ಷಣೆ ಪಡೆದುಕೊಳ್ಳಲು ಯಡಿಯೂರಪ್ಪ ತನ್ನ ಫ್ಯಾಮಿಲಿಯ ಪೂಜಾರಿಯಾದ ಭಾನುಪ್ರಕಾಶ್ ಶರ್ಮ ಎಂಬಾತ ನೀಡಿರುವ ಸಲಹೆಗಳನ್ನು ಚಾಚೂತಪ್ಪದೆ ಪಾಲಿಸುತ್ತಿದ್ದಾರಂತೆ. ಶರ್ಮನೇ ಹಲವು ಪತ್ರಕರ್ತರಿಗೆ "ಅಮಾವಾಸ್ಯೆಯ ಮುನ್ನದ ಮೂರು ರಾತ್ರಿಗಳನ್ನು ನೆಲದ ಮೇಲೆ ನಗ್ನರಾಗಿ ಮಲಗಿಕೊಳ್ಳಬೇಕು ಎಂದು ನಾನು ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಹಾಗೆಯೇ ಫೆಬ್ರವರಿ 8ರಿಂದ 10ನೇ ತಾರೀಖಿನೊಳಗೆ ಯಾವುದಾದರೂ ನದಿ ತೀರದಲ್ಲಿ ನಗ್ನರಾಗಿ ಹನ್ನೆರಡು ಸೂರ್ಯ ನಮಸ್ಕಾರಗಳನ್ನು ಮಾಡಬೇಕೆಂದು ಅವರಿಗೆ ಸೂಚಿಸಿದ್ದೇನೆ" ಎಂದಿದ್ದಾನೆ. ಅದರಂತೆ ಬಲ್ಲವರ ಪ್ರಕಾರ ಯಡಿಯೂರಪ್ಪ ಈಗಾಗಲೇ ಮೂರು ರಾತ್ರಿಗಳನ್ನು ನೆಲದ ಮೇಲೆ ನಗ್ನರಾಗಿ ಕಳೆದಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಅದ್ಯಾವ ನದಿಯ ತೀರದಲ್ಲಿ ಸಂಪೂರ್ಣ ಬೆತ್ತಲಾಗಿ ಸೂರ್ಯ ನಮಸ್ಕಾರಗಳನ್ನು ಮಾಡುತ್ತಾರೆ ಎಂಬುದನ್ನು ಕಾದು 'ನೋಡು'ವ ಅಪಾಯವೂ ಈ ರಾಜ್ಯದ ಜನರ ಮುಂದಿದೆ.

ಶರ್ಮ ಪ್ರಕಾರ "ಯಡಿಯೂರಪ್ಪನವರದ್ದು ವೃಶ್ಚಿಕ ರಾಶಿಯಾದ್ದರಿಂದ ಸದ್ಯದಲ್ಲೇ ರಾಹು ಅವರ ಮನೆಯನ್ನು ಹೊಕ್ಕಲಿದ್ದಾನೆ. ಇದರಿಂದಾಗಿ ಯಡಿಯೂರಪ್ಪನವರ ವೈರಿಗಳಿಂದ ಅವರಿಗೆ ಅಪಾಯ ಆಗುವ ಸಾಧ್ಯತೆ ಇದೆ. ಜೊತೆಗೆ ಅವಮಾನ ಮತ್ತು ನಾಚಿಕೆ ಆಗುವ ಸಂಭವವೂ ಇದೆ. ಇದೆಲ್ಲವನ್ನು ನಿವಾರಿಸಿಕೊಳ್ಳಲು ಅವರು ನಗ್ನರಾಗಿ ಸೂರ್ಯ ನಮಸ್ಕಾರ ಮಾಡಬೇಕಿದೆ"ಯಂತೆ. ಈ ನಗ್ನ ಕಾರ್ಯಕ್ರಮಗಳ ನಂತರ ಎಂದಿನಂತೆ ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಸಹಸ್ರ ಚಂಡಿಕಾ ಯಾಗ ಮತ್ತು ಲಕ್ಷ ಮೋದಕ ಗಣಪತಿ ಹೋಮಗಳೂ ನಡೆಯಲಿವೆ.

ಅಂತೂ ಯಡಿಯೂರಪ್ಪನ ದೆಸೆಯಿಂದ ಆಧುನಿಕ ಕರ್ನಾಟಕ ರಾಜ್ಯವು ಹಿಂದೆ ಅಂಧ ಯುಗಕ್ಕೆ ಸರಿದಂತಾಗಿದೆ. ಯಾವತ್ತು ಈ ಬಿಜೆಪಿಗಳು ಅಧಿಕಾರ ಹಿಡಿದು ವಿಧಾನ ಸೌಧದಂತಹ ಜಾತ್ಯತೀತ ಕಟ್ಟಡದಲ್ಲೇ ಹೋಮ ಹವನಗಳನ್ನು ಮಾಡಿಸಿದರೋ ಅಂದಿಗೇ ಈ ರಾಜ್ಯಕ್ಕೆ ಕಾದಿದ್ದ ದುಷ್ಟ ದಿನಗಳ ಸೂಚನೆ ಸಿಕ್ಕಿತ್ತು. ಈಗ ಅದು ಯಡ್ಡಿಯ 'ಮಾಟಮಂತ್ರ' ಭಯದಿಂದ ಮತ್ತು ಪರಿಹಾರವಾಗಿ ನಗ್ನ ಆಚರಣೆಗಳಿಂದ ಜಗಜ್ಜಾಹೀರಾಗಿದೆಯಷ್ಟೇ.

ನಿಜವಾಗಲೂ ಈ ಮಾಟಮಂತ್ರ ಎಂಬುದೆಲ್ಲ ಎಷ್ಟು ಅಪಾಯಕಾರಿ ಅಥವಾ ಪರಿಣಾಮಕಾರಿ?

ಇದರ ಬಗ್ಗೆ ವಿಚಾರಿಸಲು ವಾಮಾಚಾರವನ್ನು ಹಲವು ದಶಕಗಳಿಂದ ವಿರೋಧಿಸಿಕೊಂಡು ಬಂದಿರುವ, ಇಂತಹ ಮೂಢನಂಬಿಕೆಗಳನ್ನು ಜನರ ಮನಸ್ಸಿನಿಂದ ಕಿತ್ತೊಗೆಯುವುದನ್ನೇ ತಮ್ಮ ಬದುಕಿನ ಮುಖ್ಯ ಗುರಿಯಾಗಿಸಿಕೊಂಡಿರುವ ಮಂಗಳೂರಿನ ಮೂಲದ ವಿಚಾರವಾದಿ ನರೇಂದ್ರ ನಾಯಕ್ ಎಂಬುವವರನ್ನು ಸಂಪರ್ಕಿಸಿದೆ.

"ಇದೆಲ್ಲ ಬುಲ್‌ಶಿಟ್. ನೂರಕ್ಕೆ ನೂರು ಪರ್‌ಸೆಂಟ್ ಬೋಗಸ್. ಮಾಟಮಂತ್ರ ಎಂಬುದೆಲ್ಲ ಅಪ್ಪಟ ನಾನ್‌ಸೆನ್ಸ್" ಎಂದರು ನರೇಂದ್ರ ನಾಯಕ್.

"ಮಾಟಮಂತ್ರ ಕುರಿತಂತೆ ನಿಮ್ಮ ಅನುಭವಗಳನ್ನು ಕುರಿತು ಹೇಳುತ್ತೀರಾ?" ಎಂದು ನಾನು ಕೇಳಿದೆ.

"ಒಮ್ಮೆ ಹೀಗಾಯ್ತು. ಕೆಲವು ವರ್ಷಗಳ ಹಿಂದೆ ಯಾರೇ ಆಗಲಿ ಮಾಟಮಂತ್ರದ ಮೂಲಕ ನನ್ನ ಜೀವವನ್ನೇ ತೆಗೆದರೆ ನಾನು ನನ್ನ ಆಸ್ತಿಯನ್ನೆಲ್ಲ ಅವರಿಗೆ ದಾನ ಮಾಡುತ್ತೇನೆ ಎಂದು ಚಾಲೆಂಜ್ ಮಾಡಿದ್ದೆ. ಆಗ ಕೇರಳದ ಒಬ್ಬ ಆಮೀರ್ ರಾಜ ಎಂಬಾತ ನನ್ನ ಚಾಲೆಂಜ್ ಅನ್ನು ಸ್ವೀಕರಿಸುವುದಾಗಿ ಘೋಷಿಸಿದ. ಒಂದು ದಿನ ಆಮೀರ್ ರಾಜನಿಗೆ ನನ್ನ ಇಬ್ಬರು ಶಿಷ್ಯಂದಿರೇ ಸವಾಲು ಹಾಕಿದರು. ಒಂದು ಬಹಿರಂಗ ಸಭೆಯಲ್ಲಿ ನಮ್ಮಿಬ್ಬರಲ್ಲಿ ಒಬ್ಬರ ಜೀವವನ್ನಾದರೂ ಮಾಟಮಂತ್ರದ ಮೂಲಕ ತೆಗೆದು ಹಾಕು ನೋಡುವ ಅಂದರು. ಆದರೆ ಆಮೀರ್ ರಾಜ ಎಷ್ಟೇ ಪ್ರಯತ್ನಿಸಿದರೂ ಅವರಿಬ್ಬರಿಗೂ ಏನೂ ಆಗಲಿಲ್ಲ. ಆನಂತರ ಒಮ್ಮೆ ನಾನೇ ಕೇರಳಕ್ಕೆ ಹೋಗಿದ್ದಾಗ ಆಮೀರ್ ರಾಜನ ಬಗ್ಗೆ ಸಭೆಯಲ್ಲಿ ಹೇಳುತ್ತಿದ್ದಾಗ ಅಲ್ಲಿದ್ದವರು 'ಆಮೀರ್ ರಾಜಾ ಇಲ್ಲೇ ಇದ್ದಾನೆ' ಎಂದರು. ಆತನನ್ನು ವೇದಿಕೆಗೆ ಕರೆದ ನಾನು ಮತ್ತೊಮ್ಮೆ ಆತನಿಗೆ ಸವಾಲು ಹಾಕಿದೆ. ಆತ ಏನೇನನ್ನೋ ಮಾತನಾಡಲಾರಂಭಿಸಿದ. ಅವರ ಅಸಂಬದ್ಧ ಮಾತುಕೇಳಿ ಜನರಿಗೆ ರೇಗಿಹೋಯಿತು. ಹಲವರು ವೇದಿಕೆಯನ್ನೇರಿ ಅವನನ್ನು ಥಳಿಸಲಾರಂಭಿಸಿದರು. ಅಷ್ಟು ಹೊತ್ತಿಗೆ ಹಲವಾರು ಜನ ಓಡೋಡಿ ಬಂದು 'ಅವನಿಗೆ ಹೊಡೆಯಬೇಡಿ, ಅವನು ಮಾನಸಿಕ ರೋಗಿ' ಎಂದು ಬೇಡಿಕೊಂಡರು. ನೋಡಿ ಮಾಟಮಂತ್ರವಾದಿಗಳು ಒಂದು ರೀತಿಯಲ್ಲಿ ಆಮೀರ್ ರಾಜಾನ ತರಹವೇ!!" ಎಂದರು ನಾಯಕ್.

"ಅವನೇನೋ ಮಾನಸಿಕ ರೋಗಿಯಾಗಿದ್ದ. ಆದರೆ ನಿಜವಾಗಲೂ ಮಾಟಮಂತ್ರ ಮಾಡುವುದಾಗಿ ಹಲವು ಜನ ಹೇಳಿಕೊಳ್ಳುತ್ತಾರಲ್ಲ, ಅಂತಹವರ ಬಗ್ಗೆ ನೀವು ಏನನ್ನುತ್ತೀರಿ?" ಎಂದು ನಾನು ಕೇಳಿದೆ.

"ನೋಡಿ, ನಾನು ಹಲವಾರು ವರ್ಷಗಳಿಂದ ಈ ವಾಮಾಚಾರಿಗಳಿಗೆ, ಮಾಟಮಂತ್ರವಾದಿಗಳಿಗೆ ಒಂದು ಸವಾಲನ್ನು ಹಾಕಿದ್ದೇನೆ. ಅವರಲ್ಲಿ ಯಾರಾದರೂ ತಮ್ಮ ವಿದ್ಯೆಯನ್ನು ಪ್ರಯೋಗಿಸಿ ನನಗೆ ತೋರಿಸಲಿ. ನನ್ನ ಜೀವವನ್ನೇ ತೆಗೆದುಕೊಳ್ಳಬೇಕಿಲ್ಲ. ನಾನು ನನ್ನ ಅಂಗೈ ಮೇಲೆ ಮೂರು ಕೂದಲು ಚೂರುಗಳನ್ನು ಇಟ್ಟುಕೊಂಡು ಅದರ ಸುತ್ತ ಬಾಲ್ ಪೆನ್ನಿನಲ್ಲಿ ಒಂದು ಚಕ್ರವನ್ನು ಬರೆಯುತ್ತೇನೆ. ಅವರು ನನ್ನಿಂದ ಕೇವಲ ಹತ್ತು ಅಡಿ ದೂರ ನಿಂತು ನನ್ನ ಅಂಗೈಯಲ್ಲಿನ ಕೂದಲು ಚೂರುಗಳನ್ನು ಅಲುಗಾಡಿಸಲಿ ಸಾಕು. ನಾನು ನನ್ನ ಎಲ್ಲಾ ಆಸ್ತಿಯನ್ನು ಅವರಿಗೆ ನೀಡುತ್ತೇನೆ. ಆದರೆ ಇಲ್ಲಿಯತನಕ ಯಾವ ವಾಮಾಚಾರಿಯೂ, ಮಾಟಮಂತ್ರವಾದಿಯೂ ನನ್ನ ಈ ಸವಾಲನ್ನು ಸ್ವೀಕರಿಸುವ ಧೈರ್ಯವನ್ನು ತೋರಿಸಿಲ್ಲ. ಅಂದರೆ, ತಮ್ಮ ಈ 'ವಿದ್ಯೆ'ಯಿಂದ ಮಾಟಮಂತ್ರವಾದಿಗಳು ಯಾರದ್ದಾದರೂ ಪ್ರಾಣ ತೆಗೆಯುವುದಿರಲಿ ಅವರಿಂದ ಒಂದು ಚೂರು ಕೂದಲನ್ನು ಅಲುಗಾಡಿಸಲು ಆಗುವುದಿಲ್ಲ ಎಂದೇ ಅರ್ಥ. ಆದರೂ ಇಂತಹ ಜನರ 'ಶಕ್ತಿ'ಯನ್ನು ನಂಬಿ ತನ್ನ ಜೀವಕ್ಕೇ ಬೆದರಿಕೆ ಇದೆ ಎಂದು ಓರ್ವ ಮುಖ್ಯಮಂತ್ರಿ ಹೇಳುತ್ತಾನೆಂದರೆ ಆತನಿಗಿಂತ ದೊಡ್ಡ ಮೂರ್ಖ ಇನ್ನೊಬ್ಬನಿಲ್ಲ" ಎಂದರು ನಾಯಕ್.

ಅಜ್ಞಾನಿ ಯಡಿಯೂರಪ್ಪ ಮಾಟಮಂತ್ರದಂತಹ ಮೂಢ ಆಚರಣೆಗಳಲ್ಲಿ ನಂಬಿಕೆ ಇಟ್ಟಿರುವುದರಿಂದಾಗಿ ಹಲವಾರು ತರಹದ ಅಪಾಯಗಳು ಮುಂದೆ ಆಗಬಹುದು. ಉದಾಹರಣೆಗೆ, ಯಡ್ಡಿಯಂತೆಯೇ ಈ ರಾಜ್ಯದ ಹಲವು ಮಂದಿ ವಾಮಾಚಾರಗಳಲ್ಲಿ ನಂಬಿಕೆಯನ್ನು ಬೆಳೆಸಿಕೊಳ್ಳಬಹುದು. ಅದಕ್ಕಿಂತ ಅನಾಹುತಕಾರಿಯಾದದ್ದು, ಯಡ್ಡಿಯೇ ಈ ರಾಜ್ಯದ ಆಡಳಿತವನ್ನು ಮಾಟ ಮಂತ್ರವಾದಿಗಳ ಆದೇಶದಂತೆ ನಡೆಸುವುದು ಅಥವಾ ಇಡೀ ಸರ್ಕಾರವನ್ನೇ ಆ ಸೋಗಲಾಡಿಗಳ ಪಾದಗಳಿಗೆ ಅರ್ಪಿಸುವುದು.

ಯಡ್ಡಿ ಮೊನ್ನೆ ಆಡಿರುವ ಮಾತುಗಳು ಮತ್ತು ಬಲ್ಲವರ ಪ್ರಕಾರ ಪಾಲಿಸಿರುವ ಆಚರಣೆಗಳನ್ನು ಗಣನೆಗೆ ತೆಗೆದುಕೊಂಡರೆ ಅಂತಹ ದಿನ ಬಂದರೂ ಬರಬಹುದು.

ಆದ್ದರಿಂದ ಯಾರಾದರೂ ಕಾಳಜಿ ವಹಿಸಿ ಯಡ್ಡಿ ವಿರುದ್ಧ ತುರ್ತಾಗಿ ಒಂದು ದೂರನ್ನು ದಾಖಲಿಸಬೇಕಿದೆ. ನಮ್ಮ ಸಂವಿಧಾನದ ಸೆಕ್ಷನ್ 51ರ ಎ(ಎಚ್) ಪ್ರಕಾರ ನಮ್ಮ ಸಮಾಜದಲ್ಲಿ ವೈಜ್ಞಾನಿಕ ಮನೋಭಾವ, ಮಾನವತಾವಾದ ಮತ್ತು ಪ್ರಶ್ನಿಸುವ ಮೂಲಕ ಸುಧಾರಣೆಯನ್ನು ಹೆಚ್ಚಿಸುವುದು ಎಲ್ಲ ಪ್ರಜೆಗಳ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ ಯಡಿಯೂರಪ್ಪ ಮಾಟಮಂತ್ರ, ವಾಮಾಚಾರದಂತಹ ಮೂಢ ಆಚರಣೆ ಗಳನ್ನು ನಂಬುವ ಮೂಲಕ ನಮ್ಮ ಸಂವಿಧಾನಕ್ಕೇ ದ್ರೋಹ ಬಗೆದಿದ್ದಾರೆ. ಆದ್ದರಿಂದ ಯಡಿಯೂರಪ್ಪ ಈ ರಾಜ್ಯದ ಮುಖ್ಯಮಂತ್ರಿ ಆಗಿರಲು ಅಯೋಗ್ಯ ಎಂಬುದನ್ನು ಜನರ ಮುಂದೆ ಸಾಬೀತುಪಡಿಸಬೇಕಿದೆ. ●

ಸಂದೇಶ ಪ್ರಶಸ್ತಿ


ಮಂಗಳೂರಿನಲ್ಲಿರುವ 'ಸಂದೇಶ' ಎಂಬ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಂಸ್ಥೆಯು 1991ರಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವವರನ್ನು ಗುರುತಿಸಿ ಅವರಿಗೆ 'ಸಂದೇಶ ಪ್ರಶಸ್ತಿ'ಗಳನ್ನು ಕೊಡಲಾರಂಭಿಸಿತು. ಆಗ ಸಂದೇಶ ಸಂಸ್ಥೆಯು ಪತ್ರಿಕೋದ್ಯಮ ವಲಯದಲ್ಲಿ ಅಪೂರ್ವ ಕೊಡುಗೆ ನೀಡಿದ ಪಿ.ಲಂಕೇಶರಿಗೆ ಪ್ರಶಸ್ತಿಯನ್ನು ನೀಡಿತ್ತು.

ಈಗ ಇಪ್ಪತ್ತು ವರ್ಷಗಳ ನಂತರ ಸಂದೇಶ ಸಂಸ್ಥೆಯು ಅದೇ ಪ್ರಶಸ್ತಿಗೆ ಆಯ್ಕೆ ಮಾಡಿಕೊಂಡಿರುವುದು ಲಂಕೇಶರ ಪುತ್ರಿ ಮತ್ತು ನಮ್ಮ ತಂಡದ ಕ್ಯಾಪ್ಟನ್ ಗೌರಿ ಲಂಕೇಶರನ್ನು. ಇದು ಸಹಜವಾಗಿಯೇ ನಮಗೆ ಸಂತೋಷ ಮತ್ತು ಹೆಮ್ಮೆ ತಂದಿದೆ.

'ಸಂದೇಶ ಪ್ರಶಸ್ತಿ'ಯು ನಮ್ಮ ಇಡೀ ತಂಡದ ಮತ್ತು ನಮ್ಮ ಓದುಗ ಮಿತ್ರರ ಸಾಮಾಜಿಕ ಕಾಳಜಿಗೆ ಸಂದಿರುವ ಪ್ರಶಸ್ತಿ ಎಂದೇ ನಾವು ಭಾವಿಸುತ್ತೇವೆ.

• ಲಂಕೇಶ್ ಬಳಗ

ಭೀಮಾಯಣ ಪುಸ್ತಕ ಬಿಡುಗಡೆ



...ಭೀಮರಾವ್ ರಾಮಜಿ ಅಂಬೇಡ್ಕರ್ ಅವರ ಜೀವನಗಾಥೆಯನ್ನು 'Bhimayana-Experiences of ...touchability' ಎಂಬ ಇಂಗ್ಲಿಷ್ ಪುಸ್ತಕವನ್ನು ದೆಹಲಿಯ ನವಯಾನ ಸಂಸ್ಥೆಯು ಪ್ರಕಟಿಸಿದೆ. ಈ ಪುಸ್ತಕಕ್ಕೆ ಪ್ರಧಾನ್ ...ಂಡ್ ಆದಿವಾಸಿ ಸಮುದಾಯದ ದುರ್ಗಾಬಾಯಿ ವ್ಯಾಮ್ ಮತ್ತು ಸುಭಾಷ್ ವ್ಯಾಮ್ ಎಂಬ ಕಲಾವಿದ ದಂಪತಿಗಳು ...ದ್ಭುತವಾದ ಕಲಾಕೃತಿಗಳನ್ನು ರಚಿಸಿದ್ದಾರೆ. ಲಂಕೇಶ್ ಪ್ರಕಾಶನದ ಸಹಯೋಗದೊಂದಿಗೆ ನವಯಾನ ಸಂಸ್ಥೆ ಈ ಪುಸ್ತಕದ ...ಡುಗಡೆ ಕಾರ್ಯಕ್ರಮವನ್ನು ಆಯೋಜಿಸಿದೆ.

ಕಾರ್ಯಕ್ರಮದಲ್ಲಿ ಭಾಗವಹಿಸುವವರು

...ಹಿರಿಯ ಸಾಹಿತಿ ಯು.ಆರ್. ಅನಂತಮೂರ್ತಿ

...ಕವಯಿತ್ರಿ ದು. ಸರಸ್ವತಿ

...ಕಲಾ ಇತಿಹಾಸತಜ್ಞೆ ಅನ್ನಪೂರ್ಣ ಗಾರಿಮೆಲ್ಲಾ

...ಸಮುದಾಯ ಹಾಗು ಜನಮನದಾಟ ಸಂಘಟನೆಯ ರಂಗಕಲಾವಿದ ಗಣೇಶ್

...ಕಲಾವಿದರಾದ ದುರ್ಗಾಬಾಯಿ ವ್ಯಾಮ್ ಮತ್ತು ಸುಭಾಷ್ ವ್ಯಾಮ್

...ಮತ್ತು ಕೃತಿಯ ಸಹ ಬರಹಗಾರ ಹಾಗು ಪ್ರಕಾಶಕ ಎಸ್. ಆನಂದ್


ದಿನಾಂಕ: ಫೆಬ್ರವರಿ 7, 2011 ಸಂಜೆ 6:30ಕ್ಕೆ
ಸ್ಥಳ: ಫಿರೋಜ್ ಎಸ್ಟೇಟ್ ಟೆರೇಸ್ ಗಾರ್ಡನ್ಸ್,
74, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು
ಎಲ್ಲರೂ ಬನ್ನಿ, ನಿಮ್ಮ ಮಿತ್ರರನ್ನೂ ಕರೆ ತನ್ನಿ

77ನೇ ಸಾಹಿತ್ಯ ಸಮ್ಮೇಳನ

ಜಾತ್ರೆ ಬಯಲಲ್ಲೊಂದಿಷ್ಟು ಅನಾಥ ಪ್ರಶ್ನೆಗಳು!

ಅಕ್ಷರ ಜಗತ್ತು ಜಾತ್ರೆಯಂತಹದೊಂದು ಸಂಭ್ರಮಕ್ಕೆ ತೆರೆದುಕೊಂಡಿದೆ. ಬರೀಯ ಜಾತ್ರೆ-ಜಂಗುಳಿ ಮತ್ತು ತೋರಿಕೆಗಳನ್ನೇ ಆನಂದಿಸುವ ಮಂದಿಗೆ ಯಾವುದೇ ತೊಡಕುಗಳು ಕಾಣಿಸುತ್ತಿಲ್ಲ. ಆದರೆ ಸಾಹಿತ್ಯ ಸಮ್ಮೇಳನ ಹುಟ್ಟು ಪಡೆದ ಹಿಂದಿನ ಆಶಯಗಳು, ಅದು ಸದಾಕಾಲ ಒಳಗೊಂಡಿರಲೇ ಬೇಕಾದ ಮೌಲ್ಯಗಳ ಅರಿವಿರುವ ಮಂದಿಗೆ ಖಂಡಿತವಾಗಿಯೂ ಹಲವಾರು ತಾಕಲಾಟಗಳು, ಕೊರತೆ-ತೋರಿಕೆಗಳು ಕಣ್ಣಿಗೆ ರಾಚುತ್ತಿವೆ.

ಸಮ್ಮೇಳನಕ್ಕೆ ದಿನ ನಿಗದಿ ಮಾಡೋ ಕಸರತ್ತು ಆರಂಭವಾದಂದಿನಿಂದ ಕಡೇ ಕ್ಷಣದ ನಿರ್ಧಾರಗಳ ತನಕ ಎಲ್ಲವನ್ನೂ ಒಮ್ಮೆ ನೆನಪಿಸಿಕೊಳ್ಳಿ. ಈ ಬಗ್ಗೆ ಹೊರಬಿದ್ದ ಮಾತುಗಳಲ್ಲಿ, ನಡವಳಿಕೆಗಳಲ್ಲಿ ಎಲ್ಲಾದರೂ ಕನ್ನಡತನದ ಗಂಧ ಗೋಚರಿಸಿದೆಯಾ? ಮೊದಲು ಚರ್ಚೆಗೆ ಬಂದದ್ದೇ ಊಟದ ವಿಚಾರ. ಈ ಸಾರಿ ಅದು ಪಕ್ಕಾ ಅನ್ನುವಂಥ ಆಶ್ವಾಸನೆ. ಯಾವ್ಯಾವ ವೆರೈಟಿ ಭೋಜನವನ್ನು ಎಷ್ಟೆಷ್ಟು ಮಂದಿ ತಯಾರು ಮಾಡುತ್ತಾರೆಂಬ ಸವಿವರ ಮಾಹಿತಿ! ಇದೆಲ್ಲದರ ನಡುವೆ ಚರ್ಚೆಯಾಗಲೇಬೇಕಾದ ಅದೆಷ್ಟೋ ವಿಚಾರಗಳು ಮುಕ್ಕಾಗಿವೆ.



ಈ ಬಾರಿಯ ಸಮ್ಮೇಳನ ಯಾವ್ಯಾವ ಮರ್ಜಿಗಳಿಗೆ ಬಿದ್ದಿದೆ, ಇದರಿಂದಲೇ ಎಷ್ಟು ಪೇಲವವಾಗಿವೆ ಎಂಬುದು ಆಹ್ವಾನ ಪತ್ರಿಕೆ ನೋಡಿದ ಪ್ರತಿಯೊಬ್ಬರಿಗೂ ಮನದಟ್ಟಾಗುವಂತಿದೆ. ಅದು ಕಸಾಪದೊಳಗಿನ ಆಲೋಚನಾ ಕ್ರಮ ತಟಸ್ಥಗೊಂಡಿದ್ದಕ್ಕೆ ಪುರಾವೆಯಂತೆಯೂ ಇದೆ. ಉದ್ಘಾಟನೆ, ಭಾಷಣ, ಒಂದಷ್ಟು ಮಂದಿಗೆ ಸನ್ಮಾನ-ಹೀಗೆ ಆಗತ್ಯ ಕಾರ್ಯಕ್ರಮಗಳ ಯಾಂತ್ರಿಕ ಪಟ್ಟಿ. ಆ ಬಹುತೇಕವು ಕೆಲಸಕ್ಕೆ ಬಾರದ 'ತವಕ'- 'ತಲ್ಲಣ'- 'ಒಲವು'ಗಳಿಂದಲೇ ತುಂಬಿಹೋಗಿದೆ. ಇದು ಸಮ್ಮೇಳನ ಎಷ್ಟು 'ಅಭೂತಪೂರ್ವ'ವಾಗಿ ನಡೆಯುತ್ತದೆಯೆಂಬ ಸೂಚನೆಯನ್ನು ಪೂರ್ವಭಾವಿಯಾಗೇ ಕೊಟ್ಟುಬಿಟ್ಟಿದೆ.

ಇಡೀ ಕಾರ್ಯಕ್ರಮ ಪಟ್ಟಿಯನ್ನು ಯಾವ ಕೋನದಿಂದ ನೋಡಿದರೂ ಕರ್ನಾಟಕವನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳು, ಸಾಹಿತ್ಯ ಜಗತ್ತಿನದೇ ತಲ್ಲಣಗಳು ಮುಂತಾದ ವಿಚಾರಗಳ ಬಗ್ಗೆ ಪ್ರಸ್ತಾಪಗಳೇ ಇಲ್ಲ. ವಿವಿಧ ವಲಯಗಳಲ್ಲಿನ ಭ್ರಷ್ಟಾಚಾರವೆಂಬುದು ಇಡೀ ವ್ಯವಸ್ಥೆಯನ್ನು ಹಿಂಡಿ ಹಾಕುತ್ತಿದೆ. ಗಣಿ ಲೂಟಿಯಂತೂ ಗಡಿಯನ್ನೇ ಬದಲಿಸಿ ಗೆಬರುವ ಹಂತಕ್ಕೆ ತಲುಪಿದೆ. ಧರ್ಮ-ಜಾತಿಗಳು ಮನುಷ್ಯ ಸಂಬಂಧಗಳ ನಡುವೆ ಕಿಲುಬು ಹತ್ತಿಸುತ್ತಿವ. ಆಡಿಗಡಿಗೆ ಗೌಜೆಬ್ಬಿಸುತ್ತಿದ್ದ 'ಹಿಂದೂತ್ವ'ದ ಅಮಲು ಭಯೋತ್ಪಾದನೆ ನಡೆಸೋ ಹಂತಕ್ಕೆ ಬೆಳೆದುನಿಂತಿದೆ. ಇವುಗಳೆಲ್ಲ ಸಮ್ಮೇಳನದ ಚರ್ಚಾ ಗೋಷ್ಠಿಗಳಲ್ಲಿ ಚರ್ಚಾಯೋಗ್ಯ ವಿಚಾರಗಳಲ್ಲವೆ?


ಮೇಲ್ಕಂಡ ವಿಚಾರಗಳೆಲ್ಲ ಪ್ರಶ್ನೆಗಳಾಗಿ ಕಾಡಲು ಕಾರಣವಿದೆ. ಯಾಕೆಂದರೆ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟು ಪಡೆದದ್ದು ಹಾಗೂ ಸಮ್ಮೇಳನಗಳು ರೂಪು ತಳೆದುದರ ಉದ್ದೇಶಗಳೇ ಆ ರೀತಿಯಿವೆ. ಕರ್ನಾಟಕ ಏಕೀಕರಣ, ಕನ್ನಡತನದ ನಿರಂತರ ಪೊರೆಯುವಿಕೆಯೇ ಮೊದಲಾದ ಮಹತ್ತರ ಅಂಶಗಳು ಸಮ್ಮೇಳನಗಳ ನೈಜ ಉದ್ದೇಶದಲ್ಲಿ ಅಡಕವಾಗಿವೆ. ಸಾಹಿತ್ಯ ಮಾತ್ರವಲ್ಲದೆ ಅದು ರೂಪು ತಳೆದ ವಾತಾವರಣ, ಅದರ ಸುತ್ತಲ ಸ್ಥಿತಿಗತಿಗಳ ಬಗ್ಗೆಯೂ ಚರ್ಚೆಯಾಗುವಂತೆ ನೋಡಿಕೊಳ್ಳುವುದು ಸಮ್ಮೇಳನ ಸಂಘಟಕರ ಜವಾಬ್ದಾರಿ.

ಇದಕ್ಕೆಲ್ಲ ಸಿನಿಕ ಮಂದಿ 'ಅದೆಲ್ಲ ಇದ್ದದ್ದೆ ಬಿಡ್ರಿ, ಸಾಹಿತ್ಯಕ್ಕೂ ಅದಕ್ಕೂ ಏನು ಸಂಬಂಧ' ಅನ್ನಬಹುದೇನೋ. ಇದು ಶುದ್ಧ ಅವಿವೇಕ. ಯಾಕೆಂದರೆ ಈ ಸಮಾಜದ ಎಲ್ಲಾ ಸ್ಥಿತಿಗತಿಗಳ ಭೂಮಿಕೆಯಲ್ಲೇ-ಸಾಹಿತ್ಯವೆಂಬುದು ಜೀವ ತಳೆಯುತ್ತದೆ. ಪ್ರತೀ ಮನುಷ್ಯನ ಬದುಕಿಗೂ, ಅದರ ತಲ್ಲಣ-ತಾಕಲಾಟಗಳಿಗೂ ಸಾಹಿತ್ಯಕ್ಕೂ ನೇರ ನಂಟಿದೆ. ವಿಷಯ ಹೀಗಿರುವಾಗ ಸಾಹಿತ್ಯ ಜಾತ್ರೆಯಲ್ಲಿ ಅಂಥವುಗಳಿಗೆ ಆದ್ಯತೆ ನೀಡದಿದ್ದರೆ ಹೇಗೆ? ಸದ್ಯ ಬಹುತೇಕರಿಗೆ ಈ ಬಾರಿಯ ಸಮ್ಮೇಳನದ ಕುರಿತು ಇಂತಹುದೊಂದು ತಕರಾರಿದೆ. ಜೊತೆಗೆ ಹಲವಾರು ಗುಮಾನಿಗಳೂ ಇವೆ.

ಹಣಕಾಸಿನ ವಿಚಾರದ ವಿನಯ ಗುಲಾಮಗಿರಿಯಾಗಿ ಬದಲಾದರೆ, ಭಟ್ಟಂಗಿತನಗಳಿಗೆ ಪ್ರೇರೇಪಿಸಿದರೆ ಬಲು ಕಷ್ಟ. ಈ ವಿಚಾರವನ್ನಿಲ್ಲಿ ಯಾಕೆ ಪ್ರಸ್ತಾಪಿಸಬೇಕಾಗಿದೆ ಯೆಂದರೆ, ಸರ್ಕಾರದ ಮರ್ಜಿಯ ಫಲವಾಗಿಯೇ ಮೂಲ ಭೂತ ಸಮಸ್ಯೆಗಳನ್ನು ಗೋಷ್ಠಿಗಳಿಂದ ದೂರವಿಡಲಾಗಿದೆ ಅಂತೊಂದು ಆರೋಪ ಸಾರ್ವಜನಿಕದಾಗಿ ಹರಿದಾಡ ಹತ್ತಿದೆ. ಅದನ್ನು ಸದ್ಯ ತಳ್ಳಿ ಹಾಕಲಾಗುತ್ತಿಲ್ಲ. ಯಾಕೆಂದರೆ, ಪರಿಸ್ಥಿತಿಗಳು ಅದಕ್ಕೆ ಪೂರಕವಾಗಿವೆ. ಭ್ರಷ್ಟಾಚಾರದ ಬಗ್ಗೆ ಗೋಷ್ಠಿ ನಡೆಸಿದರೆ ಅದರ ಕಾವು ಬಿಜೆಪಿ ಸರ್ಕಾರದ ಬುಡಕ್ಕೇ ತಗಲುವುದು ನಿಶ್ಚಿತ. ಇನ್ನು ಮೂಲಭೂತವಾದದ ಭಯೋತ್ಪಾದನೆಯ ಬಗ್ಗೆ ಚರ್ಚೆ ನಡೆಸಿದರೆ ಅದೂ ಕೂಡ ಬಿಜೆಪಿಗೇ ಸುತ್ತಿಕೊಳ್ಳುತ್ತದೆ. ಸರ್ಕಾರದ ಕಡೆಯಿಂದ ಪಡೆದ ಹಣದ ನೆರವು ಅದನ್ನೆಲ್ಲಾ ತೆಪ್ಪಗಾಗಿಸಿದೆಯಾ ಎಂಬುದು ಗುಮಾನಿ.

ಇನ್ನುಳಿದಂತೆ ಘೋಷಿತ ಗೋಷ್ಠಿಗಳ ಬಗ್ಗೆ ಸಾಹಿತ್ಯಕ ವಲಯದಲ್ಲೇ ಅಪಸ್ವರಗಳೆದ್ದಿವೆ. ಚಂದ್ರಶೇಖರ ಪಾಟೀಲರು ಬಹಿರಂಗವಾಗೇ ಇದರ ವಿರುದ್ಧ ದನಿಯೆತ್ತಿದ್ದೂ ನಡೆದಿದೆ. ಜಾತೀಯತೆ, ಕೋಮುವಾದ, ನರಬಲಿಯ, ಮಲ ಹೋರುವಂಥ ಅಮಾನವೀಯ ಪದ್ಧತಿಗಳ ಬಗ್ಗೆ ಚರ್ಚೆ ಮಾಡದಿರುವುದು ಆಳೋ ವರ್ಗದ ಓಲೈಕೆಯ ಕ್ರಮ ಅಂತಲೇ ಚಂಪಾ ಕುಟುಕಿದ್ದಾರೆ. ಈ ರೀತಿಯ ತುರ್ತಿನ ವಿಚಾರಗಳನ್ನು ಚರ್ಚೆಯಿಂದ ಹೊರಗಿಟ್ಟಿರುವುದಕ್ಕೆ ಚಂಪಾ ಹೇಳಿದ ಕಾರಣದ ಹೊರತಾಗಿ ಬೇರೇನೂ ಕಾಣಿಸುತ್ತಿಲ್ಲ.

ಈ ವಿಚಾರಕ್ಕೆ ಇಷ್ಟೆಲ್ಲಾ ಒತ್ತು ಕೊಟ್ಟು, ತಲೆ ಕೆಡಿಸಿಕೊಳ್ಳಲು ಕಾರಣವಿದೆ. ಸಾಹಿತ್ಯಕ ವಾತಾವರಣದಲ್ಲಿ ಹುಟ್ಟುವ ಅಭಿಪ್ರಾಯಗಳಿಗೆ, ಹೊರಡುವ ನಿರ್ಧಾರಗಳಿಗೆ ಜನಸಾಮಾನ್ಯರ ವಲಯದಲ್ಲೂ ಗೌರವಾದಾರಗಳಿವೆ. ಕೋಮುವಾದ, ಮಲಹೊರುವ ಪದ್ಧತಿಯಂಥ ಅನಿಷ್ಟಗಳ ಬಗ್ಗೆ ವಿವಿಧ ರಾಜಕೀಯ ಪಕ್ಷಗಳು ಬೇಕಾದಂತೆ ಚರ್ಚೆ ನಡೆಸಿವೆ. ಆಯಾ ಸಿದ್ಧಾಂತ, ಅಜೆಂಡಾಗಳಿಗನುಗುಣವಾಗಿ ಅಭಿಪ್ರಾಯಗಳೂ ಹೊಮ್ಮಿವೆ. ಆದರೆ ಅದರ ನಡುವೆ ಅಪ್ಪಿತಪ್ಪಿ ಸತ್ಯ ಹೊರಬಂದರೂ ಜನರದನ್ನು ರಾಜಕೀಯ ಮನಸ್ಥಿತಿಯಿಂದಲೇ ಎದುರುಗೊಳ್ಳೋ ಸಾಧ್ಯತೆಗಳು ಅಧಿಕ. ಇಂಥಾ ಸಂದರ್ಭದಲ್ಲಿ ಸತ್ಯವನ್ನು ಪರಿಣಾಮಕಾರಿಯಾಗಿ ಮನದಟ್ಟು ಮಾಡಿಸೋ ಜವಾಬ್ದಾರಿ ಸಾಹಿತ್ಯ ಸಮ್ಮೇಳನಗಳ ಮೇಲಿದೆ.



ಈ ಬಾರಿ ಇಂತಹುದೊಂದು ಪ್ರಯತ್ನ ನಡೆಸಿದ್ದಿದ್ದರೆ, ಭ್ರಷ್ಟಾಚಾರ ಮತ್ತು ಕೋಮುವಾದದ ಬಗೆಗಿಗ ಚರ್ಚೆಗಳಾಗಿದ್ದರೆ ಅದು ಸರ್ಕಾರದ ವಿರುದ್ಧದ ಅಲೆಯೇರಲು ಶಕ್ತಿದಾಯಕ ಇಂಧನವಾಗುತ್ತಿತ್ತು. 'ನೀನು ಕಳ್ಳತನ ಮಾಡಿದ್ದೀಯಾ' ಅಂದರೆ 'ಯಾಕೆ ಅವ್ರು ಮಾಡಿಲ್ವಾ' ಅಂತ ಮರುಪ್ರಶ್ನೆ ಎಸೆಯುವ ಚಾಳಿ ಯಡಿಯೂರಪ್ಪನಿಂದ ಎಲ್ಲೆಡೆ ಹರಡುತ್ತಿರುವ ಸನ್ನಿವೇಶವಿದು. ಈ ಸಂದರ್ಭದಲ್ಲಿ ಅನ್ಯಾಯದ ವಿರುದ್ಧ ಜನಸಾಮಾನ್ಯರು ಪ್ರತಿಭಟಿಸುವಂತೆ ಮಾಡೋ ಕೆಲಸ ಸಮ್ಮೇಳನ ಸಂಘಟಕರಿಂದ ಆಗದಿರುವುದು ವಿಪರ್ಯಾಸ. ಇದನ್ನು ಆಳೋ ಮಂದಿಯ ಮರ್ಜಿಯೆನ್ನದೆ ಬೇರೇನೂ ಹೇಳಲಾಗುವುದಿಲ್ಲ.

ಇಂಥ ಶರಣಾಗತ ಸ್ಥಿತಿಗೆ ಕಸಾಪದ ಖಜಾಂಚಿ ಪುಂಡಲೀಕ ಹಾಲಂಬಿಯೇ ಪ್ರಮುಖ ಕಾರಣ ಅನ್ನುವವರಿದ್ದಾರೆ. ಮೂಲತಃ ಆರೆಸ್ಸೆಸ್ ಆತ್ಮವಾದ ಹಾಲಂಬಿಯನ್ನು ಖಜಾಂಚಿಯಾಗಿ ಕರೆತಂದದ್ದು ಹಿಂದಿನ ಅಧ್ಯಕ್ಷ ಹರಿಕೃಷ್ಣ ಪುನರೂರು. ಹಾಗೆ ಬಂದ ಹಾಲಂಬಿ ಇದೀಗ ನಲ್ಲೂರು ಪ್ರಸಾದ್‌ರನ್ನೂ ಹಿಂದಿಕ್ಕಿ ಕಸಾಪದ ಸೂತ್ರ ಹಿಡಿದಿದ್ದಾರೆಂಬುದು ಸಹಿಸಲಸಾಧ್ಯ ವಿಚಾರ. ಇದರ ಬಲದಿಂದಲೇ ಗೋಷ್ಠಿಗಳಲ್ಲೊಂದು ಸ್ಮಶಾನ ಸದೃಶ್ಯ ಸ್ಥಿತಿ ನೆಲೆಸಿದೆ.

ಇನ್ನೂ ಗಮನೀಯ ಅಂಶವೆಂದರೆ, ಜನಸಾಮಾನ್ಯರನ್ನು ಒಳಗೊಂಡು ಇದು ಎಲ್ಲರ ಹಬ್ಬ ಎಂಬರ್ಥದ ಮನಸ್ಥಿತಿ ಬೆಳೆಸುವ ಕೆಲಸ ಸಂಘಟಕರಿಂದ ನಡೆದಿಲ್ಲ. ಹೆಚ್ಚಿನ ಪ್ರಚಾರವಿಲ್ಲದೆ ತಮ್ಮ ಪಾಡಿಗೆ ತಾವು ಕನ್ನಡ ಸೇವೆ ಮಾಡುತ್ತಿರುವ ಸಂಘಟನೆಗಳನ್ನು ನಿರ್ಲಕ್ಷಿಸಲಾಗಿದೆ. ಹಿಂದಾದರೆ ಎಲ್ಲೇ ಸಮ್ಮೇಳನ ನಡೆದರೂ ಆ ಭಾಗದ ಎಲ್ಲಾ ಜನರು, ಸಂಘಟನೆಗಳ ಬಳಿ ಸಾಗಿ ಸಂಘಟಕರು ಒಗ್ಗೂಡಿಸೋ ಕೆಲಸ ನಡೆಸುತ್ತಿದ್ದರು. ಆದರೆ ಈ ಬಾರಿ ಒಂದಷ್ಟು ಉತ್ಸಾಹಿಗಳು ತಮ್ಮ ಪಾಡಿಗೆ ತಾವು ನಿಸ್ವಾರ್ಥದಿಂದ ದುಡಿಯುತ್ತಿದ್ದಾರಾದರೂ ಸೋಕಾಲ್ಡ್ ಕನ್ನಡ ಪರ ಓರಾಟಗಾರರೇ ಮುಂಚೂಣಿಯಲ್ಲಿ ಮಿಂಚ ಹತ್ತಿದ್ದಾರೆ. ಇದರ ಹಿಂದೆ ಕನ್ನಡಿಗರಲ್ಲಿ ಕನ್ನಡ ಪ್ರಜ್ಞೆ ಜಾಗೃತವಾಗಬಾರದೆಂಬ ಕೆಲ ಹೋರಾಟಗಾರರ ಇಂಗಿತವೂ, ಗೋಷ್ಠಿಗಳ ಮೂಲಕ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಾರದೆಂಬ ಸಂಘಟಕರ ಅರಿವುಗೇಡಿತನಗಳೂ ಕೆಲಸ ಮಾಡಿದಂತಿದೆ. ದುರಂತವೆಂದರೆ ಪತ್ರಿಕೆ, ದೃಶ್ಯ ಮಾಧ್ಯಮಗಳು 'ಜಾತ್ರೆ ಅದೂ ಇದು' ಅಂತೆಲ್ಲ ಕುರುಡಾಗಿ ಪ್ರಚಾರ ಕೊಡುತ್ತಿವೆ!

ಇಷ್ಟೆಲ್ಲಾ ಕೊರತೆಗಳನ್ನಿಟ್ಟುಕೊಂಡೂ ಮೇಲುನೋಟಕ್ಕೆ ಈ ಸಮ್ಮೇಳನ ಭರ್ಜರಿಯಾಗಿ ನಡೆಯುತ್ತಿದೆ. ಊಟ-ಉಪಚಾರಗಳು ಸರಿಯಾಗಿ ಸಿಕ್ಕಲ್ಲಿ ಮತ್ತ್ಯಾವ ಸಿಡಿಮಿಡಿಗಳೂ ಇಲ್ಲದಂತೆ ಅದು ಮುಗಿಯುವುದೂ ಖರೆ. ಆದರೆ ಆಡಂಬರ, ದುಂದು ವೆಚ್ಚ, ತೋರಿಕೆಗಳೇ ಯಶಸ್ಸಿನ ಮಾನದಂಡವಾಗಿ-ಮೂಲ ಮೌಲ್ಯಗಳು ಉಸಿರುಗಟ್ಟಿದರೆ, ಕೇಳಬೇಕಾದ ಪ್ರಶ್ನೆಗಳೂ ಔಪಚಾರಿಕತೆಗೆ ಸಂತೃಪ್ತಗೊಂಡು ತೆಪ್ಪಗಾದರೆ, ಮುಂಬರುವ ದಿನಗಳಲ್ಲಿ ಸಾಹಿತ್ಯ ಸಮ್ಮೇಳನಗಳಿಗೆ ಯಾವ ಕಿಮ್ಮತ್ತುಗಳೂ ಉಳಿಯಲಾರವು.

ಪ್ರಸ್ತುತ ವಿದ್ಯಮಾನಗಳನ್ನು ಗಮನಿಸುತ್ತಿದ್ದರೆ, ಕನ್ನಡತನದ ಶಕ್ತಿಯಿಂದಲೇ ಕದಲಬೇಕಿದ್ದ ಸಮ್ಮೇಳನದ ರಥ, ಸೂಕ್ಷ್ಮತೆಗಳ ಮೇಲೆ ಸವಾರಿ ಹೊರಟಿರುವಂತೆಯೂ, ಆಡಳಿತಕಾರರ ಮರ್ಜಿಯನ್ನೇ ಇಂಧನವಾಗಿಸಿಕೊಂಡಂತೆಯೂ ಕಾಣಹತ್ತಿದೆ.

ಇವೆಲ್ಲ ಕನ್ನಡ ನಾಡು-ನುಡಿ-ಸಾಹಿತಿಗಳ ಬಗ್ಗೆ ಒಲವಿರುವ ಪ್ರತಿಯೊಬ್ಬರೂ ಚಿಂತಿಸಬೇಕಾದ ವಿಚಾರ.

ಪುಢಾರಿಗಳಿಗೂ ಪುಗಸಟ್ಟೆ ಪ್ರಚಾರ!

ಸಂದರ್ಭ ಯಾವುದೇ ಇರಲಿ, ಅದರ ನಡುವೆ ತೂರಿಕೊಂಡು ಒಂದಷ್ಟು ಪ್ರಚಾರ ಗಿಟ್ಟಿಸುವುದು ಪುಢಾರಿಗಳನೇಕರ ಜನ್ಮಸಿದ್ಧ ಹಕ್ಕೆಂಬಂತಾಗಿ ಹೋಗಿದೆ. ಸದ್ಯ ಈ ಕಾಯಿಲೆ ಇತರೆಡೆಗಳಿಗಿಂತಲೂ ಬೆಂಗಳೂರಲ್ಲಿ ಹೆಚ್ಚು ಉಲ್ಬಣಿಸಿದೆ. ಇಂಥಾ ಮಂದಿ ಸಾಹಿತ್ಯ ಸಮ್ಮೇಳನದ ನೆಪದಲ್ಲಿ ಪುಗಸಟ್ಟೆ ಪ್ರಚಾರ ಪಡೆಯ ಹತ್ತಿದ್ದಾರೆ.

ನೀವು ಬೆಂಗಳೂರಿನ ಯಾವುದೇ ಏರಿಯಾಕ್ಕೆ ಹೋದರೂ ಅಲ್ಲಿನ ಪ್ರಮುಖ ಬೀದಿಗಳಲ್ಲಿ ಮೂರ್ನಾಲ್ಕಾದರೂ ಸಮ್ಮೇಳನಕ್ಕೆ ಸಂಬಂಧಿಸಿದ ಬ್ಯಾನರುಗಳು ಜೋತು ಬಿದ್ದಿರುತ್ತವೆ. ಅದರ ಸುತ್ತ ಕನ್ನಡದ ಗಂಧಗಾಳಿಯಿಲ್ಲದ ಮಾಜಿ ರೌಡಿಗಳೂ, ಹಾಲಿ ಪುಢಾರಿಗಳೂ ಹಾಗೂ ಕನ್ನಡಪರ ಹೋರಾಟಗಾರರೂ ಕಂಗೊಳಿಸಿದರೆ, ಕಸಾಪ ಅಧ್ಯಕ್ಷ ನಲ್ಲೂರು ಪ್ರಸಾದ್ ಅಥವಾ ವೆಂಕಟಸುಬ್ಬಯ್ಯನವರಿಗೆ ಅದರೆಲ್ಲರ ನಡುವೆ ಫೋಟೋ ಸಿಗುವ ಕರ್ಮ!

ಇದು ನಿಜಕ್ಕೂ ವಿಕೃತ ಬೆಳವಣಿಗೆ. ನಿಜವಾಗಿ ಕನ್ನಡದ ಬಗ್ಗೆ ಅಭಿಮಾನವಿರುವವರ್‍ಯಾರೂ ಇಂಥ ಕೆಲಸಕ್ಕೆ ಕೈಹಾಕುವುದಿಲ್ಲ. ಕನ್ನಡಕ್ಕಾಗಿ ದುಡಿದವರ ಬಗೆಗೋ, ಚಳವಳಿ, ಹೋರಾಟಗಳ ಬಗೆಗೋ ತಿಳಿವಳಿಕೆ ಮೂಡಿಸುವಂಥ ಪ್ರಯತ್ನ ನಡೆಸುವುದು ನಿಜವಾದ ಕನ್ನಡಾಭಿಮಾನ.

ಆದರೆ ಪ್ರಚಾರ ಪಿತ್ಥ ಏರಿಸಿಕೊಂಡ ಪುಢಾರಿಗಳಿಗೆ ಇದ್ಯಾವುದೂ ಅರ್ಥವಾಗೋದು ಕಷ್ಟ. ಅವರೀಗಲೇ ತಂತಮ್ಮ ಏರಿಯಾದಲ್ಲಿ ಯಾರಾದರೂ ಸತ್ತರೆ ಅವರ ಹೆಣದ ಫೋಟೋದೊಂದಿಗೆ ತಮ್ಮದ್ದನ್ನೂ ಹಾಕಿ ಬ್ಯಾನರು ನೇತಾಡಿಸುವಂಥ ಹಂತ ತಲುಪಿದ್ದಾರೆ!

ಇದರ ವಿರುದ್ಧ ಯಾವ ದನಿಯೂ ಕೇಳುತ್ತಿಲ್ಲವಲ್ಲ ಅಂದುಕೊಳ್ಳುತ್ತಲೇ ಸಾಹಿತಿ ಆರ್.ಜಿ.ಹಳ್ಳಿ ನಾಗರಾಜ್ ನಿರ್ಣಾಯಕ ದನಿಯೆತ್ತಿದ್ದಾರೆ. ಇಂಥ ಅಸಹ್ಯದ ಬ್ಯಾನರುಗಳನ್ನು ತೆರವುಗೊಳಿಸುವಂತೆಯೂ ಆಗ್ರಹಿಸಿದ್ದಾರೆ. ಎಲ್ಲರ ಗಮನವೂ ಆಡಂಬರದತ್ತ ನೆಟ್ಟಿರುವಾಗ ಇಂಥ ಧ್ವನಿ ಯಾರಿಗೆ ಕೇಳಿಸೀತು.

ಕವಿಗಳು, ಲೇಖಕರಿಗೆ ಭೀಕರ ಸಂಭಾವನೆ!


ಸಮ್ಮೇಳನ ನಿಗಧಿಯಾದಂದಿನಿಂದಲೂ ಪತ್ರಿಕೆ, ಮಾಧ್ಯಮಗಳಲ್ಲಿ ಅಲ್ಲಿಂದ ಅಷ್ಟು ಹಣ ಬಂತು, ಇನ್ನೆಲ್ಲಿಂದಲೋ ಇನ್ನೆಷ್ಟೋ ಬರಲಿದೆ ಅಂತೆಲ್ಲ ಕೋಟಿಗಳ ಲೆಕ್ಕದಲ್ಲಿ ವರದಿಯಾಗುತ್ತಿತ್ತಲ್ಲಾ? ಇದೆಲ್ಲವನ್ನು ಗಮನಿಸಿದವರು ಸಮ್ಮೇಳನದ ಗೋಷ್ಠಿಗಳಲ್ಲಿ ಭಾಗವಹಿಸುವ ಕವಿಗಳಿಗೆ, ಲೇಖಕರಿಗೆ ಕಾಸೋ ಕಾಸು ಅಂದುಕೊಂಡಿದ್ದರೆ ಆಶ್ಚರ್ಯವಿಲ್ಲ.

ದುರಂತವೇನು ಗೊತ್ತಾ? ಸಮ್ಮೇಳನದ ಗೋಷ್ಠಿಯಲ್ಲಿ ಪಾಲ್ಗೊಳ್ಳುವ ಕವಿಗಳಿಗೆ ಸಿಗೋ ಸಂಭಾವನೆ ಕೇವಲ ಐವತ್ತು ರೂಪಾಯಿ! ಚರ್ಚಾಗೋಷ್ಠಿಯಲ್ಲಿ ಪಾಲ್ಗೊಳ್ಳುವವರಿಗೆ ಬರೀ 150 ರೂಪಾಯಿ!

ಈ ಭೀಕರ ಸಂಭಾವನೆಯ ವಿವರ ಕೇಳಿ ಇದು ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಮೊದಲ ಸಮ್ಮೇಳನ ನಡೆಯಿತಲ್ಲಾ? ಬಹುಶಃ ಇದು ಆ ಕಾಲದ್ದಿರಬೇಕೆಂಬ ಡೌಟು ಹೊಡೆಯಲಾರಂಭಿಸಿತು. ಈ ಬಗ್ಗೆ ವಿಚಾರಿಸಿದರೆ ಈ ಹಿಂದಿನ ಸಮ್ಮೇಳನಗಳಲ್ಲಿ ಇಂತಹ 'ಭಾರೀ' ಸಂಭಾವನೆಯ ಫಲಾನುಭವಿಗಳನೇಕರು ಸಂಕಟದಿಂದಲೇ 'ನಿಜ' ಅಂದರು!

ತೀರಾ ಕೋಟಿ ಕೋಟಿ ಹಣ ಖರ್ಚು ಮಾಡುವಾಗ ಸಮ್ಮೇಳನ ಆತ್ಮದಂತಿರುವ ಗೋಷ್ಠಿಗಳಲ್ಲಿ ಪಾಲ್ಗೊಳ್ಳುವ ಜನರಿಗೆ ಈ ಪರಿ ಕಡಿಮೆ ಮೊತ್ತ ಕೊಡುವುದು ತೀರಾ ಅವಮಾನಕಾರಿ. ತೀರಾ ಬಸ್ ಚಾರ್ಜ್, ಟ್ರೇನ್ ಚಾರ್ಜ್‌ಗಳನ್ನು ಪ್ರತ್ಯೇಕವಾಗಿ ಕೊಡುತ್ತಾರೆಂದುಕೊಂಡರೂ 50-150 ಯಾವ ಸೀಮೆಯ, ಯಾವ ಕಾಲ ಸಂಭಾವನೆ?

ತೀರಾ ಗೋಷ್ಠಿಗಳು, ಅದಕ್ಕೆ ಆಯ್ದುಕೊಳ್ಳೋ ವಿಚಾರಗಳು ಶತಮಾನದಷ್ಟು ಹಿಂದುಳಿದಿವೆ. ಸಂಭಾವನೆ ಮಾತ್ರ ಬದಲಾಗಬೇಕೆಂದರೆ ಹೆಂಗೆ ಅನ್ನೋ ಮನಸ್ಥಿತಿ ಕಸಾಪದವರಿಗಿದ್ದಂತಿದೆ!



ಬಿಬಿಎಂಪಿ ಟೆಂಡರ್ ಮಾಫಿಯಾ
ಮೇಯರ್-ಕಮೀಷನರ್ ಕಚ್ಚಾಟದ ಹಿಂದೆ

ಬೃಹತ್ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಒಂದು ಸುತ್ತಿನ ಲೂಟಿಯ ...ಟಿಕೆ ಆಖೈರುಗೊಂಡಿದೆ. ಮೇಯರ್ ಫಂಡನ್ನು ಯಾವ ರೀತಿ ಲಪಟಾಯಿಸ ...ಎ, ಉಪಮೇಯರ್ ನಿಧಿಯಡಿ ಕೈಗೊಂಡ ಕಾಮಗಾರಿಗಳ ಬಿಲ್ಲನ್ನು ...ರೆಲ್ಲ ಹಂಚಿಕೊಳ್ಳಬೇಕು, ಹೇಗೆ ಕಾನೂನಿನ ಕಣ್ಣಿಗೆ ಮಣ್ಣೆರಚಿ ಇನ್ನೂರು ...ಟಿ ಮೊತ್ತದ ಕಾಮಗಾರಿಗಳಿಗೆ ಗತಿ ಕಾಣಿಸಬೇಕು, ಯಾವ್ಯಾವ ಭ್ರಷ್ಟ ...ಜಿನಿಯರ್‌ಗಳನ್ನು ಎಲ್ಲೆಲ್ಲಿಗೆ ತರಬೇಕು, ಅವರು ಮಾಡಿದ ಲೂಟಿಯನ್ನು ... ಉಪಾಯವಾಗಿ ಮುಚ್ಚಿ ಹಾಕಬೇಕು; ಇತ್ಯಾದಿ ಪ್ರತಿಯೊಂದು ಬಗೆಹರಿದ ...ರವೇ ಮೇಯರ್ ನಟರಾಜ್ ಮತ್ತು ಕಮಿಷನರ್ ಸಿದ್ಧಯ್ಯನವರ ಮಧ್ಯೆ ... ಕುದುರಿದೆ.

...ಪಾಲಿಕೆಯ ಮೇಯರ್ ಮತ್ತು ಕಮಿಷನರ್ ಕಚ್ಚಾಟ, ಸಿದ್ಧಯ್ಯನವರನ್ನು ...ಗಡಿ ಮಾಡಿ ಅಲ್ಲಿಗೆ ರಾಜ್ಯರಸ್ತೆ ಸಾರಿಗೆ ನಿಗಮದ ಎಂ.ಡಿ. ಗೌರವ್ ...ಪ್ತಾರನ್ನು ತರುವ-ಯತ್ನ, ಇದರ ವಿರುದ್ಧ ಕಾಂಗ್ರೆಸ್ ಮತ್ತು ಜೆಡಿಎಸ್ ...ರ್ಪೊರೇಟರುಗಳು ನಡೆಸಿದ ಪ್ರತಿಭಟನೆ ಮತ್ತು ಅಂತಿಮವಾಗಿ ಸಿದ್ಧಯ್ಯ ...ಪ್ಪಿಕೊಂಡು ಮೇಯರ್‌ಗೆ ಶರಣಾಗತರಾದ ಪ್ರಹಸನದ ಹಿಂದಿರುವುದು ... ಇಂಜಿನಿಯರ್‌ಗಳ ಲಾಬಿ ಮತ್ತು ಬೋಗಸ್ ಬಿಲ್ ಕಾಮಗಾರಿ ...ಟಿಯ ಹುನ್ನಾರ ಮಾತ್ರ.

...ವರ್ಕ್‌ಕೋಡ್ ಹಗರಣಕ್ಕೆ ಸಂಬಂಧಪಟ್ಟಂತೆ ಲೆಕ್ಕಾಧಿಕಾರಿಗಳಾದ ರಮೇಶ್ ...ಮತ್ತು ವಾಣಿಯನ್ನು ಸಸ್ಪೆಂಡ್ ಮಾಡಿದ ಕಮಿಷನರ್ ಸಿದ್ಧಯ್ಯ ಜೊತೆಗೇ ...ವರು ಭ್ರಷ್ಟ ಇಂಜಿನಿಯರ್‌ಗಳನ್ನು ಅಮಾನತುಗೊಳಿಸಿದ್ದು ಮೇಯರ್ ... ಮೂಲ ಕಾರಣ. ಇದಕ್ಕೆ ಬರಗೆಟ್ಟ ಬಿಜೆಪಿ ಕೌನ್ಸಿಲರ್‌ಗಳ ಒಂದು ...ೀ ಗಾಳಿ ಬೀಸಿತು. ಜೊತೆಗೆ ಬಿಜೆಪಿಯ ಬೆಂಗಳೂರಿನ ...ರೂ ಕೈಜೋಡಿಸಿದರು. ಇಷ್ಟೆಲ್ಲಕ್ಕೂ ಕಾರಣವಾದದ್ದು ಪಾಲಿಕೆಯ ...ನ್‌ನಾಕ್ ಇಂಜಿನಿಯರ್‌ಗಳ ಲಾಬಿ.


...ಇ-ಟೆಂಡರ್ ಪ್ರಕ್ರಿಯೆಗೆ ಚಾಲ್ತಿ ದೊರೆತ ಮೇಲೆ ಹಿಂದಿನಂತೆ ...ಗಸ್ ಬಿಲ್ ಕೈಚಳಕದಲ್ಲಿ ಮುಂಡಾಮೋಚಲು ಪಾಲಿಕೆಯ ...ಕ್ಟರ್ಸ್ ಮತ್ತು ಇಂಜಿನಿಯರ್‌ಗಳ ದುಷ್ಟಕೂಟಕ್ಕೆ ಕಷ್ಟವಾಗುತ್ತಿದೆ. ...ಡೆ ಶಾಸಕರೇ ಬೇನಾಮಿಯಾಗಿ ಕಾಂಟ್ರಾಕ್ಟ್ ನಡೆಸುತ್ತಾರೆ. ... ಹಲವೆಡೆ ಕೌನ್ಸಿಲರ್‌ಗಳು ತಮ್ಮ ...ಬಂಧಿಗಳ ಹೆಸರಲ್ಲಿ ಕಾಮಗಾರಿ ಬಿಲ್ ...ಚುತ್ತಾರೆ. ಇದಕ್ಕೆ ಅಡ್ಡಗಾಲಿಟ್ಟದ್ದು ...ಷನರ್ ಸಿದ್ಧಯ್ಯ!

...ರ್ಷಂಪ್ರತಿ ಪಾಲಿಕೆ ಬಜೆಟ್ಟನಲ್ಲಿ ...ಯರ್ ಫಂಡೇ ನೂರೈವತ್ತು ಕೋಟಿ ...ರುತ್ತದೆ. ಉಪಮೇಯರ್ ನಿಧಿ ಎಂದು ...25 ಕೋಟಿಯನ್ನು ಮೀಸಲಿಡುತ್ತಾರೆ. ...ಯರ್ ಮತ್ತು ಉಪಮೇಯರ್ ...ಚನೆಗೊಳಪಟ್ಟು ವಿವಿಧ ಕಾಮಗಾರಿ ... ಮಂಜೂರಾಗುವ ಈ ದುಡ್ಡನ್ನು ...ತವಾಗಿ ಲಪಟಾಯಿಸಲೆಂದೇ ಖದೀಮ ಕಂಟ್ರಾಕ್ಟರುಗಳ ಹಿಂಡೊಂದಿದೆ. ... ಕಂಟ್ರಾಕ್ಟರುಗಳ ಬೆನ್ನಿಗಿರುವವರು ಭ್ರಷ್ಟ ಇಂಜಿನಿಯರ್‌ಗಳು.


...ರ್ವಜನಿಕರಿಗೆ ಅಗತ್ಯವೇ ಇಲ್ಲದ, ಯಾರ ಗಮನಕ್ಕೂ ಬಾರದ, ಕೆಲಸ ... ಬಿಡಲಿ ಯಾರೂ ಕೇಳದ ಕಳ್ಳ ಕಾಮಗಾರಿಗಳನ್ನು ಸೃಷ್ಟಿಸಿ, ಅದಕ್ಕೆ ... ದಾಖಲಿಸಿ, ಕೆಲಸ ನಡೆದಿದೆ ಎಂಬಂತೆ ಕಳ್ಳಬಿಲ್ಲು ಸೃಷ್ಟಿಸಿ ವಂಚಿಸುವುದು ...ಬದಿಂದಲೂ ನಡೆದೇ ಬಂದ ದಂಧೆ. ಈಗ ಇ-ಟೆಂಡರ್ ಪದ್ಧತಿ ಜಾರಿಗೆ ...ಿ, ಯಾರೇ ಓರ್ವ ಕಾಂಟ್ರಾಕ್ಟರ್ ತನಗಿಷ್ಟ ಬಂದ ರೇಟಿಗೆ ಟೆಂಡರ್ ...ಬಿಸುವ ಪಾರದರ್ಶಕ ಪದ್ಧತಿ ಜಾರಿಗೆ ಬಂದ ಮೇಲೆ ಹಿಂದಿನಂತೆ ಬೋಗಸ್ ...ಸೃಷ್ಟಿಸಿ ದುಡ್ಡು ನುಂಗುವುದು ಕಷ್ಟ. ಆದರೆ ಇದಕ್ಕೂ ಕಳ್ಳ ದಾರಿಯೊಂದನ್ನು ...ನಿಯರ್‌ಗಳ ಕೂಟ ಹುಟ್ಟು ಹಾಕಿದೆ. ಅದು ಲ್ಯಾಂಡ್ ಆರ್ಮಿ ಎಂದರೆ ...ಸೇನಾ ನಿಗಮಕ್ಕೆ ಕಾಮಗಾರಿಗಳನ್ನು ವಹಿಸಿಕೊಟ್ಟಂತೆ ಮಾಡುವುದು. ... ಭೂಸೇನಾ ನಿಗಮದ ಖದೀಮರ ಮೂಲಕ ತಮಗೆ ಬೇಕಾದವರಿಗೇ ...ಕೊಟ್ಟಂತೆ ಮಾಡಿ ಬೋಗಸ್ ಬಿಲ್ ಸೃಷ್ಟಿಸಿ ದುಡ್ಡು ದೋಚುವುದು.

ಇದಕ್ಕೆ ಅಡ್ಡಗಾಲಿಟ್ಟಿದ್ದು ಕಮೀಷನರ್ ಸಿದ್ಧಯ್ಯ. ಪಾಲಿಕೆಯಿಂದ ಭೂಸೇನಾ ನಿಗಮಕ್ಕೆ ವಹಿಸಿಕೊಟ್ಟ ಪ್ರತಿ ಕಾಮಗಾರಿಗೆ ಎಸ್.ಆರ್. ರೇಟ್ ಅಂದರೆ ಅನುಮೋದಿತ ದರಕ್ಕಿಂತ ಶೇ. 10 ರಷ್ಟು ಹೆಚ್ಚಿಗೆ ಹಣ ನೀಡಬೇಕು. ಜೊತೆಗೆ ಶೇ. 8 ರಷ್ಟು ಸೇವಾ ಶುಲ್ಕವನ್ನು ಪಾವತಿಸಬೇಕು. ಆದರೆ ಇ-ಟೆಂಡರ್‌ನಲ್ಲಿ ಇದು ಶೇ. 20 ರಷ್ಟು ಕಮ್ಮಿಯಾಗುತ್ತದೆ. ಅಂದರೆ ಪಾಲಿಕೆಗೆ ಪ್ರತಿ ಕಾಮಗಾರಿಯ ಶೇ. 38 ರಷ್ಟು ಹಣ ಉಳಿತಾಯವಾಗುತ್ತದೆ. ಇದರಿಂದ ಒಂದು ಕೋಟಿ ರೂಪಾಯಿಗಳಷ್ಟು ಕಾಮಗಾರಿಯೊಂದಕ್ಕೆ ಪಾಲಿಕೆಗೆ 38 ಲಕ್ಷ ರೂಪಾಯಿಗಳ ನಷ್ಟ ಸಂಭವಿಸುತ್ತದೆ.


ಸರ್ಕಾರದ ನಿಯಮಾವಳಿಯಂತೆ ತುರ್ತು ಪರಿಸ್ಥಿತಿಯಲ್ಲಷ್ಟೇ ಕಾಮಗಾರಿಗಳನ್ನು ಲ್ಯಾಂಡ್ ಆರ್ಮಿಗೆ ವಹಿಸಿಕೊಡಬೇಕು. ಇಷ್ಟಾಗ್ಯೂ ಲ್ಯಾಂಡ್ ಆರ್ಮಿ ತಾನೇ ನಿಂತು ಕಾಮಗಾರಿ ನಡೆಸದೇ ಅದನ್ನು ಕಾರ್ಪೊರೇಟರುಗಳು ಮತ್ತವರ ಛೇಲಾಗಳಿಗೆ ಉಪಗುತ್ತಿಗೆ ನೀಡುತ್ತದೆ. ಇದನ್ನೆಲ್ಲ ಗಮನಿಸಿಯೇ ಕಮೀಷನರ್ ಸಿದ್ಧಯ್ಯ ಭೂಸೇನಾ ನಿಗಮಕ್ಕೆ ಕಾಮಗಾರಿ ವಹಿಸದೇ ಇ-ಟೆಂಡರ್ ಮೂಲಕವೇ ಮೇಯರ್ ಮತ್ತು ಉಪಮೇಯರ್ ನಿಧಿಯ ಕಾಮಗಾರಿ ನಡೆಸುವಂತೆ ಕಟ್ಟುನಿಟ್ಟಿನ ಕ್ರಮಕೈಗೊಂಡಿದ್ದು.



ನಟರಾಜು

ಇದು ಸಹಜವಾಗೇ ಮೇಯರ್ ಮತ್ತು ಬಿಜೆಪಿ ಶಾಸಕರನ್ನು ಕಂಗೆಡಿಸಿದೆ. ದುಡ್ಡು ದೋಚಲು ಉಳಿದದ್ದು ಇರೋದೇ ದಾರಿ. ಇದಕ್ಕೇ ಕಮೀಷನರ್ ತಡೆಯೊಡ್ಡಿದ್ದರೆಂದರೆ; ಎಲೆಕ್ಷನ್ನಿಗೆಂದು ಇದ್ದುಬದ್ದುದ್ದನ್ನೆಲ್ಲಾ ಸುರಿದು ಗೆದ್ದು ಏನು ಖಮಾಯಿಸಿದಂತಾಯ್ತು?


ಸಿದ್ಧಯ್ಯ

ಇದು ಬಿಜೆಪಿಯ ಶಾಸಕರು, ಮೇಯರ್ ಮತ್ತು ಕಾರ್ಪೊರೇಟರುಗಳ ಸಿಟ್ಟಾದರೆ ಗಾಯದ ಮೇಲೆ ಬರೆ ಎಳೆದಂತೆ ಸಿದ್ಧಯ್ಯ ವರ್ಕ್‌ಕೋಡ್ ಕರ್ಮಕಾಂಡಕ್ಕೆ ಕೈಯಿಟ್ಟರು. ಊರಿಗೆ ಬೇಕೇ ಇಲ್ಲದ ನಿರುಪಯುಕ್ತ ಕಾಮಗಾರಿಗಳನ್ನು ಹುಟ್ಟುಹಾಕಿ, ಅದಕ್ಕೆ ಯಾರ ಅನುಮೋದನೆಯೂ ಇಲ್ಲದೇ ಸಂಕೇತಾಕ್ಷರ ಅಂದರೆ ವರ್ಕ್‌ಕೋಡ್ ಸೃಷ್ಟಿಸಿ ನುಂಗಿಹಾಕುವುದು ಖದೀಮ ಇಂಜಿನಿಯರ್‌ಗಳ ಹುನ್ನಾರವಾಗಿತ್ತು. ಬಿಜೆಪಿ ಸರ್ಕಾರದ ಅತಿರಥಮಹಾರಥರ ದುಡ್ಡಿನ ದಾಹ ತಣಿಸಲೆಂದೇ ರೂಪುಗೊಂಡ ಇಂಥ 4066 ಕಾಮಗಾರಿಗಳ ಒಟ್ಟು ಮೊತ್ತ 2349.82 ಕೋಟಿ. ಇದರಲ್ಲಿ ಶೇ. 60 ರಷ್ಟು ಕಾಮಗಾರಿಗಳು 22.75 ಪರ್ಸೆಂಟ್ ಯೋಜನೆಯ ಕಾಮಗಾರಿಗಳಾಗಿದ್ದವು.


ಪ್ರಹ್ಲಾದ್


ವಿಶ್ವನಾಥ್

ಖದೀಮ ಕಂಟ್ರಾಕ್ಟರುಗಳು ಮತ್ತು ಇಂಜಿನಿಯರ್‌ಗಳ ಹಿಂದೆ ನಿಂತು ಬಿಜೆಪಿಯ ಕೆಲ ಲೋಕಲ್ ದೊಣ್ಣೆನಾಯಕರೇ ರೂಪಿಸಿದ್ದ ಇಂಥ ಮೋಸದ ವಾಸನೆ ಹಿಡಿದ ಸಿದ್ಧಯ್ಯ ಈ ಬಗ್ಗೆ ತನಿಖೆಗೆಂದೇ ತಂಡವೊಂದನ್ನು ರಚಿಸಿದರೆ, ಬಂದ ವರದಿಯೇ ಬೆಚ್ಚಿಬೀಳಿಸುವಂತಿತ್ತು. ಜಾರಿಯಲ್ಲಿದ್ದ ಕಾಮಗಾರಿಗಳ ಪೈಕಿ ಅರ್ಧಕ್ಕರ್ಧ ಅಂದರೆ ಸುಮಾರು 1974 ಕಾಮಗಾರಿಗಳು ನಿರುಪಯುಕ್ತ ಮತ್ತು ಬೋಗಸ್ ಕಾಮಗಾರಿಗಳು!

ಇಂಥ 1974 ಬೋಗಸ್ ಕಾಮಗಾರಿಗಳ ಒಟ್ಟು ಮೊತ್ತವೇ 1,701.33 ಕೋಟಿ ರೂಪಾಯಿಗಳು!

ಹೆಚ್ಚೂಕಮ್ಮಿ ಒಂದೂಮುಕ್ಕಾಲು ಸಾವಿರ ಕೋಟಿ ರೂಪಾಯಿಗಳ ಮೊತ್ತದ ಬೋಗಸ್ ಬಿಲ್ ಕಾಮಗಾರಿ ನಡೆಸಿ ಉಪಾಯವಾಗಿ ದೋಚುವ ಬಿಜೆಪಿ ನಾಯಕರು ಮತ್ತು ಲೋಕಲ್ ಶಾಸಕರ ಭರ್ಜರಿ ಬೇಟೆಗೆ ಸಿದ್ಧಯ್ಯ ಅಡ್ಡಗಾಲಿಟ್ಟರೆ ಏನಾಗಬೇಡ? ಮಂತ್ರಿ ಅಶೋಕ್, ಕಟ್ಟಾ, ಯಲಹಂಕದ ಶಾಸಕ ವಿಶ್ವನಾಥ್, ಬೆಂಗಳೂರು ದಕ್ಷಿಣದ ಎಮ್ಮೆಲ್ಲೇ ಕೃಷ್ಣಪ್ಪ, ಮಲ್ಲೇಶ್ವರದ ಅಶ್ವತ್ಥ ನಾರಾಯಣ, ದಾಸರಹಳ್ಳಿಯ ಮುನಿರಾಜು, ಕೆ.ಆರ್. ಪುರದ ನಂದೀಶ್ ರೆಡ್ಡಿ, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ; ಇತ್ಯಾದಿ ಸಮಸ್ತ ಬಿಜೆಪಿ ಖದೀಮರೆಲ್ಲ ಸೇರಿಯೇ ಈ ಪಾಟ ಬೋಗಸ್ ಬಿಲ್ ಲೂಟಿಯ ಹಿಂದಿದ್ದರು.

ಒಂದುಮುಕ್ಕಾಲು ಸಾವಿರ ಕೋಟಿ ಮೊತ್ತದ ಭರ್ಜರಿ ಬೇಟೆ ಕೈತಪ್ಪಿದ್ದೇ ತಡ ಒಂದು ಡಜನ್ ಬಿಜೆಪಿ ಶಾಸಕರ ಪಿತ್ಥ ಕೆರಳಿದೆ. ನೇರ ಮುಖ್ಯಮಂತ್ರಿಗೇ ದೂರು ಕೊಟ್ಟಿದ್ದಾರೆ. ಅಶೋಕ್ ಮನೆಯಲ್ಲಿ ಬೆಂಗಳೂರಿನ ಬಿಜೆಪಿ ಶಾಸಕರ ಹಿಂಡೇ ಜಮೆಗೊಂಡು ಸಿದ್ಧಯ್ಯ ವಿರುದ್ಧ ಕಿಡಿಕಾರಿದ್ದಾರೆ. ಇದ್ಯಾವುದಕ್ಕೂ ಸೊಪ್ಪು ಹಾಕದ ಸಿದ್ಧಯ್ಯ ಬಿಜೆಪಿ ದುರುಳರ ನೆತ್ತಿಗೇ ಬಡಿದಂತೆ ಕೈಹಾಕಿದ ಮತ್ತೊಂದು ದುಸ್ಸಾಹಸವೆಂದರೆ ಭ್ರಷ್ಟ ಇಂಜಿನಿಯರ್‌ಗಳ ಸಸ್ಪೆಂಡ್!

ಯಲಹಂಕ ಶಾಸಕ ವಿಶ್ವನಾಥ್ ತಾನೇ ಹಾಕಿಸಿಕೊಂಡಿದ್ದ ಸೂಪರಿಂಟೆಂಡಿಂಗ್ ಇಂಜಿನಿಯರ್ ನಾಗರಾಜನ ಮೂಲಕ ಒಟ್ಟು 178 ಕಳ್ಳ ಕಾಮಗಾರಿಗಳನ್ನು ಸೃಷ್ಟಿಸಿ 328 ಕೋಟಿ ರೂಪಾಯಿಗಳ ಬೋಗಸ್ ಬಿಲ್ ದರೋಡೆಗೆ ಕೈಇಟ್ಟಿದ್ದ. ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಉಲ್ಲಂಘಿಸಿದ ಬಗ್ಗೆ ಪಾಲಿಕೆಯ ತಾಂತ್ರಿಕ ವಿಚಕ್ಷಣ ದಳವೇ ತನ್ನ ವರದಿಯಲ್ಲಿ ದೂರು ಸಲ್ಲಿಸಿತ್ತು. ಇದನ್ನು ಆಧರಿಸಿಯೇ ಸಿದ್ಧಯ್ಯ ಯಲಹಂಕದ ಸೂಪರಿಂಟೆಂಡಿಂಗ್ ಇಂಜಿನಿಯರ್ ನಾಗರಾಜ್, ಪ್ರಾಜೆಕ್ಟ್ ಇ.ಇ. ಪ್ರಹ್ಲಾದ್, ಮತ್ತೊಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಜೇಂದ್ರ ಕುಮಾರ್‌ರನ್ನು ಸಸ್ಪೆಂಡ್ ಮಾಡಿಬಿಟ್ಟರು. ಜೊತೆಗೆ ಕೆಂಗೇರಿ ವಲಯದ ಮೋಹನ್‌ದಾಸ್ ಮತ್ತು ರಾಜರಾಜೇಶ್ವರಿನಗರದ ಇ.ಇ. ನಾರಾಯಣ್ ವಿರುದ್ಧವೂ ಅಮಾನತ್ತು ಆದೇಶ ಹೊರಡಿಸಿದರು.

ತಾನೇ ಕರೆತಂದು ಕೋಟಿಗಟ್ಟಲೆ ಖಮಾಯಿಗೆ ಇಳಿಸಿದ ಇಂಜಿನಿಯರ್‌ಗಳನ್ನು ಏಕಾಏಕಿ ಸಿದ್ಧಯ್ಯ ಸಸ್ಪೆಂಡ್ ಮಾಡಿದ್ದೇ ತಡ ವಿಶ್ವನಾಥ್ ತಲೆ ಕೆಟ್ಟಿದೆ. ನೇರ ಮುಖ್ಯಮುಂತ್ರಿ ಛೇಂಬರಿಗೇ ಹೋಗಿ ಕೂಗಾಡಿ ಅಲ್ಲಿಂದಲೇ ಅಶೋಕ್‌ಗೆ ಫೋನೆತ್ತಿಕೊಂಡು ಬೊಬ್ಬೆ ಹಾಕಿಬಿಟ್ಟರು. ಬೆನ್ನಲ್ಲೇ ಸತೀಶ್ ರೆಡ್ಡಿ, ಕೃಷ್ಣಪ್ಪ, ಮುನಿರಾಜು ಮತ್ತು ಅಶ್ವತ್ಥನಾರಾಯಣರಂಥ ಬಿಜೆಪಿ ಶಾಸಕರು ಮೇಯರ್ ನಟರಾಜುಗೆ ಫೋನಾಯಿಸಿ ಗೋಣಗಾಡಿದ್ದಾರೆ. ತನಗೊಂದು ಮಾತನ್ನೂ ಕೇಳದೆ ಇಂಜಿನಿಯರ್‌ಗಳನ್ನು ಸಸ್ಪೆಂಡ್ ಮಾಡಿದ ಸಿದ್ಧಯ್ಯ ವಿರುದ್ಧ ಮೊದಲೇ ಮೇಯರ್‌ಗೆ ಸಿಟ್ಟಿತ್ತಲ್ಲ; ಅಂತಿಮವಾಗಿ ಮಂತ್ರಿ ಅಶೋಕ್‌ಗೆ ದುಂಬಾಲು ಬಿದ್ದ ಬಿಜೆಪಿ ದುರುಳರೆಲ್ಲ ಸಿದ್ಧಯ್ಯಗೆ ಗೇಟ್‌ಪಾಸ್ ಕೊಡಿಸಲು ಅಣಿಯಾಗಿದ್ದಾರೆ.

ಸಿದ್ಧಯ್ಯ ಜಾಗಕ್ಕೆ ಅಶೋಕ್ ಭಟ್ಟಂಗಿ ಗೌರವ್‌ಗುಪ್ತ ಎಂಬ ಐಎಎಸ್ ಖದೀಮನನ್ನು ತರುವುದು ಖಾತರಿಗೊಂಡಿದ್ದೇ ತಡ ಪಾಲಿಕೆಯ ಜೆಡಿಎಸ್ ನಾಯಕ ಪದ್ಮನಾಭ ರೆಡ್ಡಿ ಅಖಾಡಕ್ಕಿಳಿದಿದ್ದಾರೆ. ಸಿದ್ಧಯ್ಯ ಎತ್ತಂಗಡಿ ವಿರುದ್ಧ ಕಾಂಗ್ರೆಸ್ ನಾಯಕ ನಾಗರಾಜು ಕೂಡ ಜೆಡಿಎಸ್ ಜೊತೆ ಕೈಜೋಡಿಸಿದ್ದಾರೆ. ಓರ್ವ ದಲಿತ ಐಎಎಸ್ ಅಧಿಕಾರಿಯನ್ನು ಎತ್ತಂಗಡಿ ಮಾಡಿ ಸಾವಿರಾರು ಕೋಟಿ ದೋಚಲು ಹವಣಿಸಿದ್ದ ಬಿಜೆಪಿ ಧೂರ್ತರಿಗೆ ಇದರಿಂದ ಮುಖಭಂಗ ಗ್ಯಾರಂಟಿ ಎಂಬುದು ಮನದಟ್ಟಾಗುತ್ತಿದ್ದಂತೆ ಸಿದ್ಧಯ್ಯ ಎತ್ತಂಗಡಿ ಯತ್ನಕ್ಕೆ ಹಿನ್ನಡೆಯಾಗಿದೆ. ಎಲ್ಲಿ ರಾಜ್ಯ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರೆಲ್ಲ ಪಾಲಿಕೆ ಹುತ್ತಕ್ಕೆ ಕೈ ಹಾಕಿಯಾರೋ ಎಂದು ಹೆದರಿದ ಬಿಜೆಪಿ ಅಧಿಪತಿಗಳು ಮುಖ್ಯಮಂತ್ರಿ ಯಡ್ಡಿಯ ಮೂಲಕವೇ ಸಿದ್ಧಯ್ಯನವರನ್ನು ಪಳಗಿಸಲು ಹವಣಿಸಿದ್ದಾರೆ.

ಮುಖ್ಯಮಂತ್ರಿಯೇ ಕರೆದು ಪೂಸಿ ಹೊಡೆದ ಮೇಲೆ ಸಿದ್ಧಯ್ಯ ಮೆತ್ತಗಾಗದೇ ಇನ್ನೇನು? ಮೇಯರ್ ಮತ್ತು ಉಪಮೇಯರ್ ನಿಧಿಯ ನೂರಾ ಎಪ್ಪತ್ತೈದು ಕೋಟಿಯ ಒಂದು ಸುತ್ತಿನ ಲೂಟಿಯ ದಾರಿ ಸಲೀಸಾಗಿದೆ. ಸಸ್ಪೆಂಡ್ ಮಾಡಿದ ಭ್ರಷ್ಟ ಇಂಜಿನಿಯರ್‌ಗಳನ್ನೆಲ್ಲ ಮತ್ತೆ ಅದೇ ಜಾಗಕ್ಕೆ ತಂದು ಕೂರಿಸಲಾಗಿದೆ. ವರ್ಕ್‌ಕೋಡ್ ರಾಬರಿ ಮತ್ತು ಒಂದೂ ಮುಕ್ಕಾಲು ಸಾವಿರ ಕೋಟಿಯ ಬೋಗಸ್ ಬಿಲ್ ದರೋಡೆಯ ವಿರುದ್ಧ ತನಿಖೆಯೂ ಮೆತ್ತಗಾಗಿದೆ. ಇಷ್ಟೆಲ್ಲ ಆದಮೇಲೆ ಮೇಯರ್ ನಟರಾಜ್ ಮತ್ತು ಕಮಿಷನರ್ ಸಿದ್ಧಯ್ಯ ಅಕ್ಕಪಕ್ಕ ಕೂತು ತಿಂಡಿ ತಿಂದು ತಬ್ಬಾಡಿಕೊಳ್ಳದೇ ಬೇರೇನು ತಾನೇ ಮಾಡಿಯಾರು?

ಸದ್ಯ ಕಮೀಷನರ್ ಮತ್ತು ಮೇಯರ್ ಭಾಯಿ ಭಾಯಿ ಅಂತೆ. ಭ್ರಷ್ಟ ಇಂಜಿನಿಯರ್‌ಗಳು, ಖದೀಮ ಕಂಟ್ರಾಕ್ಟರುಗಳು ಮತ್ತು ಬಿಜೆಪಿಯ ಕಾರ್ಪೊರೇಟರುಗಳೆಲ್ಲ ಒಂದೇ ತಟ್ಟೆಯಲ್ಲಿ ಊಟಕ್ಕೆ ಕುಂತ (ಅ)ಶುಭಗಳಿಗೆಯ ಪರಿಣಾಮ ಏನಾಗಬಹುದು? ಅದು ಎಷ್ಟು ಸಾವಿರ ಕೋಟಿಗೆ ಬೆಲೆ ಬಾಳಬಹುದು?

• ರಾ. ಸೋಮನಾಥ್

RMP ಎಂಬ 'ನುಂಗುಬಾಕಂ'

"ನಮ್ಮೊಂದಿಗೆ ಬೆಳೆಯಿರಿ...."

ಹೀಗೊಂದು ಜಾಹೀರಾತು ಎರಡು ವರ್ಷಗಳ ಹಿಂದೆ ದಿನ ಪತ್ರಿಕೆಯೊಂದರಲ್ಲಿ ಪ್ರಕಟಗೊಂಡಿತ್ತು. ನಿಜ! 2001ರಿಂದಲೂ ಬೆಳೆದ ಕಂಪನಿಯೊಂದು ಇತ್ತೀಚೆಗೆ ಚಪ್ಪಲಿ ಸೇವೆ ಪಡೆದುಕೊಳ್ಳುವ ಹಂತಕ್ಕೆ ಬಂದಿದೆ.....

ಅದೇ RMP ನೆಟ್‌ವರ್ಕ್ ಮಾರ್ಕೆಟಿಂಗ್!

RMP ಎಂಬ ನುಂಗುಬಾಕ ಸಂಸ್ಥೆಯೊಂದು ಸಾಮಾನ್ಯ ಜನರನ್ನು ನಂಬಿಸಿ ಕೋಟ್ಯಂತರ ರೂಪಾಯಿಯನ್ನು ವಂಚಿಸಿ 'ಉಂಡೆನಾಮ'ದ ಕಂಪನಿಗಳ 'ಲಿಸ್ಟ್'ಗೆ ಸೇರಿದೆ. ದಿಢೀರ್ ಶ್ರೀಮಂತಿಕೆಯ ಕನಸೊತ್ತ ಅದೆಷ್ಟೊ ಜನ ಇಂದು ಬಾಯಿಬಾಯಿ ಬಡಿದುಕೊಳ್ಳುತ್ತ ಬೀದಿಗೆ ಬಿದ್ದಿದ್ದಾರೆ. ವಂಚನೆ, ವಂಚಕರ ಇತಿಹಾಸಗಳೇ ಕಣ್ಮುಂದೆ ಇದ್ದರೂ ಮೋಸದಾಟಕ್ಕೆ RMP ಯ ಅಭಿಲಾಷ್ ಥಾಮಸ್ ಪ್ರೇಮ್‌ಕುಮಾರ್ ಮುಂತಾದರು ಕರ್ನಾಟಕದಲ್ಲಿ ಕೋಟ್ಯಂತರ ರೂಪಾಯಿ ದೋಚಿ ಈಗ ಪರಾರಿಯಾಗಿದ್ದಾರೆ. ಇಂತವರಿಗೆ ಬಲಿಯಾಗುತ್ತಿರುವವರ ಸಂಖ್ಯೆ ಜಾಸ್ತಿಯಾಗುತ್ತಿರುವುದು ನಿಜಕ್ಕೂ ನಾಚಿಕೆ ಗೇಡೆನಿಸುತ್ತದೆ.

RMP ಎಂಬ ಪಂಗನಾಮ ಸಂಸ್ಥೆ

RMP ಎಂಬುದು Resource Money Power ಎಂಬ ಶಿರೋನಾಮೆಯಡಿ ರೂಪುಗೊಂಡಂತಹ ಇನ್ಫೋಟಿಕ್ ಪ್ರೈವೇಟ್ ಲಿಮಿಟೆಡ್ ಕಂಪೆನಿ. ಇದರ ಮೂಲ ಕಚೇರಿ ಚೆನ್ನೈನ 'ನುಂಗಂಬಾಕ್ಕಂ' ಎಂಬಲ್ಲಿದೆ. ಆದರೆ ಇದರ ಬಗ್ಗೆ ಖಚಿತ ಆಧಾರಗಳಿಲ್ಲ, ಇದು ತಮಿಳುನಾಡಷ್ಟೇ ಅಲ್ಲದೆ ಆಂಧ್ರ, ಕೇರಳ, ಕರ್ನಾಟಕಗಳಲ್ಲೂ ತನ್ನ ಕಾರ್ಯಕ್ಷೇತ್ರವನ್ನು ಹಬ್ಬಿಸಿದೆ. ಗ್ರಾಹಕರ ಶಕ್ತಿ, ಅವರ ತೃಪ್ತಿ, ಹಣಕಾಸಿನ ಭದ್ರತೆ, ಟೀಮ್‌ವರ್ಕ್ ನಮ್ಮ ಸಂಸ್ಥೆಯು ಉತ್ತುಂಗಕ್ಕೇರಲು ಕಾರಣವೆಂದು ಹೇಳಿಕೊಳ್ಳುವ RMP ಯವರು ಸಾಮಾನ್ಯ ಕೂಲಿ ಕಾರ್ಮಿಕರನ್ನು, ಮುದಿ ವಯಸ್ಸಿಗರನ್ನು, ಅದರಲ್ಲೂ ಮಹಿಳೆಯರನ್ನು ತಮ್ಮ ಬುಟ್ಟಿಗೆ ಹಾಕಿಕೊಂಡು ಇಲ್ಲಸಲ್ಲದ ಆಸೆ ತೋರಿಸಿ ಕಂಪೆನಿಗೆ ಹಣ ತೊಡಗಿಸುವಂತೆ ಪ್ರೇರೇಪಿಸುತ್ತಾ ಅವರನ್ನು ವಂಚಿಸುತ್ತಾ ಬಂದಿದ್ದಾರೆ.

RMP ಎಂಬ 'ಚೈನ್ ಲಿಂಕ್ -ಸಿಸ್ಟಂ' ಹೊಂದಿರುವ (ಕಂಪೆನಿಯ ಪ್ರಕಾರ ಚೈನ್‌ಲಿಂಕ್ ಅಲ್ಲ) ಈ ಕಂಪೆನಿ ನಮ್ಮ ರಾಜ್ಯದಲ್ಲಿ ಪ್ರಧಾನ ಕಚೇರಿ ಎಲ್ಲಿದೆ ಎಂದು ಎಲ್ಲಿಯೂ ಹೇಳಿಕೊಂಡಿಲ್ಲ, ಅದೆಲ್ಲಿದೆಯೋ ಆ ಕಂಪೆನಿಗೆ ಗೊತ್ತು, ಪ್ರಮುಖ ಹೋಟೆಲ್‌ಗಳಲ್ಲಿ, ಕೆಇಬಿ ಹಾಲ್‌ಗಳಲ್ಲಿ, ಕಲ್ಯಾಣ ಮಂಟಪಗಳಲ್ಲಿ ಸಭೆ ನಡೆಸುವ ಇವರು ತಮ್ಮ ಬೆಂಗಳೂರಿನ ಕಚೇರಿ ಬಸವೇಶ್ವರನಗರ, ವಿಲ್ಸನ್‌ಗಾರ್ಡನ್ ಮುಂತಾದ ಕಡೆ ಇದೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ವಂಚನೆಗೊಳಗಾದವರೊಬ್ಬರ ಪ್ರಕಾರ ಬಸವೇಶ್ವರನಗರದಲ್ಲಿರುವುದು ಪ್ರಧಾನ ಕಚೇರಿಯಲ್ಲ, ಅದು ಗೋಡೌನ್, ಸದಸ್ಯರಾಗುವ 'ಮಿಕ'ಗಳಿಗೆ ಕೊಡಲು ಪ್ರಾಡಕ್ಟ್‌ಗಳಿಟ್ಟಿರುವ ಒಂದು ಉಗ್ರಾಣ. ಸಭೆಗಳಲ್ಲಿ RMP ಯವರು ಸೂಟುಬೂಟು ಹಾಕಿಕೊಂಡು ಗುಂಪುಗುಂಪಾಗಿ ಬಂದು ಅಲ್ಲಿ ಸೇರಿದ ಜನರ ಮುಂದೆ ಕಂಪೆನಿಯ ಬಗ್ಗೆ ಬಹಳ ಚೆನ್ನಾಗಿ ವರ್ಣಿಸಿ ಹೇಳುವುದರ ಜೊತೆಗೆ ಅವರಲ್ಲಿ ನಂಬಿಕೆ ಬರುವಂತೆ ಮಾಡುತ್ತಾರೆ. ನಮ್ಮೊಂದಿಗೆ ನೀವೆಲ್ಲರೂ ಕೈ ಜೋಡಿಸಿದ್ದಲ್ಲಿ ಜಗತ್ತನ್ನೇ ಜಯಿಸಬಹುದೆಂದು ಆಮಿಷ ಒಡ್ಡುತ್ತಾರೆ. ಈ ಆಮಿಷಗಳಿಗೆ ತಲೆಯಾಡಿಸುವ ಆ ಸಭೆಯ ಸಾಮಾನ್ಯರು ಎಷ್ಟು ಬೇಗ ನಾವೂ ಈ ಸಂಸ್ಥೆಯಲ್ಲಿ ಒಬ್ಬರಾಗುತ್ತೇವೋ ಎಂಬಷ್ಟರ ಮಟ್ಟಿಗೆ ಬದಲಾಗಿಬಿಟ್ಟಿರುತ್ತಾರೆ. ಸಂಸ್ಥೆಯ ಡಿಸ್ಟ್ರಿಬ್ಯೂಟರ್ ಆಗಬೇಕಾದರೆ 'ಮೆಂಬರ್‌ಶಿಪ್' ಆಗಬೇಕೆಂದೂ, ಅದಕ್ಕಾಗಿ ಒಂದು ಪ್ರಾಡಕ್ಟ್ ಕೊಳ್ಳಬೇಕೆಂದೂ ಹೇಳಿ ಅವರು ಹಣತೊಡಗಿಸುವಂತೆ ಪ್ರೇರೆಪಿಸುತ್ತಾರೆ. ಇಲ್ಲಿ 6990 ರೂ.ನಿಂದ ಪ್ರಾರಂಭವಾಗಿ 48,000ದವರೆಗೂ ಇರುವ ಸ್ಕೀಂನಲ್ಲಿ ಯಾವುದಾದರೊಂದು ವಸ್ತುವನ್ನು ಕೊಳ್ಳಬಹುದೆಂದೂ ಆ ವಸ್ತುಕೊಂಡಲ್ಲಿ ಅವರು ಸದಸ್ಯರಾಗುತ್ತಾರೆಂದೂ ತಿಳಿಸುತ್ತಾರೆ. ಈ ಸ್ಕೀಂಗಳಲ್ಲಿ ಬಜಾಜ್ ಅಲಯನ್ಸ್ ಇನ್ಶೂರೆನ್ಸ್ (6990/-), ಸಿಯಾರಾಮ್ಸ್ ಶೂಟಿಂಗ್ಸ್ (7690/-), ಎಚ್‌ಸಿಎಲ್ ಲ್ಯಾಪ್‌ಟಾಪ್ (27,990/-), ವಾಚ್ ವಿತ್ ಸೂಟ್‌ಲೆಂತ್ (8990/-), ಸೋಲಾರ್‌ಲ್ಯಾಂಪ್(8290/-) ಮುಂತಾದ ಸುಮಾರು 25ರಿಂದ 30 ಪ್ರಾಡಕ್ಟ್‌ಗಳಿರುತ್ತವೆ. ಇವುಗಳಲ್ಲಿ ಯಾವುದಾದರೊಂದು ವಸ್ತು ಕೊಂಡು ಸದಸ್ಯರಾದಲ್ಲಿ ನೀವು ಹೂಡಿದ ಹಣಕ್ಕೆ ವಸ್ತು ಸಿಗುವುದರ ಜೊತೆಗೆ ಜೀರೋ ಬಂಡವಾಳದಲ್ಲಿ ಕಂಪೆನಿಯ ಹಂಚಿಕೆದಾರರಾಗಿ ಬಿಸಿನೆಸ್ ಮಾಡಲು ಅರ್ಹರಾಗುತ್ತೀರ ಎಂದು ನಂಬಿಸಲಾಗುತ್ತದೆ.

ಆಸೆಯೆಂಬ ಕುದುರೆಯನ್ನೇರಿ....

ದಿಢೀರ್ ಶ್ರೀಮಂತಿಕೆಯ ಕನಸೊತ್ತ ಶ್ರೀಸಾಮಾನ್ಯ ನೂರಾರು ಆಸೆ-ಆಕಾಂಕ್ಷೆಗಳನ್ನೊತ್ತು RMP ಸದಸ್ಯತ್ವ ಪಡೆದ ಮೇಲೆ ಆತ ಇಬ್ಬರನ್ನು ಹೊಸದಾಗಿ ಸದಸ್ಯರನ್ನಾಗಿ ಮಾಡಿಸಬೇಕಾಗುತ್ತದೆ. ಆ ಇಬ್ಬರು ತಲಾ ಇಬ್ಬಿಬ್ಬರನ್ನು ಸದಸ್ಯರನ್ನಾಗಿ ಮಾಡಿಸಬೇಕು. ಹೀಗೆ ಸದಸ್ಯತ್ವದ ಪಟ್ಟಿ ಬೆಳೆಯುತ್ತಾ ಹೋದಂತೆ ವಾರದಲ್ಲಿ ಒಂದು ಲಕ್ಷದ ಮೂವತ್ತು ಸಾವಿರ ರೂ. ಸಿಗುತ್ತದೆ. ಜೊತೆಗೆ ಸಾಧನೆಗೈದವರು ಮುಂದೆ ಸಿಲ್ವರ್ ಅಚೀವರ್, ಗೋಲ್ಡ್ ಅಚೀವರ್, ಪ್ಲಾಟಿನಂ


GOVERNMENT OF TAMIL NADU
COMMERCIAL TAXES DEPARTMENT
TAMIL NADU VALUE ADDED TAX ACT 2006
FORM G
CERTIFICATE OF REGISTRATION

LEGAL DOCUMENT FILE CONTACT: PRASANNA Cell: 9739863258

RMP ವಂಚಕರು

ಅಚೀವರ್, ಎಂಬ್ರಾಲ್ಡ್ ಅಚೀವರ್ ಆಗಬಹುದೆಂದೂ ಜೊತೆಗೆ ಕಾರ್‌ಲೋನ್, ಮನೆಲೋನ್ ಸಿಗುವುದರ ಜೊತೆಗೆ ಫಾರಿನ್ ಟೂರ್ ಅವಕಾಶ ದೊರೆಯಲಿದೆಯೆಂದು ಹೇಳಿ ಕುಳಿತಲ್ಲೇ ಕಾರಲ್ಲಿ ಓಡಾಡುತ್ತಿರುವ ಹಾಗೆ ಕನಸು ಕಾಣಿಸುತ್ತಾರೆ. ಈ ಎಲ್ಲಾ ಕನಸುಗಳನ್ನೊತ್ತು ತಾವಲ್ಲದೇ ತಮ್ಮ ಜೊತೆಗೆ ಮತ್ತಿಬ್ಬರು, ಅವರಿಗಿಬ್ಬರು... ಹೀಗೆ ಎಲ್ಲರನ್ನೂ ಕರೆದುಕೊಂಡು ಹೋಗಿ ತಾವು ಸೇರಿದಂತೆ ಹಳ್ಳಕ್ಕೆ ಬೀಳುವಷ್ಟರಲ್ಲಿಯೇ ತಿಳಿಯುವುದು ಕನಸುಗಳಿಗೆ ಜೀವವಿಲ್ಲ ಎಂಬುದು.

ಓಳನ್ನು ನಂಬಿ ಬೀದಿಗೆ...

ಸದಸ್ಯತ್ವ ಪಡೆದ ವ್ಯಕ್ತಿ ಒಂದು ವಸ್ತುವನ್ನು ಪಡೆದು ಸುಮ್ಮನಾದಲ್ಲಿ ಆತ ಬಹುಶಃ ಇಂತಹ ವಂಚನೆಯಿಂದ ಹೇಗೋ ಬಚಾವಾದೆ ಎನ್ನಬಹುದು. ಆದರೆ ಸಭೆಗಳಲ್ಲಿ


ಪ್ರತಿಭಟಿಸಿದ ಮಹಿಳಾ ಸಂಘದವರು...

ಚಪ್ಪಲಿ ಸೇವೆ ಮಾಡುವ ಮಟ್ಟಕ್ಕೆ ಬರುತ್ತಾರೆಂದರೆ ಅವರು ಇಂತಹ ವಂಚಕ ಸಂಸ್ಥೆಗಳಿಂದ ಅಲ್ಪಸ್ವಲ್ಪ ಕಳೆದುಕೊಂಡಿರಲು ಸಾಧ್ಯವಿರುವುದಿಲ್ಲ, ಈ ಸಂಸ್ಥೆಯ ವ್ಯವಸ್ಥೆ ಇರುವುದೇ ಹಾಗೆ. ಒಂದು ವಸ್ತುವನ್ನು ಪಡೆದು ಸದಸ್ಯರಾದರೆ ಸಾಕು ಎಂದು ಮೊದಲು ಹೇಳುವ ಇವರು ಆ ನಂತರ ಉಳಿದ ಎರಡು ಸದಸ್ಯತ್ವವನ್ನು ನೀವೇ ತೆಗೆದುಕೊಳ್ಳಿ, ಆಗ ನಿಮಗೆ ನೀವು ಹಾಕಿದ ಹಣಕ್ಕೆ ವಸ್ತುಗಳೂ ಸಿಗುತ್ತವೆ, ಜೊತೆಗೆ ನಿಮ್ಮ ಕೈಕೆಳಗೆ ಎರಡೂ ಕಡೆ ನೀವೇ ಇರುವುದರಿಂದ ಆ ನಂತರ ಬೆಳೆಯುವ ಸದಸ್ಯತ್ವದ ಹಣದಿಂದ ನಿಮಗೆ ಹೆಚ್ಚಿನ ಹಣ ಬರಲಿದ್ದು ಕಡಿಮೆ ಅವಧಿಯಲ್ಲಿಯೇ ನೀವು ಶ್ರೀಮಂತರಾಗಿಬಿಡಬಹುದೆಂಬ ಆಮಿಷ ತೋರಿಸುತ್ತಾರೆ. ಇದನ್ನು ನಂಬಿದ ಸಾಮಾನ್ಯ ತನಗರಿವಿಲ್ಲದೆಯೇ ತನ್ನಲ್ಲಿರುವ ಒಡವೆ, ವಸ್ತುಗಳನ್ನು ಮಾರಿ, ಅಡವಿಟ್ಟು, ವಸ್ತುಗಳನ್ನು ಖರೀದಿಸುತ್ತಾನೆ. ಸಾಲಮಾಡಿ ಹಣತೊಡಗಿಸಿದರಂತೂ ಆತ ಅಂದೇ ಸತ್ತಂತೆ. ಏಕೆಂದರೆ ಮುಂದೆ ನನಗೆ ಹಣ ಬರುತ್ತದೆಂದು ಕಾದು ಕುಳಿತಿರುವಾಗಲೇ ಈತ ಪಡೆದಿದ್ದ ಹಣಕ್ಕೆ ಎರಡರಷ್ಟು ಬಡ್ಡಿ ಬೆಳೆದು ನಿಂತಿರುತ್ತದೆ. ಇದರ ಜೊತೆಗೆ ಉಳಿದ ಇಬ್ಬರು ಸದಸ್ಯರನ್ನು ಹುಡುಕ ಹೊರಡುವ ಇವರು ತಮ್ಮ ನೆಂಟರಿಷ್ಟರೆಲ್ಲರನ್ನು ಪರಿಚಯಸ್ಥರನ್ನು ಇದಕ್ಕೆ ಎಳೆದು ತಂದಿರುತ್ತಾರೆ. ಶ್ರೀಮಂತಿಕೆಯ ಆಸೆ ಹೊತ್ತು ಹಣ ತೊಡಗಿಸಿದ ಅವರು ಹಣವೇ ಬಾರದಿದ್ದಾಗ ಇವರ ಹತ್ತಿರ ಬಂದು ಹೀನಾಮಾನವಾಗಿ ಬೈಯತೊಡಗಿದಾಗಲೇ ಇವರಿಗೆ ಅರಿವಾಗುವುದು ತಾವು ವಂಚನೆಗೆ ಒಳಗಾಗಿರುವುದು. ಇದರಿಂದ ಸಾಮಾನ್ಯರ ಜೀವನ ಯಾವ ಹಂತಕ್ಕೆ ತಲುಪುತ್ತದೆಂದು ಊಹಿಸಲೂ ಅಸಾಧ್ಯ ಅಲ್ಲವೇ!

ಪ್ರತ್ಯೇಕ ಬ್ಯಾಂಕ್.....!


ಕಂಪೆನಿಯ ಪ್ರಾಡಕ್ಟ್‌ಗಳು ಸದಸ್ಯರಾದವರ ಮನೆಯಲ್ಲಿ ಉಪಯೋಗಕ್ಕೆ ಬರಲು ಪ್ರಾರಂಭವಾದ ನಂತರವೇ ಅವುಗಳ ಗುಣಮಟ್ಟದ ಪರೀಕ್ಷೆ ಪ್ರಾರಂಭವಾಗುವುದು. ಮಾರುಕಟ್ಟೆಯಲ್ಲಿ ಎರಡರಿಂದ ಎರಡೂವರೆ ಸಾವಿರ ರೂ.ಗಳಿಗೆ ಸಿಗುವ ವಸ್ತುಗಳು ಇಲ್ಲಿ ಎಂಟು ಸಾವಿರ ರೂ. ಉಪಯೋಗಿಸಲ್ಪಟ್ಟ ಕೆಲವೇ ದಿನಗಳಲ್ಲಿ ತಮ್ಮನ್ನು ಸದಸ್ಯರನ್ನಾಗಿ ಮಾಡಿದವರ ಮನೆಯ ಮುಂದೆ ನಿಂತು ಬೈಯುವಷ್ಟು ಕಳಪೆ ಗುಣಮಟ್ಟವನ್ನು ಈ ವಸ್ತುಗಳು ಹೊಂದಿರುತ್ತವೆ. ಜೊತೆಗೆ ಹಣ ತೊಡಗಿಸಲು ಮುಂದಾದ ವ್ಯಕ್ತಿಗಳಿಂದ ಕಂಪೆನಿಯವರು ತಾವು ಹಣ ಪಡೆದು ಪ್ರತ್ಯೇಕ ಬ್ಯಾಂಕ್‌ವೊಂದರಲ್ಲಿ ಡಿಡಿ ತೆಗೆಸುತ್ತಾರೆ. (ಡಿಡಿ ಅದೆಷ್ಟು ಸತ್ಯವೋ?) ಅಂದರೆ ಎಲ್ಲೂ ಸಾರ್ವಜನಿಕ ಬ್ಯಾಂಕ್‌ಗಳಲ್ಲಿ ಇವರ ವಹಿವಾಟು ಇರುವುದಿಲ್ಲ, ಹಾಗೆಯೇ ಇವರು ನೀಡುವ ವಸ್ತುಗಳಲ್ಲಿ RMP ಎಂದು ಮೂಲೆಯಲ್ಲಿ ಹಚ್ಚೆಯಿರುವುದನ್ನು ಬಿಟ್ಟರೆ ಅದರ ಸಂಪೂರ್ಣ ಹೊಣೆಗಾರಿಕೆ ಡೀಲ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು ಅವರದ್ದಾಗಿದೆ. ಈ ಹೆಸರಿನ ಜೊತೆಗೆ ವಿತ್ ಸೀಲ್ ಸಹ ಇರುತ್ತದೆ. ಹಾಗೆಯೇ ಕಟ್ಟಿದ ಹಣಕ್ಕೆ ಯಾವುದೇ ರೀತಿಯ ಬಾಂಡ್ ಇರುವುದಿಲ್ಲ, ನಮ್ಮ RMP ಸರ್ಕಾರಕ್ಕೆ ತೆರಿಗೆ ಪಾವತಿಸುತ್ತದೆಂದು ಹೇಳುವ ಸಂಸ್ಥೆಯವರು ಅದಕ್ಕಾಗಿ ಯಾವುದೇ ದಾಖಲೆ ಕೊಡುವುದಿಲ್ಲ, ಆದರೆ ಆ ಹಣ ತೆರಿಗೆ ರೂಪದಲ್ಲಿ ಹೋಗುವುದು ಸದಸ್ಯತ್ವ ಪಡೆದ ವ್ಯಕ್ತಿಗೆ ಒಂದು ಜೋಡಿ ಸದಸ್ಯರನ್ನು ರೂಪಿಸಿದ ಮೇಲೆ ಬರುವ ಚೆಕ್‌ನಲ್ಲಿ ಅಂದರೆ ಒಂದು ಜೋಡಿಯಿಂದ ಬರುವ 1000ರೂ.ನಲ್ಲಿ ಕೇವಲ ಏಳು ನೂರು ಚಿಲ್ಲರೆ ಮಾತ್ರ ಇವರ ಕೈಸೇರುವುದು. ಉಳಿದ ಇನ್ನೂರು ಚಿಲ್ಲರೆ ತೆರಿಗೆ ರೂಪದಲ್ಲಿ ಸಂದಾಯವಾಗಿರುತ್ತದೆ. ಅಲ್ಲೇ ಮೋಸದ ಛಾಯೆ ಕಂಡರೂ ಹಳ್ಳಕ್ಕೆ ಬೀಳುವುದು ಎಂತಹ ವಿಪರ್ಯಾಸ ಅಲ್ಲವೇ?

ವಂಚಕ ಅಭಿಲಾಷ್ ಥಾಮಸ್

ನಂ.100, ಮೊದಲನೇ ಮಹಡಿ, ಮಹಾಲಿಂಗಪುರಂ ಮುಖ್ಯರಸ್ತೆ, ನುಂಗಂಬಾಕ್ಕಂ, ಚೆನ್ನೈ ನಮ್ಮ ವಿಳಾಸ ಎಂದು ಹೇಳಿಕೊಳ್ಳುವ RMP ಯ ಪಿಲ್ಲರ್ಸ್ ಅಭಿಲಾಷ್ ಥಾಮಸ್ ಮತ್ತು ಪ್ರೇಮ್‌ಕುಮಾರ್ ಎಂಬುವವರು. ಇವರು ಬೆಂಗಳೂರಿಗೆ ಬಂದರೆ ಇವರನ್ನು ಮೆರವಣಿಗೆಯ ಸಮೇತ ಆಹ್ವಾನಿಸಲಾಗುತ್ತದೆಂದು ವಂಚನೆಗೊಳಗಾದವರೊಬ್ಬರು ಹೇಳುತ್ತಾರೆ. ಬಡವರ ಹಣ ಲೂಟಿ ಮಾಡುವ ಇವರು ಅಚೀವರ್ಸ್ ಮೀಟಿಂಗ್ ಅಂತ ಹೇಳಿ ರೆಸಾರ್ಟ್‌ಗಳಲ್ಲಿ ಪಾರ್ಟಿ, ಮೋಜುಗಳಲ್ಲಿ ತೊಡಗುತ್ತಾರೆ. ಕಡೂರು, ಶಿವಮೊಗ್ಗ ಮೂಲದ ಯತೀಶ್, ಯೋಗೀಶ್, ಸುರೇಶ್, ರಮೇಶ್ ಎಂಬುವವರು ಬೆಂಗಳೂರು ಮಟ್ಟಕ್ಕೆ ಪ್ರಮುಖರೆನಿಸುತ್ತಾರೆ. ಇವರೆಲ್ಲರೂ ಗೋಲ್ಡ್ ಅಚೀವರ್ಸ್‌ಗೆ ಬಂದಿದ್ದೇವೆ ಎಂದು ಪ್ರತಿ ಸಭೆಗಳಲ್ಲೂ ಹೇಳಿಕೊಳ್ಳುತ್ತಾರೆ. ಸಭೆಗಳಲ್ಲಿ ಸೇರುವ ಜನರ ಕ್ಲಾಪ್ಸ್ ಮತ್ತು ಸಭೆಗಳನ್ನು ನಡೆಸುವವರು ಆಡುವ ವಂಚನೆಯ ಮಾತುಗಳೇ ಇವರ ಈ ಸಂಸ್ಥೆಯ ಬಂಡವಾಳ. ಬೆಂಗಳೂರು ಸುತ್ತಮುತ್ತಲಿನ ಬಿಡದಿ, ಕೆಂಗೇರಿ, ರಾಮನಗರ, ಚೆನ್ನಪಟ್ಟಣ, ನೆಲಮಂಗಲ ಹೀಗೆ ರಾಜ್ಯಾದ್ಯಂತ ವಿಸ್ತರಿಸಲ್ಪಟ್ಟಿರುವ RMP ದಿನಗೂಲಿ ನೌಕರರನ್ನು, ಹೊಲಗದ್ದೆಗಳಲ್ಲಿ ದುಡಿದು ನಾಲ್ಕು ಕಾಸು ಸಂಪಾದನೆ ಮಾಡಿ ಲೋಕಜ್ಞಾನ ಅರಿಯದ ಮುಗ್ಧರನ್ನೇ ತನ್ನ ಟಾರ್ಗೆಟ್ ಮಾಡಿಕೊಂಡಿದೆ.

ನಮ್ಮಲ್ಲೇ ಸಿಎಂ, ಡಿಸಿ, ರವಿಚಂದ್ರನ್...

ಇಂತಹ ಸಂಸ್ಥೆಗಳಲ್ಲಿ ಹಣ ಹೂಡಿ ತಾವು ವಂಚನೆಗೊಳಗಾದದ್ದನ್ನು ತಿಳಿದು, ತಮ್ಮ ಮನೆಯ ಯಜಮಾನರನ್ನು ಕೇಳದೆ ತಾವೇ ಇದರೊಳಗೆ ಹಣ ತೊಡಗಿಸಿ, ವಂಚನೆಗೊಳಗಾಗಿ ತಮ್ಮ ಗಂಡಂದಿರಿಂದ ಉಗಿಸಿಕೊಳ್ಳುತ್ತಿರುವ ಅದೆಷ್ಟೋ ಹೆಣ್ಣುಮಕ್ಕಳು ಇಂದು ಅನೇಕ ಸಂಘಸಂಸ್ಥೆಗಳಲ್ಲಿ ತಮ್ಮ ಅಳಲನ್ನು ತೋಡಿಕೊಂಡಿವೆ. ಮಹಿಳಾ ಸಂಘಟನೆಗಳು ಇವರ ಅಳಲನ್ನು ಆಲಿಸಿ ಪರಿಹಾರ ಕೊಡಿಸುವ ದೃಷ್ಟಿಯಿಂದ ಇವರಲ್ಲಿಗೆ ಹೋದರೆ ಗೂಂಡಾವರ್ತನೆಯಿಂದ ಅವಾಚ್ಯ ಶಬ್ದಗಳಿಂದ ಇವರನ್ನು ಬೈದು ಕಳುಹಿಸಿರುವ ಪ್ರಸಂಗಗಳೂ ನಡೆದಿವೆ. ಬೆಂಗಳೂರಿನ ಸುಬ್ರಹ್ಮಣ್ಯಂನಗರದ ವುಮೆನ್ಸ್ ವೆಲ್‌ಫೇರ್ ಕಮಿಟಿ ಮಹಿಳಾ ಸಂಘಟನೆಯು ಈ ರೀತಿಯ ಒಂದು ದೂರನ್ನು ಕೈಗೆತ್ತಿಕೊಂಡರು. ಸಂಸ್ಥೆಯ ವಂಚನೆಯ ಬಗ್ಗೆ ದೂರು ನೀಡುವುದಾಗಿ ಹೇಳಿದಾಗ ನಮ್ಮ RMP ಯಲ್ಲೇ ಸಿಎಂ, ಡಿಸಿ ಎಲ್ಲರೂ ಹಣ ತೊಡಗಿಸಿದ್ದಾರೆ. ಅದೆಲ್ಲಿ ಕಂಪ್ಲೇಂಟ್ ಕೊಡುತ್ತೀರೋ ಕೊಡಿ ಎಂದು ಗದರಿಸುತ್ತಾರೆ. ಅಷ್ಟೇ ಅಲ್ಲದೆ ಸಿನಿಮಾರಂಗದ ಕ್ರೇಜಿಸ್ಟಾರ್ ರವಿಚಂದ್ರನ್ ಸಹ ನಮ್ಮಲ್ಲಿ ಹಣ ತೊಡಗಿಸಿದ್ದಾರೆಂದು ಹೇಳುತ್ತಾರೆ. ಹಾಗೆಯೇ ಇವರು ನಡೆಸುವ ಸಭೆಗಳಲ್ಲಿ ಯಾವುದೇ ರೀತಿಯ ಅಚೀವರ್ಸ್ ಅಲ್ಲದಿದ್ದರೂ 'ಲಲಿತಾ' ಎಂಬುವವರೊಬ್ಬರನ್ನು 'ಸಿಲ್ವರ್ ಅಚೀವರ್ಸ್' ಅಂತ ಸ್ಟೇಜ್‌ಗೆ ಕರೆದು ತೋರಿಸಿರುವ ದಾಖಲೆಯೂ ಇದೆ. ಹಾಗೆಯೇ ಮೂರನೇ ಕ್ಲಾಸ್ ಓದಿರುವ 'ಪುಷ್ಪ' ಎಂಬ ಗಾರ್ಮೆಂಟ್ಸ್ ಉದ್ಯೋಗಿಯೊಬ್ಬಳು RMP ಯಿಂದಾಗಿ ಇಂದು ಪ್ರತಿವಾರಕ್ಕೆ 1,25,000 ರೂ.ಸಂಪಾದಿಸುತ್ತಿರುವ


DEALS DISTRIBUTORS - BANGALORE
VAT INVOICE
- Thanks ! Grow With Us ! -


ಡೀಲ್ಸ್ ಡಿಸ್ಟ್ರಿಬ್ಯೂಟರ್ಸ್ ಡೀಲ್‌ಗಳು...

ದಾಖಲೆಯನ್ನು ನೀಡುತ್ತಾರೆ. ಪ್ರತಿಯೊಂದು ಮೀಟಿಂಗ್‌ಗಳಲ್ಲೂ ಹೀಗೆ ಹೇಳುವ ಇವರು ಪುಷ್ಪಳ ಅಂಡರ್‌ನಲ್ಲಿ ಸದಸ್ಯತ್ವ ಪಡೆದಿರುವವರ ಬಗ್ಗೆ ಮಾತ್ರ ಮಾಹಿತಿ ನೀಡುವುದಿಲ್ಲ, ಅಂದರೆ ಅವರೂ ಸಹ ಅಚೀವರ್ಸ್ ಆಗಿರಬೇಕಲ್ಲ? ಈ ಪ್ರಶ್ನೆ ಮಹಿಳಾ ಸಂಘದ ಅಧ್ಯಕ್ಷೆ ಪ್ರೇಮಾರಾಮಮೂರ್ತಿಯವರದ್ದು.

ಬಡ್ಡಿ ವ್ಯವಹಾರಗಳು, ಚೈನ್‌ಲಿಂಕ್ ಸಿಸ್ಟಮ್ಸ್‌ಗಳು, ಅನೇಕ ಚಿಟ್ ಫಂಡ್‌ಗಳು ಶ್ರೀ ಸಾಮಾನ್ಯರನ್ನು ವಂಚಿಸುತ್ತಲೇ ಬಂದಿವೆ. ಈ ಬಗ್ಗೆ ಅನೇಕ ಪತ್ರಿಕೆಗಳು ಸುದ್ದಿ ಮಾಧ್ಯಮಗಳು ಹೇಳುತ್ತಲೇ ಬಂದಿವೆ. ಈ RMP ಕೂಡ 'ನುಂಗುಬಾಕ' ಸಂಸ್ಥೆಯೆಂದೂ ಸಹ ಹೇಳಲಾಗಿತ್ತು. ಆದರೂ ವಂಚಿಸುವವರ ಮುಂದೆ ವಂಚನೆಗೊಳಗಾಗುವವರೂ ಇದ್ದೇ ಇರುತ್ತಾರೆ ಎಂಬುದಕ್ಕೆ RMP ಯ ವಂಚನೆಯೇ ಸಾಕ್ಷಿ. ಇದರಿಂದಾಗಿ ಇಂದು ಅದೆಷ್ಟೊ ಜನರು ಬೀದಿಗೆ ಬಿದ್ದಿದ್ದಾರೆ. ದುಡಿದು ಕೂಡಿಟ್ಟ ಹಣ ಕಳೆದುಕೊಂಡು, ತಮ್ಮ ಸಂಬಂಧಿಕರಿಂದ ನಿಂದನೆಗೊಳಗಾಗಿರುವದೆಷ್ಟೊ ಮಹಿಳೆಯರು ರೋಸಿಹೋಗಿ ಕಳೆದವಾರವಷ್ಟೇ ಕೆ.ಆರ್.ರಸ್ತೆಯ ಕುವೆಂಪು ಕಲಾಕ್ಷೇತ್ರದಲ್ಲಿ ನಡೆದ RMP ಏಜೆಂಟರ ಸಭೆಯಲ್ಲಿ ಚಪ್ಪಲಿ ಸೇವೆ ಮಾಡಿದ್ದಾರೆ. ಅದೇನೇ ಇರಲಿ, ಈ ಹಿಂದೆಯೇ ಇಂತಹ ಅನೇಕ ನಿದರ್ಶನಗಳು ನಮ್ಮ ಕಣ್ಮುಂದೆ ಇದ್ದರೂ ಇಂತಹ ಚೈನ್‌ಲಿಂಕ್ ಸಂಸ್ಥೆಗಳಿಗೆ ಮಾರುಹೋಗುವ ಮುನ್ನಾ ಯೋಚಿಸುವ ಅಗತ್ಯವಿದೆ. ಇಂತಹ ವಂಚಕ ಕಂಪೆನಿಗಳ ವಿರುದ್ಧ ಪೊಲೀಸರು ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಇದೆ.

-ಶಿವಮೂರ್ತಿ ಬೂದಿತಿಟ್ಟು

ನಾಗೇಂದ್ರ ರೆಡ್ಡಿ ಎನ್‌ಕೌಂಟರ್
ಅರ್ಧ ಅಂಡರ್‌ವರ್ಲ್ಡ್ ಪರಾರಿ



ರೇಪಿಸ್ಟ್ ಶಂಕರ್ ಮತ್ತು ಪೆದ್ದಗುಂಡನ ಎನ್‌ಕೌಂಟರ್ ನಡೆದು ಇನ್ನೂ ತಿಂಗಳಾಗಿಲ್ಲ, ಆಗಲೇ ರಕ್ತಪಿಪಾಸು ನಾಗೇಂದ್ರ ರೆಡ್ಡಿಯ ಹೆಣ ಬಿದ್ದಿದೆ. ಇದು ಬೆಂಗಳೂರಿನ ಪಾಪಕೂಪಕ್ಕೆ ಪೊಲೀಸ್ ಕಮೀಷನರ್ ಬಿದರಿ ಬಿಸಿ ಮುಟ್ಟಿಸಿದ ವೈಖರಿ. ರೌಡಿಗಳಿಗಿನ್ನು ಉಳಿಗಾಲವಿಲ್ಲ ಎನ್ನುವ ಸ್ಪಷ್ಟ ಸಂದೇಶ. ಸದ್ಯ ಅಳಿದುಳಿದ ರೌಡಿಗಳೆಲ್ಲ ಬೆಂಗಳೂರು ಬಿಟ್ಟಿದ್ದಾರೆ. ಉಳಿದ ಬಹುತೇಕರು ಜೈಲು ಸೇರಿ ಪ್ರಾಣ ಉಳಿಸಿಕೊಳ್ಳಲು ಹವಣಿಸುತ್ತಿದ್ದಾರೆ.

ಒಂದೋ ಜೈಲು ಇಲ್ಲವೇ ಗಡಿಪಾರು ಎಂಬ ಪೊಲೀಸ್ ಕಮೀಷನರ್ ಬಿದರಿಯ ಚಂಡಶಾಸನ ಸದ್ಯ ಇಡೀ ಅಂಡರ್‌ವರ್ಲ್ಡ್ ಅದನ್ನೇ ಥರಗುಡುವಂತೆ ಮಾಡಿದ್ದಕ್ಕೆ ನಾಗೇಂದ್ರ ರೆಡ್ಡಿಯ ಎನ್‌ಕೌಂಟರ್ ತಾಜಾ ಉದಾಹರಣೆಯಷ್ಟೇ.

ನಾಗೇಂದ್ರ ರೆಡ್ಡಿ ಅಲಿಯಾಸ್ ನಾಗಿರೆಡ್ಡಿ ಉರ್ಫ್ ಬಪ್ಪು ಯಾನೇ ನಂದಕುಮಾರ್ ಬೇರೆಲ್ಲ ಪಾತಕಿಗಳಂತೆ ಅನಕ್ಷರಸ್ಥನಾಗಲಿ, ಅರೆ ವಿದ್ಯಾವಂತನಾಗಲಿ ಅಲ್ಲ. ಆತ ಸಾಫ್ಟ್‌ವೇರ್ ಲೋಕದ ಕ್ರಿಮಿನಲ್. ಮೂಲತಃ ಆಂಧ್ರಪ್ರದೇಶ ಸಿಕಂದರಾಬಾದ್‌ನ ಮದನಮೋಹನ ರೆಡ್ಡಿ ಮತ್ತು ಪ್ರಭಾದೇವಿ ದಂಪತಿಗಳ ಹಿರಿಯ ಮಗನಾದ ನಾಗೇಂದ್ರ ರೆಡ್ಡಿ ಸಾಫ್ಟ್‌ವೇರ್ ಇಂಜಿನಿಯರ್. ವೆಬ್ ಡಿಸೈನಿಂಗ್‌ನಲ್ಲಿ ಪರಿಣತಿ ಸಾಧಿಸಿ 2002 ರಲ್ಲಿ ಲಂಡನ್ನಿಗೆ ಉದ್ಯೋಗಕ್ಕೆಂದು ಹೋದ ಈತ ಸ್ವಭಾವತಃ ಪಾತಕಿಯಲ್ಲ, ಆದರೆ ಪರಿಸ್ಥಿತಿ, ಸನ್ನಿವೇಶ ಮತ್ತು ದುರಾಶೆ ಹೇಗೆ ಸುಶಿಕ್ಷಿತನೊಬ್ಬನನ್ನು ಪೈಶಾಚಿಕ ಹಂತಕನನ್ನಾಗಿ ರೂಪಿಸುತ್ತದೆ ಎಂಬುದಕ್ಕೆ ಈತ ನಿದರ್ಶನವಷ್ಟೇ.

ಲಂಡನ್ನಿನಲ್ಲಿ ಈತನಿಗೆ ಆಶ್ರಯ ಕೊಟ್ಟವನು ಮತ್ತೊಬ್ಬ ಸಾಫ್ಟ್‌ವೇರ್ ಇಂಜಿನಿಯರ್ ರಾಧಾಕೃಷ್ಣ ಚೇಪೂರ್. ಅದೇನು ಹರಕತ್ತಿತ್ತೋ 2004ರ ಸೆಪ್ಟೆಂಬರ್ 29 ರಂದು ರೆಡ್ಡಿ ತನ್ನ ಜೊತೆ ಕುಡಿಯುತ್ತಾ ಕೂತಿದ್ದ ಗೆಳೆಯ ರಾಧಾಕೃಷ್ಣನನ್ನೇ ಇರಿದು ಕೊಂದುಬಿಟ್ಟ. ಅದೂ ಗೆಳೆಯನ ಎಪ್ಪತ್ತು ಸಾವಿರ ಪೌಂಡ್‌ಗಳಷ್ಟು ದುಡ್ಡಿಗಾಗಿ!

ಹಾಗೇ ಗೆಳೆಯನನ್ನು ಕೊಂದವನು ಆತನ ದೇಹವನ್ನು ಸಣ್ಣಸಣ್ಣ ತುಂಡಾಗಿ ಕತ್ತರಿಸಿ ಲಂಡನ್ ಹೊರವಲಯದ ನಿರ್ಜನ ಪ್ರದೇಶಕ್ಕೆ ತಂದು ಸುಟ್ಟು ಹಾಕಿದ್ದ. ಅದೇ ಎಪ್ಪತ್ತು ಸಾವಿರ ಪೌಂಡ್‌ಗಳನ್ನು ಹಿಡಿದು ಭಾರತಕ್ಕೆ ವಾಪಸ್ಸಾದ. ಇದು ಪಾತಕಲೋಕದಲ್ಲಿ ಆತನ ಮೊದಲ ಕೊಲೆಯಾಗಿತ್ತು. ಲಂಡನ್‌ನಿಂದ ಮುಂಬಯಿಗೆ ಬಂದು ನಂತರ ಬೆಂಗಳೂರು ಹೊಕ್ಕ ರೆಡ್ಡಿ ಪದೇಪದೇ ತನ್ನ ಹೆಸರನ್ನು ಬದಲಿಸುತ್ತಿದ್ದ. ದೆಹಲಿಯ ಮದನ್ ಎಂಬಾತನನ್ನು ಪರಿಚಯಿಸಿಕೊಂಡ. ಇಬ್ಬರೂ ಸೇರಿ ಕಾರು ಕದಿಯುತ್ತಿದ್ದರು.


ಬಹುಶಃ ದುಡ್ಡು ಖಾಲಿಯಾಗಿರಬೇಕು. ಹೊಸ ಬಕರವೊಂದರ ಹುಡುಕಾಟದಲ್ಲಿದ್ದ ರೆಡ್ಡಿಗೆ ಅದ್ಯಾವುದೋ ಘಳಿಗೆಯಲ್ಲಿ ತನ್ನ ಬಾಲ್ಯದ ಗೆಳೆಯ ರಾಜೇಶ್ ಅರ್ಥಂ ಎಂಬಾತನ ನೆನಪಾಗಿದೆ. ಈ ರಾಜೇಶ್ ಬೆಂಗಳೂರಿನ ಸಾದ್ರಿಪುರಂನ ಸತ್ಯ ಕಂಪ್ಯೂಟರ್‌ನಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿದ್ದ. ಈತನಿಗೆ ದೆಹಲಿಯಿಂದಲೇ ಫೋನ್ ಹೊಡಿದ ರೆಡ್ಡಿ ತಾನು ಬೆಂಗಳೂರಿಗೆ ಬರುತ್ತಿದ್ದೇನೆಂದೂ ಇಬ್ಬರೂ ಸೇರಿ ಒಳ್ಳೆಯದೊಂದು ಪಾರ್ಟಿ ಮಾಡೋಣವೆಂದೂ ನಂಬಿಸಿಬಿಟ್ಟ.

ಇದನ್ನು ನಂಬಿದ ರಾಜೇಶ್ ಮೆಜೆಸ್ಟಿಕ್‌ನ ಬಳೇಪೇಟೆಯಲ್ಲಿದ್ದ ವಿಶಾಲಕ್ಷ್ಮಿ ಲಾಡ್ಜಿನಲ್ಲಿ ತನ್ನ ಹೆಸರಲ್ಲೇ ರೂಮೊಂದನ್ನು ಬುಕ್ ಮಾಡಿದ್ದ, ಅದು 2005 ರ ಜನವರಿ 19. ಮದನ್, ರೆಡ್ಡಿ ಮತ್ತು ರಾಜೇಶ್ ಸೇರಿಕೊಂಡು ಪಾರ್ಟಿ ಮಾಡುತ್ತಿದ್ದಂತೆಯೇ ರಕ್ತ ಹರಿದಿತ್ತು, ರೆಡ್ಡಿ ಮತ್ತು ಮದನ್ ಇಬ್ಬರೂ ಸೇರಿ ರಾಜೇಶ್‌ನನ್ನು ಉಸಿರುಗಟ್ಟಿಸಿ ಕೊಂದರು. ಆತನ ರುಂಡ ಬೇರ್ಪಡಿಸಿದರು. ಮತ್ತದೇ ಬರ್ಬರತೆ ಮೆರೆದ ರಾಜೇಶನ ದೇಹವನ್ನು ತುಂಡು ತುಂಡು ಮಾಡಿ ಎಲ್ಲೆಂದರಲ್ಲಿ ರಸ್ತೆಯುದ್ದಕ್ಕೆ ಎಸೆದಿದ್ದರು. ಹೀಗೆ ಗೆಳೆಯನನ್ನೇ ಬರ್ಬರವಾಗಿ ಕೊಂದ ರೆಡ್ಡಿ ಏನೂ ಗೊತ್ತಿಲ್ಲದಂತೆ ಆತನ



ಅಂತ್ಯಸಂಸ್ಕಾರದಲ್ಲಿ ಭಾಗವಹಿಸಿದ್ದ. ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದವರೆಲ್ಲರ ಫೋಟೋ ತೆಗೆದು ಅದನ್ನು ಲಾಡ್ಜಿನ ಸಿಬ್ಬಂದಿಗೆ ತೋರಿಸಿದಾಗಲೇ ರೆಡ್ಡಿಯ ಗುರುತು ಸಿಕ್ಕಿದ್ದು!

ಆಗ ಡಿಸಿಪಿಯಾಗಿದ್ದ ಕೆ.ವಿ. ಶರತ್‌ಚಂದ್ರ ಆಂಧ್ರಕ್ಕೇ ತಂಡ ಕಳಿಸಿ ರೆಡ್ಡಿಯನ್ನು ಬಂಧಿಸಿ ತಂದಿದ್ದರು. ಜೈಲು ಸೇರಿದವನು ತನ್ನ ಆರೋಗ್ಯ ಸರಿಯಿಲ್ಲ ಎಂದು ವಿಕ್ಟೋರಿಯಾ ಆಸ್ಪತ್ರೆಗೆ ಬಂದವನು 2006 ರ ಆಗಸ್ಟ್‌ನಲ್ಲಿ ಪೊಲೀಸರನ್ನೇ ಯಾಮಾರಿಸಿ ಪರಾರಿಯಾದ. ಮತ್ತೆ ಸೀದಾ ಹೈದರಾಬಾದಿಗೆ ಬಂದವನು ಅಲ್ಲಿ ಕಾರೊಂದನ್ನು ಬಾಡಿಗೆಗೆ ಪಡೆದು ಅದರ ಡ್ರೈವರ್‌ನನ್ನೇ



ಕೊಂದುಬಿಟ್ಟ. ಇಲ್ಲೂ ಅಷ್ಟೇ, ಆತನ ರುಂಡ ಬೇರ್ಪಡಿಸಿ, ದೇಹವನ್ನು ತುಂಡು ತುಂಡು ಮಾಡಿ ರಸ್ತೆಗುಂಟ ಎಸೆದಿದ್ದ. ಕಾರನ್ನು ಮಾರುವಾಗಲೇ ಮತ್ತೆ ಹೈದ್ರಾಬಾದ್ ಪೊಲೀಸರಿಗೆ ಸಿಕ್ಕಿಬಿದ್ದ. ಬೆಂಗಳೂರು ಪೊಲೀಸರು ಮತ್ತೆ ರೆಡ್ಡಿಯನ್ನು ಕಸ್ಟಡಿಗೆ ಪಡೆದು ಬೆಂಗಳೂರು ಜೈಲಿಗೆ ಹಾಕಿದರೆ ಅಲ್ಲಿ ರೆಡ್ಡಿ ನಟೋರಿಯಸ್ ಪಾತಕಿ ದೀಡಿ ರವಿಗೆ ಜೊತೆಯಾದ.


ಡೀಡಿ ರವಿ ಹೇಳಿಕೇಳಿ ಚಾಣಾಕ್ಷ ಪಾತಕಿ. ಇಬ್ಬರೂ ಸೇರಿ ಜೈಲಲ್ಲಿ ಕೂತೇ ಹುಡುಗರನ್ನು ಬಿಟ್ಟು ಬಾಡಿಗೆ ಕಾರುಗಳನ್ನು ಹಿಡಿದು ಡ್ರೈವರ್‌ಗಳನ್ನು ಕೊಂದು ಕಾರುಗಳನ್ನು ಮಾರಿಸುತ್ತಿದ್ದರು. ಡೀಡಿ ರವಿ ಮೂಲಕ ರೆಡ್ಡಿಗೆ ಪರಿಚಿತನಾಗಿದ್ದ ಶಬ್ಬೀರ್ ಎಂಬಾತ ತಮಿಳುನಾಡಿನಲ್ಲೊಂದು, ಸೂಲಿಬೆಲೆಯಲ್ಲೊಂದು ಹೀಗೆ ಇಬ್ಬರು ಡ್ರೈವರ್‌ಗಳನ್ನು ಕೊಂದು ಕಾರು ಮಾರಿ ಜೈಲಲ್ಲಿದ್ದ ನಾಗೇಂದ್ರನಿಗೆ ದುಡ್ಡು ತಲುಪಿಸಿದ್ದ. ಇದು ಗೊತ್ತಾಗಿದ್ದೇ ಪೊಲೀಸರು ಪರಪ್ಪನ ಅಗ್ರಹಾರ ಜೈಲಲ್ಲಿದ್ದ ರೆಡ್ಡಿಯನ್ನು ಬೆಳಗಾವಿಗೆ ಎತ್ತಂಗಡಿ ಮಾಡಿಸಿದ್ದರು. ಬೆಳಗಾವಿ ಹಿಂಡಲಗಾ ಜೈಲಲ್ಲಿ ತನ್ನ ಕೈ ಕುಯ್ದುಕೊಂಡು ಆಸ್ಪತ್ರೆ ಸೇರಿದ ರೆಡ್ಡಿ 2007 ರ ಮೇ ಏಳರಂದು ತನ್ನ ಕಾವಲಿಗಿದ್ದ ಚಂದ್ರಕಾಂತ್ ಕಾಂಬಳೆ ಎಂಬ ಪೊಲೀಸ್ ಪೇದೆಯನ್ನೇ ಕೊಂದು ಪರಾರಿಯಾದ. ಈ ಹೊತ್ತಿಗಾಗಲೇ ಹುಷಾರಾದ ಲಂಡನ್ ಪೊಲೀಸರು ಸೈಕೋ ಟೆಕ್ಕಿ ನಾಗೇಂದ್ರ ರೆಡ್ಡಿಯ ಹೆಸರನ್ನು ಇಂಟರ್‌ಪೋಲ್‌ನ ವಾಂಟೆಡ್ ಪಟ್ಟಿಗೆ ಸೇರಿಸಿದ್ದರು. ಕೊಲೆ, ಕೊಲೆಯತ್ನ, ಸುಲಿಗೆ, ಕಾರುಗಳ್ಳತನ ಇತ್ಯಾದಿ ಹದಿಮೂರು ಪ್ರಕರಣಗಳಲ್ಲಿ ರೆಡ್ಡಿ ಭಾಗಿಯಾಗಿದ್ದ. ಇಂಟರ್‌ಪೋಲ್ ಮಾತ್ರವಲ್ಲದೇ ಕಮೀಷನರ್ ಶಂಕರ್ ಬಿದರಿಯೇ ಈತನ ಬಗ್ಗೆ ಸುಳಿವು ಕೊಟ್ಟವರಿಗೆ ಇನಾಮು ಘೋಷಿಸಿದ್ದರು.

ಇಂಥಾ ಪಾತಕಿಯ ಬೆನ್ನು ಬಿದ್ದದ್ದು ಸಿಸಿಬಿಯ ಎಸಿಪಿ ಸ್ವಾಮಿಗೌಡ. ಸಿಸಿಬಿಯ ಪಳಗಿದ ಎಸ್.ಐ. ನಾಗಣ್ಣಗೌಡ ಉಪಾಯವಾಗಿ ದೀಡಿ ರವಿಯ ಮನವೊಲಿಸಿ ರೆಡ್ಡಿಯ ಬಗ್ಗೆ ಮಾಹಿತಿ ನೀಡುವಂತೆ ಪುಸಲಾಯಿಸಿದ್ದಾರೆ. ದೀಡಿ ರವಿ ಪಕ್ಕಾ ಖಾಖಿಂಡಿ. ತನ್ನ ಕಡೆಯ ಹುಡುಗನೊಬ್ಬನನ್ನು ಉಪಾಯವಾಗಿ ರೆಡ್ಡಿ ಜೊತೆ ಓಡಾಡಲು ಬಿಟ್ಟು ಆತನ ಪ್ರತಿ ಚಲನೆಯನ್ನೂ ಪೊಲಿಸರಿಗೆ ಮುಟ್ಟಿಸಿದ್ದಾನೆ. ಜನವರಿ 31 ರ ಸೋಮವಾರ ರಾತ್ರಿ ಬ್ಯಾಂಕ್ ಒಂದರ ದರೋಡೆ ಮಾಡುವ ಸಂಚು ಹಾಕಿದ್ದ ರೆಡ್ಡಿ ತನ್ನ ಕವೇರಾ ಕಾರಿನಲ್ಲಿ ರಾಮಮೂರ್ತಿನಗರದ ಕಲ್ಕೆರೆ ಮುಖ್ಯ ರಸ್ತೆಯತ್ತ ಬರುತ್ತಿದ್ದಾನೆಂಬ ಸುದ್ದಿ ಸಿಕ್ಕಿದೆ. ಇಡೀ ಸಿಸಿಬಿ ತಂಡ ರಾಮಮೂರ್ತಿ ನಗರದ ರಿಂಗ್ ರಸ್ತೆಯಲ್ಲಿ ಹೊಂಚು ಕುಳಿತಿರುವಾಗಲೇ ರೆಡ್ಡಿಯ ಕಾರು ಬಂದಿದೆ. ಪೊಲೀಸರನ್ನು ಕಂಡಿದ್ದೇ ಗುಂಡು ಹಾರಿಸಿದ ನಾಗೇಂದ್ರ ರೆಡ್ಡಿ ಫೆಬ್ರವರಿ 1 ರ ಮಂಗಳವಾರ ಬೆಳಗ್ಗೆ ಸಿಸಿಬಿ ಪೊಲೀಸರ ಗುಂಡು ತಿಂದು ನಿಕಾಲಿಯಾಗಿದ್ದಾನೆ. ಬಹುಶಃ ಬೆಂಗಳೂರು ಅಂಡರ್‌ವರ್ಲ್ಡ್‌ಗೊಂದು ಬಿಸಿ ಮುಟ್ಟಿಸುವ ಲೆಕ್ಕ ಹಾಕಿಯೇ ಕಮಿಷನರ್ ಬಿದರಿ ನಾಗೇಂದ್ರ ರೆಡ್ಡಿಯ ಎನ್‌ಕೌಂಟರ್‌ಗೆ ಗ್ರೀನ್‌ಸಿಗ್ನಲ್ ಕೊಟ್ಟಿರಬೇಕು.

ಈ ರೆಡ್ಡಿಗಿಂತಲೂ ಮೊದಲು ಪೊಲೀಸರ ಎನ್‌ಕೌಂಟರ್ ಪಟ್ಟಿಯಲ್ಲಿದ್ದದ್ದು ಚಾಮರಾಜಪೇಟೆಯ ಪಾತಕಿ ಮಾಹಿನ್‌ನ ಹೆಸರು. ಜೆಡಿಎಸ್ ಕೌನ್ಸಿಲರ್ ದಿವಾನ್ ಅಲಿಯನ್ನು ಬಳ್ಳಾರಿ ಜೈಲಲ್ಲಿದ್ದ ಅಜಗರ್‌ನ ಮೂಲಕ ಉಪಾಯವಾಗಿ ಕೊಲ್ಲಿಸಿದವನು ಮಾಹಿನ್. ಸದ್ಯ ಮುಸ್ಲಿಂ ಅಂಡರ್‌ವರ್ಲ್ಡ್‌ನ ತನ್ವೀರ್, ಇಷ್ತಿಯಾಕ್ ಪೈಲ್ವಾನ್, ಬ್ರಿಗೇಡ್ ಆಜಮ್, ಅತ್ತೂಪ್, ರಿಜ್ವಾನ್, ಗೋರಿಪಾಳ್ಯದ ಆರಿಫ್ ಮತ್ತಾತನ ಮಗ ಇಮ್ರಾನ್ ಮುಂತಾದವರೆಲ್ಲ ತಾವಾಯಿತು ತಮ್ಮ ಉಸಾಬರಿಯಾಯಿತು ಎಂಬಂತಿರುವಾಗಲೇ ಮಾಹಿನ್ ದುಸ್ಸಾಹಸಕ್ಕೆ ಕೈಹಾಕಿದ್ದಾನೆ.

ಆಲಿಯ ಹತ್ಯೆ ನಡೆದು ತಿಂಗಳಾಗುತ್ತಾ ಬಂದರೂ ಮಾಹಿನ್ ಪತ್ತೆಯಿಲ್ಲ, ಹಾಗಂತ ಪೊಲೀಸರು ಬಿಡಬೇಕಲ್ಲ, ಮಾಹಿನ್‌ನ ಬಲಗೈ ಬಂಟ ಬೈಲ್‌ಜಿಯಾ ಫೆಬ್ರವರಿ 1 ರಂದು ಸಿಸಿಬಿ ಪೊಲೀಸರ ಬಲೆಗೆ ಬಿದ್ದಿದ್ದಾನೆ. ಈ ಜಿಯಾ ತಿಲಕ್‌ನಗರದ ಮಚ್ಚಿ ಶೌಕತ್ ಕೊಲೆಯಲ್ಲಿ ಮೊದಲ ಆರೋಪಿ. ಈತನ ಜೊತೆ ಭೈರಸಂದ್ರದ ನಿಜಾಮುದ್ದೀನ್, ಯೂನುಸ್, ಮಾವಳ್ಳಿಯ ಸೈಯದ್ ಅಕ್ರಮ್ ಮತ್ತು ಎಲ್‌ಐಸಿ ಕಾಲೋನಿಯ ಏಜಾಜ್ ಜೈಲು ಪಾಲಾಗಿದ್ದಾರೆ.

ಮಾಹಿನ್ ಅದ್ಯಾವ ಕಾಲಕ್ಕೆ ಸಿಗುತ್ತಾನೋ ಅಥವಾ ಪೊಲೀಸರ ಬಲೆಗೆ ಬೀಳುವ ಮುನ್ನ ತನ್ನ ಮತ್ತೊಬ್ಬ ಕಡುವೈರಿ ಶಾಸಕ ಜಮೀರ್ ಅಹ್ಮದ್ ಬುಡಕ್ಕೇ ಬೆಂಕಿಯಿಡುತ್ತಾನೋ ಗೊತ್ತಿಲ್ಲ. ಸದ್ಯ ಬೆಂಗಳೂರಿನ ರೌಡಿಗಳ ಪೈಕಿ ಬಹುತೇಕರು ಎನ್‌ಕೌಂಟರ್ ಭೀತಿಗೆ ಬಿದ್ದು ಊರು ಬಿಟ್ಟಿದ್ದಾರೆ. ಇನ್ನೂ ಕೆಲವರು ತಾವೇ ಮೇಲೆ ಬಿದ್ದು ಜೈಲು ಪಾಲಾಗಿದ್ದಾರೆ. ಈ ಪೈಕಿ ಇತ್ತೀಚೆಗಷ್ಟೇ ಜೈಲು ಸೇರಿಕೊಂಡವನು ಕತ್ತಿಗುಪ್ಪೆ ಲಿಂಗನ ಬಲಗೈ ಬಂಟ ಮಚ್ಚು ಮುನಿಯ. ದುಷ್ಮನ್ ಸೈಕಲ್ ರವಿಗೊಂದು ಗತಿ ಕಾಣಿಸಿಯೇ ಗುರು ಲಿಂಗನ ಆತ್ಮಕ್ಕೆ ಶಾಂತಿ ಕೋರುತ್ತೇನೆಂದು ನಿಂತವನು ಮುನಿಯ. ಲಿಂಗನಿಗೆ ಹೋಲಿಸಿದರೆ ಮುನಿಯನದ್ದು ರಕ್ಕಸ ಶಕ್ತಿ. ಯಾವತ್ತು ಪೆದ್ದಗುಂಡನ ಎನ್‌ಕೌಂಟರ್ ಆಯಿತೋ ಮುನಿಯ ತಾನೇ ಮೇಲೆ ಬಿದ್ದು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯ ಇನ್ಸ್‌ಪೆಕ್ಟರ್ ವಾಸುದೇವ್ ನಾಯಕ್ ಮುಂದೆ ಶರಣಾಗಿ ಜೈಲು ಸೇರಿಕೊಂಡ.



ಕೊರಂಗು



ಸುನೀಲ

ಮತ್ತೊಂದೆಡೆ ಕತ್ತಿಗುಪ್ಪೆ ಲಿಂಗನ ಹಂತಕರಾದ ಸೈಕಲ್ ರವಿ ಮತ್ತು ಜಾಂಟಿ ಬೆಂಗಳೂರು ಜೈಲು ಬಿಟ್ಟು ಹೊರಬರುತ್ತಿಲ್ಲ. ಬನಶಂಕರಿಯ ಮತ್ತೊಬ್ಬ ಹಂಟರ್ ಅರಸಯ್ಯ ತಿಂಗಳ ಹಿಂದಷ್ಟೇ ಜೈಲಿನಿಂದ ಹೊರಬಿದ್ದನಾದರೂ ಬೆಂಗಳೂರಿಗೆ ತಲೆ ಹಾಕಿಲ್ಲ. ನಾಗಮಂಗಲದ ಯಾವುದೋ ಹಳ್ಳಿಯಲ್ಲಿ ತಾನಾಯಿತು ತನ್ನ ಪಾಡಾಯಿತು ಎಂಬಂತಿರುವ ಅರಸಯ್ಯ ಬಿದರಿ ಇರುವಷ್ಟು ಕಾಲ ಬೆಂಗಳೂರಿನತ್ತ ಕತ್ತೆತ್ತಿ ಕೂಡ ನೋಡಲಾರ. ಪೊಲೀಸರು ಕಣ್ಣಿಟ್ಟಿರುವುದು ಸುಂಕದಕಟ್ಟೆಯ ಹಳೇ ಪಾತಕಿಗಳಾದ ರಾಮ-ಲಕ್ಷ್ಮಣರ ಮೇಲೆ.

ಮುಚ್ಚನ ಶಿಷ್ಯ ಕುರಿ ಕೃಷ್ಣನ ಹತ್ಯೆ ನಡೆದಿದ್ದೇ ತಡ, ರಾಮ-ಲಕ್ಷ್ಮಣ ಊರುಬಿಟ್ಟರು. ಕುರಿಕೃಷ್ಣ ರೌಂಡಿಂಗ್ ಆರಂಭಿಸಿದ್ದೇ ರಾಮ-ಲಕ್ಷ್ಮಣಗಾಗಿ. ಸಿಕ್ಕರೆ ಪಾಯ್ಸನ್ ರಾಮು, ಗೋಪಾಲಯ್ಯ ಧರಣಿ, ಹೇಮಂತ ಯಾರು ಸಿಕ್ಕರೂ ಮುಗಿಸ್ತೀನಿ ಎಂದೇ ಡೈಲಾಗ್ ಹೊಡೆಯುತ್ತಿದ್ದ ಕುರಿ ಅನಾಯಾಸವಾಗಿ ಪಡ್ಡೆ ಹುಡುಗರ ಕೈಗೆ ಸಿಕ್ಕಿಬಿದ್ದ. ಕೊಲೆಯಲ್ಲಿ ರಾಮ-ಲಕ್ಷ್ಮಣರ ಪಾತ್ರವಿರಲಿಲ್ಲವಾದರೂ ವಿನಾಕಾರಣ ಅವರಿಬ್ಬರ ಹೆಸರು ಬಂತು. ಏನೂ ತಪ್ಪು ಮಾಡದೆ ಅನ್ಯಾಯವಾಗಿ ಕುರಿಯ ಕೊಲೆ ಕೇಸು ಹೊತ್ತ ರಾಮ-ಲಕ್ಷ್ಮಣರಿಗೆ ಸದ್ಯ ಎನಕೌಂಟರ್ ಭೀತಿ. ಅದೂ ಯಾವ ಮಟ್ಟಿಗೆಂದರೆ ಕಳೆದ 6 ತಿಂಗಳಿಂದ ಇವರಿಬ್ಬರಿಗಾಗಿ ಸಿಸಿಬಿ ಪೊಲೀಸರು ಹುಡುಕದ ತಾಣವಿಲ್ಲ, ಬಹುಶಃ ರಾಮ ಲಕ್ಷ್ಮಣ ಕರ್ನಾಟಕವನ್ನೇ ಬಿಟ್ಟಿರಬೇಕು.


ಇದೇ ಗತಿ ಮುಲಾಮನಿಗಾಗಿದೆ. ಜೆಡಿಎಸ್ ನಾಯಕ ಕುಮಾರಸ್ವಾಮಿಯ ಜೊತೆ ಗುರುತಿಸಿಕೊಂಡಿದ್ದಕ್ಕೋ ಅಥವಾ ಪೊಲೀಸರಿಗೆ ಸಿಗದೇ ತಿಂಗಳಾನುಗಟ್ಟಲೇ ತಲೆ ಮರೆಸಿಕೊಂಡಿರುವುದಕ್ಕೋ ಮುಲಾಮ ದಂಡ ಕಟ್ಟಲೇಬೇಕಿದೆ. ಬೆಂಗಳೂರಿಗೆ ಬಂದರೆ ಎನ್‌ಕೌಂಟರ್ ಭೀತಿ, ಹುಷಾರಾಗಿ ಜೈಲು ಸೇರಿ ಸೇಫಾಗಬೇಕೆಂದರೆ ಅದಕ್ಕೂ ಅವಕಾಶವಿಲ್ಲ. ಒಂದು ಮೂಲದ ಪ್ರಕಾರ ಆತ ಹೈದರಾಬಾದಿನಲ್ಲಿದ್ದಾನೆ. ಬಿದರಿಯ ಕಮೀಷನರ್‌ಗಿರಿ ಮುಗಿಯುವ ತನಕ ಮುಲಾಮ ಬೆಂಗಳೂರಿಗೆ ಕಾಲಿಡಲಾರ. ಮುಲಾಮನ ಕಡುವೈರಿ ಕೊರಂಗು ಸದ್ಯಕ್ಕೆ ಬೆಂಗಳೂರು ಜೈಲು ಬಿಟ್ಟು ಹೊರಬರಲಾರ. ಕೊರಂಗು ಜೊತೆ ಲಿಂಗನ ಹುಡುಗರು, ಟೀಸಿ ರಾಜ, ಇತ್ಯಾದಿ ಒಂದು ಹಿಂಡೇ ಜೈಲು ಪಾಲಾಗಿದ್ದಾರೆ. ಮಾರೇನಹಳ್ಳಿ ಜಗ್ಗ ಕೂಡ ಇತ್ತೀಚೆಗೆ ಜೈಲು ಹೊಕ್ಕಿ ಕೂತಿದ್ದಾನೆ.

ಮನಸ್ಸು ಮಾಡಿದರೆ ಯಾವುದೇ ಕ್ಷಣಕ್ಕಾದರೂ ಇವರೆಲ್ಲ ಜೈಲಿಂದ ಹೊರಬೀಳಬಹುದು. ಆದರೆ ಬರುವ ಧೈರ್ಯವಿಲ್ಲ. ಎಲ್ಲಿ ಎನ್‌ಕೌಂಟರ್ ಆಗಿ ಬಿಡುತ್ತೇವೋ ಎಂಬ ಭೀತಿ. ಇದೇ ಮನಸ್ಥಿತಿಗೆ ಬಿದ್ದ ಸೈಲೆಂಟ್ ಸುನೀಲ ಸದ್ಯ ಬಳ್ಳಾರಿ ಜೈಲು ಬಿಟ್ಟು ಬರುತ್ತಿಲ್ಲ. ಆತನ ಜೊತೆ ಒಂಟೆ, ಪೀಸಿ, ಪೀಟ ಇತ್ಯಾದಿ ಇಡೀ ಗ್ಯಾಂಗೇ ಜೈಲು ಸೇರಿಕೊಂಡಿದೆ. ನೆಲಮಂಗಲದ ಚಿತ್ತನಗೆರೆ ಹಂತಕರದ್ದೂ ಇದೇ ಪಾಡು. ಇಲ್ಲಿಗೆ ತಿಂಗಳ ಹಿಂದೆಯೇ ಸೀನನಿಗೆ ಕೋರ್ಟು ಜಾಮೀನು ಮಂಜೂರು ಮಾಡಿತ್ತು. ಹಾಗಿದ್ದೂ ಹೊರಬರುವ ಧೈರ್ಯವಿಲ್ಲ. ಸೀನನ ಪಕ್ಕಾ ಎದುರಾಳಿ ಶಂಕ್ರ ಮತ್ತು ಮಂಜರಿಗೆ ಜೈಲು ಬಿಟ್ಟು ಬಂದರೆ ಬದುಕುತ್ತೇವೆಂಬ ನಿರೀಕ್ಷೆಯಿಲ್ಲ. ತುಮಕೂರು ಜೈಲಲ್ಲಿ ಸೇಫಾಗಿ ಇರಬೇಕೆಂದರೆ ದಿನಕ್ಕೆ ಕಮ್ಮಿಯೆಂದರೂ ಮೂರು ಸಾವಿರ ರೂಪಾಯಿ ಖರ್ಚಾಗುತ್ತದೆ. ಇದ್ದು ಅನುಭವಿಸುವಂತಿಲ್ಲ ಹೊರಬಿದ್ದರೆ ಪ್ರಾಣಕ್ಕೆ ಗ್ಯಾರಂಟಿಯಿಲ್ಲ.

ಮಡಿವಾಳದ ಮತ್ತೊಬ್ಬ ಹಂತಕ ಕವಳ ಸದ್ಯ ಬೆಂಗಳೂರು ಜೈಲು ಹೊಕ್ಕಿ ಕೂತಿದ್ದಾನೆ. ಜೈಲಲ್ಲಿದ್ದೇ ತನ್ನ ಕಡುವೈರಿ ಕುಟ್ಟಿ ಉರ್ಫ್ ತಿರುಕುಮಾರ್‌ನನ್ನು ಕೋರ್ಟಿಗೆ ತರುವ ಮಾರ್ಗದಲ್ಲೇ ಮುಗಿಸುವ ದುಸ್ಸಾಹಸಕ್ಕೆ ಕೈಯಿಟ್ಟ. ಕುಟ್ಟಿ ಅಚಾನಕ್ ಬದುಕುಳಿದ. ಆತನ ಅಣ್ಣ ರಾಜ ಕೂಡ ಹೊರಬರಲು ಧೈರ್ಯ ಮಾಡುತ್ತಿಲ್ಲ.

ಸದ್ಯ ಜೈಲಿಂದ ಹೊರಗಿರುವುದು ಕಾಮಾಕ್ಷಿಪಾಳ್ಯದ ಹೇಮಂತ್, ದಾಸರಹಳ್ಳಿಯ ಸೀಝರ್ ಹೇಮಂತ, ಗೋರಿಪಾಳ್ಯದ ಆರಿಫ್, ಇಮ್ರಾನ್, ಭಕ್ಷಿಗಾರ್ಡನ್ನಿನ ಅತ್ತೂಪ್ ಮತ್ತು ನೆಲಮಂಗಲದ ಬಂಡೆಮಂಜ ಮತ್ತು ಹರ್ಷ ಮಾತ್ರ, ಇವರ್‍ಯಾರೂ ಬಹಿರಂಗವಾಗಿ ಓಡಾಡುವ ಸ್ಥಿತಿಯಲ್ಲಿಲ್ಲ. ಕದ್ದೂಮುಚ್ಚಿ ಭೂಗತರಾಗಿದ್ದುಕೊಂಡೇ ಬದುಕಬೇಕು. ಹಾಗೊಮ್ಮೆ ಗ್ಯಾಂಗ್ ಕಟ್ಟಿಕೊಂಡು ಮೆರೆದರೆಂದರೆ ಪೊಲೀಸರು ಬಿಡುವುದಿಲ್ಲ. ಮಿಕ್ಕಂತೆ ಉಳಿದ ಬಹುತೇಕರೆಲ್ಲ ಊರುಬಿಟ್ಟಿದ್ದಾರೆ. ಅದು ಎನ್‌ಕೌಂಟರ್ ಭೀತಿ. ಒಂದೇ ತಿಂಗಳ ಅವಧಿಯಲ್ಲಿ ಐದು ಎನ್‌ಕೌಂಟರ್‌ಗಳನ್ನು ನಡೆಸುವ ಮೂಲಕ ಬಿದರಿ ಪಾತಕ ಲೋಕವನ್ನು ದಿಕ್ಕಾಪಾಲು ಮಾಡಿದ್ದಾರೆ. ಮುಂದಿನ ಟಾರ್ಗೆಟ್ ಯಾರಾಗುತ್ತಾರೆಂಬುದಷ್ಟೇ ಸದ್ಯದ ರೌಡಿಗಳ ಮುಂದಿನ ಪ್ರಶ್ನೆ. ಪೊಲೀಸರ ರಿವಾಲ್ವರುಗಳು ಎಂಥಾ ಪಾಠ ಕಲಿಸುತ್ತವೆ ಎಂಬುದಕ್ಕೆ ಇದಕ್ಕಿಂತ ಬೇಕೆ?

• ರಾ. ಸೋಮನಾಥ್




ಕಾರವಾರ ಬೀಚ್‌ಗೆ ಬೇಲಿ ಕಡಲ ಮಕ್ಕಳ ತುತ್ತಿಗೆ ಕುತ್ತು

ಉತ್ತರ ಕನ್ನಡ ನಿರಾಶ್ರಿತರ ಡೇರೆಯಂತಾಗಿ ಅದ್ಯಾವುದೋ ಕಾಲವಾಗಿ ಹೋಗಿದೆ! ನಲವತ್ತೈವತ್ತು ವರ್ಷದಿಂದ ಒಂದರ ಹಿಂದೊಂದರಂತೆ ಸಾಲಾಗಿ ವಕ್ಕರಿಸಿದ ಸರ್ಕಾರಿ ಯೋಜನೆಗಳು ಹಿಂಡಿಂಡಾಗಿ ಅಮಾಯಕರನ್ನು ಅಕ್ಷರಶಃ ಬೀದಿ ಪಾಲಾಗಿಸಿಬಿಟ್ಟಿದೆ!! ನಿರ್ವಸಿತರು ಪ್ರಭುತ್ವದ ಪಾತಕದ ವಿರುದ್ಧ ಹೋರಾಡುತ್ತಲೇ ಇದ್ದಾರೆ. ಬಹುಶಃ ಉತ್ತರ ಕನ್ನಡದಲ್ಲಿ ನಡೆದಷ್ಟು ಪ್ರತಿಭಟನೆ ಚಳವಳಿ ದೇಶದ ಇನ್ನೆಲ್ಲಿಯೂ ನಡೆದಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಹೋರಾಡಿದ ಉತ್ತರ ಕನ್ನಡಿಗರು, ಸ್ವಾತಂತ್ರ್ಯಾನಂತರ ಸ್ವಕೀಯ ಪ್ರಭುಗಳ ಪುಂಡಾಟದ ವಿರುದ್ಧ ಪ್ರತಿಭಟಿಸುತ್ತಲೇ ಇದ್ದಾರೆ.

ಈಗ ಮತ್ತೊಂದು ಸಂಘರ್ಷಕ್ಕೆ ಜಿಲ್ಲಾ ಕೇಂದ್ರ ಕಾರವಾರದ ಮೀನುಗಾರರು ಮತ್ತು ಪ್ರಕೃತಿಪ್ರಿಯರು ಸನ್ನದ್ಧರಾಗಬೇಕಾಗಿ ಬಂದಿದೆ! ತೀರಾ ಮೊನ್ನೆ ಮೊನ್ನೆ ಇದೇ ಕಾರವಾರದಲ್ಲಿ ಬಿಜೆಪಿಯ ಮಾತಾಡುವ ಪ್ರಚಂಡ ಬೊಂಬೆ ವೆಂಕಯ್ಯ ನಾಯ್ಡುವಿನ ಬೇನಾಮಿ ಜೀವ ವಿರೋಧಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪಿಸುದಂತೆ ದೊಡ್ಡ ಜನಾಂದೋಲನವೇ ನಡೆದಿತ್ತು, ಯಡ್ಡಿ ಸರ್ಕಾರ ಹೋರಾಟಗಾರರ ಮೇಲೆ ಪೊಲೀಸರನ್ನು ಛೂಬಿಟ್ಟು ಕಷ್ಟ-ನಷ್ಟ-ನೋವು ನೀಡಿತ್ತು! ಆದರೆ ಕಾರವಾರಿಗರ ಸಾತ್ವಿಕ ಸಿಟ್ಟಿನೆದುರು ಥರ್ಮಲ್ ಪ್ರಾಜೆಕ್ಟ್‌ನ ಆಂಧ್ರ ವಾಳ್ಯಗಳು ತತ್ತರಿಸಿಹೋದರು; ಗತಿಯಿಲ್ಲದೆ ರಾತ್ರೋರಾತ್ರಿ ಓಡ್ಡಿಹೋದರು. ಜನರು ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಂತೆಯೇ ಇನ್ನೊಂದು ಪ್ರಳಯಾಂತಕ ಪ್ರಾಜೆಕ್ಟ್ ಅನ್ನು ಆಳುವ ಖೂಳರು ಏಕಪಕ್ಷೀಯವಾಗಿ ಕಾರವಾರಿಗರ ಮೇಲೆ ಹೇರಿಬಿಟ್ಟಿದ್ದಾರೆ!!

ಕೋಸ್ಟ್‌ಗಾರ್ಡ್‌ಗೆ ಕಡಲು-ತೀರ!



ಕಾರವಾರ ನಗರದಲ್ಲಿರುವ ಸಮುದ್ರ ಮತ್ತದರ ದಂಡೆ ಎಷ್ಟು ಮನೋಹರವೋ ಅದಕ್ಕಿಂತಲೂ ಹೆಚ್ಚು ಅನಿವಾರ್ಯ ಸ್ಥಳೀಯ ಮೀನುಗಾರರಿಗೆ! ಈ ಕಡಲು-ತೀರ ಬೆಸ್ತರ ಜೀವನಾಧಾರ; ಈ ಸಾಗರ-ಬೀಚ್ ಇಲ್ಲದಿದ್ದರೆ ಮೀನುಗಾರರು ಉಪವಾಸ-ವನವಾಸ ಬೀಳ ಬೇಕಾಗುತ್ತದೆ. ಕಾರವಾರದ ಹೆಡ್‌ಪೋಸ್ಟ್ ಆಫೀಸ್‌ನಿಂದ ಕೋಡಿಭಾಗದ ಕಾಳಿ ಸಂಗಮದವರೆಗಿನ ಸುಮಾರು 16 ಎಕರೆ ಬೀಚ್‌ನಲ್ಲಿ ಸದಾ ಮೀನುಗಾರಿಕೆ ಚಟುವಟಿಕೆ-ದಂಧೆ ನಡೆಯುತ್ತಿರುತ್ತವೆ. ಬೆಸ್ತರ ಬದುಕಾದ ಈ ಕಡಲ ತೀರದ ಬರೋಬ್ಬರಿ 13.36 ಎಕರೆ ಪ್ರದೇಶವನ್ನು ಯಡ್ಡಿಯ ಹೆಡ್ಡ ಸರ್ಕಾರ ಮತ್ತದರ ಅಧೀನದಲ್ಲಿರುವ ಭಂಡ ಜಿಲ್ಲಾಡಳಿತ ಭಾರತೀಯ ತಟರಕ್ಷಕ ಪಡೆ(ಕೋಸ್ಟ್ ಗಾರ್ಡ್)ಗೆ ರಹಸ್ಯವಾಗಿ ಪರಭಾರೆ ಮಾಡಿಬಿಟ್ಟಿದೆ!

ಎರಡು ವರ್ಷದ ಹಿಂದೆ ಕೇಂದ್ರ ರಕ್ಷಣಾ ಇಲಾಖೆಯಿಂದ ಬಂದ ಕೋರಿಕೆಯಂತೆ ಈ ಭೂಮಿಯನ್ನು ಅಂಗೀ ಜಿಲ್ಲಾಡಳಿತ ಮಂಜೂರಿ ಮಾಡಿದೆ. ಅಂದಿನ ಹುಂಬ ಜಿಲ್ಲಾಧಿಕಾರಿ ಗೋವಿಂದರಾಜ್ ಹಿಂದೆ-ಮುಂದೆ ನೋಡದೆ, ಸಾರ್ವಜನಿಕರಿಗೊಂದು ಸಣ್ಣ ಸುಳಿವೂ ನೀಡದೆ ಏಕಪಕ್ಷೀಯವಾಗಿ ಈ ಮಂಜೂರಿ ಆದೇಶ (ಎಲ್‌ಎನ್‌ಡಿ1/ಡಿ/ಸಿಆರ್-22/2008-09-ದಿನಾಂಕ 12-12-08 ಮತ್ತು 2-2-2009) ಹೊರಡಿಸಿದ್ದಾನೆ. ಈ ಡಿಸಿ ಆಜ್ಞೆಯಂತೆ ಕಾರವಾರದ ಕೋಡಿಭಾಗ ಸರ್ವೆ ನಂಬರ್ 294/ಅ, 294/ಕ1, 294/ಬ, 294/ಕ2 ಮತ್ತು 294/ಕ3 ರಲ್ಲಿನ ಒಟ್ಟು 13.36 ಎಕರೆ ಪ್ರದೇಶ ಕೋಸ್ಟ್‌ಗಾರ್ಡ್ ಪಾಲಾಗಿದೆ.

ಏಕಪಕ್ಷೀಯವಾಗಿ ಪಾತಕ!!

ಕಳೆದ ಜನವರಿ ಎರಡನೇ ವಾರದವರೆಗೂ ಕಡಲು-ತೀರ ಕಸಿದುಕೊಂಡಿದ್ದು ಗುಟ್ಟಾಗೇ ಇತ್ತು, ಇದ್ದಕ್ಕಿದ್ದಂತೆ ಜನವರಿ 11ರಂದು ಈ ಭೂಮಿಯನ್ನು ಕೋಸ್ಟ್‌ಗಾರ್ಡ್ ಸ್ವಾಧೀನ ಪಡಿಸಿಕೊಂಡು ಅಲ್ಲೊಂದು ಸಾರ್ವಜನಿಕ ಪ್ರವೇಶ ನಿಷೇಧಿಸುವ ದೊಡ್ಡ ಫಲಕ ಹಾಕಿ ಬಿಟ್ಟಿತ್ತು, ಈ ಎಡವಟ್ಟು ಬೋರ್ಡ್ ಕಂಡು ಕಾರವಾರಿಗರು ಬೆಚ್ಚಿಬಿದ್ದರು. ಆದರಲ್ಲೂ ಈ ಕಡಲು ಮತ್ತದರ ತೀರವನ್ನೇ ನಂಬಿ ತಲತಲಾಂತರದಿಂದ ಜೀವಿಸುತ್ತಾ ಬಂದಿರುವ ಮೀನುಗಾರ ಕುಲಕಸುಬಿನವರು ದೊಡ್ಡ ಆಘಾತವಾದಂತೆ ಚಡಪಡಿಸತೊಡಗಿದರು!!

ಪ್ರಾಕೃತಿಕ ಸಂಪತ್ತು-ಭೂಮಿ-ನದಿ-ಕಡಲು ಸರ್ಕಾರಿ ಪ್ಲಾನ್-ಪ್ರಾಜೆಕ್ಟ್‌ಗಳಿಗೆ ವಶಪಡಿಸಿಕೊಳ್ಳುವ ಮೊದಲು ಸಾರ್ವಜನಿಕ ಅಹವಾಲು ಕೇಳಬೇಕು-ಆಕ್ಷೇಪ ಆಲಿಸಬೇಕು ಎಂಬ ಕಟ್ಟುನಿಟ್ಟಿನ ನಿಯಮ-ನೀತಿಯಿದೆ. ಇದನ್ನು ಜಿಲ್ಲಾಡಳಿತವಾಗಲಿ, ಯಡ್ಡಿ ಆಡಳಿತವಾಗಲಿ ಬುದ್ಧಿಪೂರ್ವಕವಾಗೇ ಪಾಲಿಸದೆ ಕಡೆಗಣಿಸಿದೆ! ಕೇಂದ್ರ ತಟರಕ್ಷಕ ದಳಕ್ಕೆ ಕಾರವಾರ ಮೀನುಗಾರರ ಬೀಚ್-ಕಡಲು ಕೊಡುವ ಮೊದಲು ಸಾರ್ವಜನಿಕರಿಗೆ ಈ ಉದ್ದೇಶ ತಿಳಿಸುವುದಿರಲಿ, ಸಣ್ಣದೊಂದು ನೋಟಿಫಿಕೇಷನ್ ಕೂಡಾ ಹೊರಡಿಸಿರಲಿಲ್ಲ! ಹವಾನಿಯಂತ್ರಿತ ಕೋಣೆಯಲ್ಲಿ ಕುಳಿತು ಬರೀ ಸ್ಕೆಚ್ ಹಾಕುವ ವ್ಯವಹಾರ ಜ್ಞಾನ-ಹೊಣೆಗಾರಿಕೆಯಿಲ್ಲದ ಐಎಎಸ್ ಪ್ರಭೃತಿಗಳು ಬೇಕಾಬಿಟ್ಟಿಯಾಗಿ ಭೂಮಿ ನೀಡಿದ್ದಾರೆ.



ಸ್ಥಳೀಯ ಮೀನುಗಾರರಿಗೆ, ಕಾರವಾರದ ಸುಂದರ ಕಡಲು ತೀರ ನೋಡಲು ಬರುವ ಪ್ರವಾಸಿಗರಿಗೆಲ್ಲ ದೊಡ್ಡ ಅನ್ಯಾಯ-ಆಘಾತ ಮಾಡಿಬಿಟ್ಟಿದ್ದಾರೆ.

ಕಾರವಾರವೆಂದರೆ-ಸಮಗ್ರ ಉತ್ತರ ಕನ್ನಡವೆಂದರೆ ಆಡಳಿತಶಾಹಿಗೆ ಯಾವಾಗಲೂ ಅಸಡ್ಡೆ. ಜಿಲ್ಲೆಯ ಜನರ ಜೀವ-ಜೀವನ ಕ್ಷುಲ್ಲಕವಾಗಿ ಪರಿಗಣಿಸುತ್ತಲೇ ಬಂದಿದ್ದಾರೆ ಅಧಿಕಾರಿಗಳು. ಕಾರವಾರವೆಂದರೆ ಆಳುವವರ ದೃಷ್ಟಿಯಲ್ಲಿ ಜೀವರಾಶಿಯೇ ಇಲ್ಲದ ಮರುಭೂಮಿ. ಹೀಗಾಗಿ ಇಲ್ಲಿ ಹಲವು ವಿನಾಶಕಾರಿ-ಅನಾಹುತಕಾರಿ ಸರ್ಕಾರಿ ಯೋಜನೆಗಳು ನೆಲೆ ನಿಂತಿವೆ! ಇದಕ್ಕೆ ಜಿಲ್ಲೆಯ ಮಂತ್ರಿ-ಶಾಸಕ-ಎಂಪಿಗಳೆಂಬ ಹೇತ್ಲಾಂಡಿಗಳ ವೀಕ್‌ನೆಸ್ ಪ್ರಮುಖ ಕಾರಣ. ಪೆದ್ದ ಜನಪ್ರತಿನಿಧಿಗಳನ್ನು ಮೇಯಲು ಬಿಟ್ಟು ಮನಸ್ಸಿಗೆ ಬಂದಂತೆ ಜಿಲ್ಲೆಯಲ್ಲಿ ಅಧಿಕಾರಶಾಹಿ ಆಡಳಿತ ಲಾಗಾಯ್ತಿನಿಂದ ನಡೆಸುತ್ತ ಬಂದಿದೆ!

ಯಾವುದೇ ಯೋಜನೆ ಬರುವ ಮುಂಚೆ ಜಿಲ್ಲೆಯ ಜನರಿಗೆ ಮಾಹಿತಿ ನೀಡಿದ್ದೇ ಇಲ್ಲ. ಏಕಾಏಕಿ ಯೋಜನೆ ಜಾರಿಗೊಳಿಸಿ ಜನರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಹಲವು ಜಲವಿದ್ಯುತ್ ಯೋಜನೆಗಳು, ಸೀ-ಬರ್ಡ್ ನೌಕಾ ನೆಲೆ, ಕೈಗಾ ಅಣುಸ್ಥಾವರ ಯೋಜನೆಗಳು ಬಂದಾಗ ಅಸಹಾಯಕ ಸಾವಿರಾರು ಕುಟುಂಬಗಳು ಬೀದಿಪಾಲಾಗಿವೆ. ನಿರಾಶ್ರಿತ ಜನರು ಸರ್ಕಾರದ ಪುನರ್ವಸತಿ ಕೇಂದ್ರ ಎಂಬ ನರಕದಲ್ಲಿ ಹೊಸ ಬದುಕು ಕಟ್ಟಿಕೊಳ್ಳಲಾಗದೆ ಭಿಕ್ಷೆ ಬೇಡುವ, ಮೈ ಮಾರುವ ದಂಧೆಗಿಳಿದ ಘೋರ ದುರಂತ ಉತ್ತರ ಕನ್ನಡದ್ದು!! ಇಷ್ಟಾದರೂ ಪ್ರಳಯಾಂತಕ ಪ್ರಾಜೆಕ್ಟ್‌ಗಳು ಜಿಲ್ಲೆಗೆ ಬರುವುದು ಮಾತ್ರ ನಿಂತಿಲ್ಲ. ಈಗ ಮತ್ತೆ ಕಾರವಾರದ ಮಂದಿಗೆ ಸರ್ಕಾರಿ ಯೋಜನೆಯ ಶನಿಕಾಟ ಶುರುವಾಗಿದೆ!

ಬೆಚ್ಚಿ ಬಿದ್ದಿರುವ ಬೆಸ್ತರು

ಕಾರವಾರದ ಮುಗ್ಧ ಮೀನುಗಾರರ ಗೋಳು ಹೇಳತೀರದು. ಯಾವ ಸರ್ಕಾರಿ ಪ್ಲಾನ್-ಪ್ರಾಜೆಕ್ಟ್ ಬಂದರೂ ಮೊದಲು ಬಾಧಿಸುವುದು ಬೆಸ್ತರನ್ನು, ಬಡ ಬೆಸ್ತರ ಅಸ್ತಿತ್ವವನ್ನೇ ಅಲುಗಿಸುವಂಥ ಒಂದಲ್ಲ ಒಂದು ಅವಾಂತರಕಾರಿ ಯೋಜನೆ ಕಾರವಾರಕ್ಕೆ ಬರುತ್ತಲೇ ಇದೆ. ಸೀ-ಬರ್ಡ್ ನೌಕಾನೆಲೆ ಸ್ಥಾಪನೆಗೆ ಮೊದಲು ಕಾರವಾರದ ಸುತ್ತಮುತ್ತ ಬರೋಬ್ಬರಿ 17 ಬೀಚ್‌ಗಳಿದ್ದವು. ಇವುಗಳಲ್ಲಿ ಹಲವು ಮೀನುಗಾರಿಕಾ ಬೀಚ್‌ಗಳಾಗಿದ್ದವು. ಇವುಗಳಲ್ಲಿ ಕಾರವಾರ ನಗರದ ಒಂದು ಬೀಚ್ ಬಿಟ್ಟು ಉಳಿದೆಲ್ಲವನ್ನು ನೌಕಾನೆಲೆ ನುಂಗಿ ನೊಣೆದಿದೆ! ಮುರಗಾದಿಂದ ಬಣಗಾವರೆಗಿನ 15-20 ಕಿ.ಮೀ ವ್ಯಾಪ್ತಿಯಲ್ಲಿನ ಅಷ್ಟೂ ಮೀನುಗಾರಿಕೆಯ ತೀರಗಳನ್ನೂ ನೌಕಾನೆಲೆ ಅಪೋಷನ ಪಡೆದಿರುವುದರಿಂದ ಬೆಸ್ತರ ಬದುಕು ಮೂರಾಬಟ್ಟೆಯಾಗಿ ಹೋಗಿದೆ. ಏಕೈಕ ಆಸರೆಯಾಗಿದ್ದ ಕಾರವಾರ ನಗರ ಸಾಗರ ತೀರವನ್ನೂ ಜಿಲ್ಲಾಡಳಿತ ಮತ್ತು ಜನದ್ರೋಹಿ ಶಾಸಕ-ಸಂಸದರು ಭಾರತೀಯ ತಟ ರಕ್ಷಕ ಪಡೆಗೆ ಧಾರೆಯೆರೆದಿರುವುದರಿಂದ ಮೀನುಗಾರರು ಬೀದಿ ಪಾಲಾಗುವಂತಾಗಿದೆ!!

ಕಾರವಾರ ಕಡಲತಡಿ ಮೀನುಗಾರರ ಜೀವನಾಡಿ. ಈ ಕಡಲತೀರದಲ್ಲಿ ಸಾಂಪ್ರದಾಯಿಕ ಮೀನುಗಾರರು ಪರಂಪರಾಗತವಾಗಿ ಮೀನುಗಾರಿಕೆ ಉದ್ಯೋಗ ಮಾಡಿಕೊಂಡು ಬರುತ್ತಿದ್ದಾರೆ. ಸಮುದ್ರ ತೀರದ ಗುಂಟ ನಾಡದೋಣಿಯಲ್ಲಿ ಹೋಗಿ ಬಲೆ ಬೀಸಿ ಮೀನು ಹಿಡಿಯುತ್ತಾರೆ. ದಂಡೆಯ ಮೇಲೆ ಶೆಡ್‌ಗಳನ್ನು ಹಾಕಿ ಮಳೆಗಾಲದಲ್ಲಿ ಅದರಲ್ಲಿ ದೋಣಿಗಳನ್ನು ಇಡುತ್ತಾರೆ. ಬೇಸಿಗೆಯಲ್ಲಿ ಈ ಶೆಡ್‌ಗಳು ಹಸಿ ಮೀನಿಗೆ ಉಪ್ಪು ಬೆರೆಸಿ ಒಣಗಿಸುವ ಕಾಯಕಕ್ಕೆ ಬೇಕಾಗುತ್ತದೆ. ಹರಿದ ಬಲೆ ರಿಪೇರಿ-ದೋಣಿ ರಿಪೇರಿಗೆಲ್ಲ ಕಡಲತಡಿ ಬೇಕೇಬೇಕು. ಸಾಂಪ್ರದಾಯಿಕ ಮೀನುಗಾರರು ಈ ಸಮುದ್ರ ಮತ್ತದರ ತೀರವನ್ನು ಅವಲಂಬಿಸಿ ಸ್ವಾವಲಂಬಿಗಳಾಗಿ ಬದುಕಿದ್ದಾರೆ. ಇದೆಲ್ಲ ಕಡೆಗಣಿಸಿ ಆಡಳಿತಗಾರರು ಹೆಲಿಪ್ಯಾಡ್‌ಗೆ, ಕೋಸ್ಟ್‌ಗಾರ್ಡ್‌ಗೆ ಕಡಲತಡಿ ಬಳುವಳಿಯಾಗಿ ಕೊಟ್ಟಿರುವುದು ಅಮಾನುಷವೇ ಸರಿ! ರಕ್ಷಣಾ ಇಲಾಖೆಯ ಕೋಸ್ಟ್‌ಗಾರ್ಡ್ ಕಬ್ಜಾ ಮಾಡಿಕೊಂಡಿರುವ ಬೀಚ್ ಭಾಗದಲ್ಲಿ ನಿರ್ಬಂಧಿತ ವಲಯವೆಂದು ಬೋರ್ಡ್ ಹಾಕಿ ಬೆಸ್ತರ ಬದುಕುವ ಹಕ್ಕನ್ನೇ ಕಸಿದುಕೊಂಡುಬಿಟ್ಟಿದೆ. ಅತಂತ್ರತೆಯ ಭೀತಿಯಿಂದ ಮೀನುಗಾರರು ತತ್ತರಿಸುತ್ತಿರುವುದು ಘೋರವಾಗಿದೆ! ಯಾಂತ್ರಿಕ ಮೀನುಗಾರಿಕೆಗೂ ಗಂಡಾಂತರಕಾರಿ ಈ ಕೋಸ್ಟ್‌ಗಾರ್ಡ್ ಯೋಜನೆ.

ಪ್ರಕೃತಿಗೆ ನೇಣು

ಮೀನುಗಾರರಿಗೆ ದೋಣಿ-ಬಲೆ ಇಡಲು-ಮೀನುಗಾರಿಕೆ ಮಾಡಲಷ್ಟೇ ಈ ಬೀಚ್ ಸೀಮಿತವಾಗಿಲ್ಲ. ಕಾರವಾರದ ಪ್ರಕೃತಿ ಸೌಂದರ್ಯಕ್ಕೆ ಅಂತರರಾಷ್ಟ್ರಿಯ ಪ್ರಸಿದ್ಧಿ, ಜಾಗತಿಕ ಭೂಪಟದಲ್ಲೊಂದು ಸ್ಥಾನಮಾನ ತಂದುಕೊಟ್ಟಿದ್ದೇ ಈ ಕಡಲ ತೀರ! ರಾಷ್ಟ್ರಕವಿ ರವೀಂದ್ರನಾಥ ಠಾಗೂರ್‌ಗೆ ಕಾರವಾರದ ನಿಸರ್ಗ ಸೌಂದರ್ಯ ಸ್ಫೂರ್ತಿ ಸೆಲೆಯಾಗಿತ್ತು. ಆತ ಕಾರವಾರವನ್ನು ಕರ್ನಾಟಕದ ಕಾಶ್ಮೀರವೆಂದು ಬಣ್ಣಿಸಿದ್ದರು. ಕಾರವಾರ ಬೀಚ್‌ಗೆ ಪ್ರವಾಸಿಗರ ದಂಡು-ದಂಡೇ ಬರುತ್ತದೆ. ಇಲ್ಲಿಯ ಸೂರ್ಯಾಸ್ತ ತುಂಬ ಫೇಮಸ್. ಎಂಥ ವಿಪರ್ಯಾಸ ನೋಡಿ. ಒಂದೆಡೆ ಈ ಬೀಚ್‌ನ ಪ್ರವಾಸೋದ್ಯಮಕ್ಕೆ ಲಕ್ಷ-ಲಕ್ಷ ಪ್ಲಾನ್ ಘೋಷಿಸುವ ಸರ್ಕಾರ ಅದೇ ಜಾಗವನ್ನು ಕೋಸ್ಟ್ ಗಾರ್ಡ್‌ಗೆ ಕೊಟ್ಟುಬಿಟ್ಟಿದೆ. ಪ್ರವಾಸೋದ್ಯಮದ ನಿಟ್ಟಿನಲ್ಲಿ ಅಭಿವೃದ್ಧಿ ಆಗಬೇಕಾದ ಕಡಲ ತೀರವನ್ನು ನಿರ್ಬಂಧಿತ ಪ್ರದೇಶ ಮಾಡಹೊರಟಿರುವುದು ವಿಚಿತ್ರವಾದರೂ ಸರ್ಕಾರಿ ಸತ್ಯ!! ತಟರಕ್ಷಕ ಪಡೆಯ ಸ್ಥಾವರ-ಬೋಟ್-ಸೈನಿಕರು ಬೀಚಲ್ಲಿ ಜಮಾವಣೆಯಾದರೆ ಕಾರವಾರ ಬರಡಾಗುವುದು ಖಂಡಿತ. ಸ್ಥಳೀಯರು ಪಂಜರದ ಪಕ್ಷಿಗಳಂತಾಗುತ್ತಾರಷ್ಟೇ!

ಕಾರವಾರ ಬೀಚ್. ಸ್ಥಳೀಯ ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ನಾಗರಿಕರ ಜೀವನೋಪಾಯಕ್ಕೆ, ಆಹಾರಕ್ಕೆ, ಉದ್ಯಮಕ್ಕೆ, ಮನೋರಂಜನೆಗೆ, ಜಾಗಿಂಗ್-ವಾಕಿಂಗ್‌ಗೆ ಇರುವ ಒಂದೇ ಒಂದು ಸ್ಥಳವೆಂದರೆ ಈ ಬೀಚ್. ಕಾರವಾರದ ವ್ಯಾಸ ವಿಸ್ತೀರ್ಣ ತುಂಬ ಸಣ್ಣದು. ಪೂರ್ವದಲ್ಲಿ ಬೆಟ್ಟಗುಡ್ಡ ಪಶ್ಚಿಮದಲ್ಲಿ ಸಾಗರ. ಕಾರವಾರದ ಶೇ. 95ರಷ್ಟು ಮಂದಿಯ ಆಹಾರ ಮೀನು. ಮೀನು ಹೋಟೆಲ್ ಉದ್ಯಮ ಇಲ್ಲಿ ಜೋರು. ಸಂಡೇ ಬಂತೆಂದರೆ ಕುಟುಂಬ ಸಮೇತ ಜನ ಬಂದು ಕುಳಿತುಕೊಳ್ಳುವುದೇ ಈ ಬೀಚ್‌ಲ್ಲಿ. ಹಾಗೊಮ್ಮೆ ಈ ಕಡಲ ಕಿನಾರೆ ಕೋಸ್ಟ್ ಗಾರ್ಡ್‌ನ ಕೈವಶವಾಗಿ ಹೋದರೆ ಕಾರವಾರದ ಸಮತೋಲನವೇ ತಪ್ಪುವುದು ಖಾತ್ರಿ. ಪ್ರಕೃತಿಗೆ ನೇಣಿನ ಕುಣಿಕೆ ಬೀಳುವುದು! ಕಾರವಾರ ಪ್ರವಾಸಿ ತಾಣವಾಗದೆ ಪರಿತಾಪದ ತಾಣವಾಗುತ್ತದೆ!!

ಬೇರೆ ಜಾಗ ಇಲ್ಲವಾ?

ಕಾರವಾರದ ಬದುಕಿನೊಂದಿಗೆ ಅವಿನಾಭಾವಸಂಬಂಧ ಹೊಂದಿರುವ ಬೀಚ್ ಅನ್ನು ರಕ್ಷಣಾ ಇಲಾಖೆಯ ತಟರಕ್ಷಕ ದಳಕ್ಕೆ ಹಸ್ತಾಂತರಿಸುವ ಯೋಜನೆಯಲ್ಲೇ ಐಬಿದೆ. ಮಹತ್ವದ ರಕ್ಷಣಾ ಇಲಾಖೆ ಎಡವಟ್ಟು ಮಾಡಿಕೊಂಡಿದೆ. ನಗರಕ್ಕೆ ಹೊಂದಿಕೊಂಡಿರುವ , ಜನರಿಗೆ ತೀರಾ ಅವಶ್ಯವಿರುವ ಕಡಲತಡಿಯನ್ನು ರಕ್ಷಣಾ ಇಲಾಖೆ ಮತ್ತು ಅದನ್ನು ಕಣ್ಣುಮುಚ್ಚಿ ಸ್ಯಾಂಕ್ಷನ್ ಮಾಡಿದ ರಾಜ್ಯ ಸರ್ಕಾರದ ನೀತಿ-ನಿಲುವಿನಲ್ಲಿ ಯಾವ ತರ್ಕ-ಸಮರ್ಥನೆಯೂ ಇಲ್ಲ. ಸುಪ್ರೀಂ ಕೋರ್ಟ್ 1998ರಲ್ಲಿ ಸಾರ್ವಜನಿಕ ಸಂಪತ್ತಾದ ನದಿ-ಸಮುದ್ರಗಳನ್ನು ಬೇರೆ ಬೇರೆ ಉದ್ದೇಶಕ್ಕೆ ಪರಿವರ್ತಿಸುವ ಅಧಿಕಾರ ರಾಜ್ಯ ಅಥವಾ ಕೇಂದ್ರ ಸರ್ಕಾರಕ್ಕೆ ಇಲ್ಲವೆಂದು ಸ್ಪಷ್ಟ ತೀರ್ಪು ನೀಡಿದೆ. ಅರಣ್ಯ-ನದಿ-ಸಮುದ್ರ ತೀರದಲ್ಲಿ ವಾಸಿಸುವವರ ಬದುಕಿಗೆ ಭದ್ರತೆ ನೀಡುವುದರ ಜೊತೆಗೆ ಜೀವವೈವಿಧ್ಯತೆ ಹಾಗೂ ನೈಸರ್ಗಿಕ ಸಂಪನ್ಮೂಲ ಕಾಯ್ದುಕೊಳ್ಳುವುದು ಸರ್ಕಾರಗಳ ಆದ್ಯ ಕರ್ತವ್ಯವೆಂದು ಹೇಳಿದೆ. ಈ ಆಧಾರದಲ್ಲಿ ಕಾರವಾರದ ಬೀಚ್ ಹಸ್ತಾಂತರ ಅಕ್ಷಮ್ಯ ಅಪರಾಧವಾಗುತ್ತದೆ.

ಹಾಗೆಯೇ ಕಾರವಾರದಲ್ಲಿ ಕೋಸ್ಟ್ ಗಾರ್ಡ್ ನೆಲೆಯಾದರೆ ಕೇಂದ್ರ ಸರ್ಕಾರ ತಾನೇ ಮಾಡಿರುವ ಸಿಆರ್‌ಝೆಡ್ ಕಾಯಿದೆಯ ಉಲ್ಲಂಘನೆ ಆಗುತ್ತದೆ. ಕಬ್ಜಾ ಮಾಡಿಕೊಂಡಿರುವ ಕಡಲತೀರದಲ್ಲಿ ಕೋಸ್ಟ್ ಗಾರ್ಡ್ ಶಾಶ್ವತ ಕಟ್ಟಡ ಕಟ್ಟದರೆ ಅದು ಪಕ್ಕಾ ಅವೈಜ್ಞಾನಿಕ-ಕಾನೂನುಬಾಹಿರವಾಗುತ್ತದೆ! ಜಾಗತಿಕ ತಾಪಮಾನ ಒಂದೇ ಸಮನೆ ಏರುತ್ತಿರುವುದರಿಂದ ಸಮುದ್ರ ಮಟ್ಟವೂ ಹೆಚ್ಚಾಗುತ್ತಿದೆ. ತೀರದ ಗುಂಟದಲ್ಲಿ ಶಾಶ್ವತ ಕಟ್ಟಡ-ಸ್ಥಾವರ



ಕಟ್ಟಿದರೆ ಅವು ಕಾಲಾನುಕ್ರಮದಲ್ಲಿ ಸಮುದ್ರ ಪಾಲಾಗುವುದು ಖಾತ್ರಿ! ಇದಕ್ಕೆ ಕಾರವಾರ ಬೀಚ್‌ನಲ್ಲಿದ್ದ ಪುಟಾಣಿ ರೈಲು ಹಳಿ, ನಗರಸಭೆಯ ಉದ್ಯಾನವನದ ವೀಕ್ಷಣಾ ಗೋಪುರಗಳು ಕಡಲಿಗೆ ಆಹುತಿಯಾಗಿರುವುದೇ ಜ್ವಲಂತ ಸಾಕ್ಷಿಯಂತಿದೆ. ಹೀಗಿರುವಾಗ ತಟರಕ್ಷಕ ದಳದ ನೆಲೆ ಕಡಲ ತೀರದ ಸಿಆರ್‌ಝೆಡ್ ವಲಯದಲ್ಲಿ ಸ್ಥಾಪಿಸುವುದು ಹಾಸ್ಯಾಸ್ಪದವೇ ಸರಿ!

ಉಗ್ರರು ಕರಾವಳಿ ಮೂಲಕ ದೇಶದೊಳಗೆ ನುಸುಳುವ ಶಂಕೆಯಿರುವುದರಿಂದ ಕೋಸ್ಟ್‌ಗಾರ್ಡ್ ಠಾಣೆ ಅನಿವಾರ್ಯ

ಎಂಬುದು ಅಧಿಕಾರಿ ಗ್ಯಾಂಗಿನ ವಾದ. ಸರಿ, ರಕ್ಷಣೆ ದೇಶಕ್ಕೆ ಬೇಕು ನಿಜ. ದೇಶ ರಕ್ಷಿಸುವ ಜವಾಬ್ದಾರಿ ಕಾರವಾರಿಗರದೂ ಕೂಡ. ಹಾಗಂತ ಜೀವನಾಧಾರವಾದ ಕಡಲ ತೀರವನ್ನೇ ಬಿಟ್ಟುಕೊಟ್ಟು ಬೀದಿಗೆ ಬೀಳಬೇಕೆಂದೇನಿಲ್ಲ! ಕಾರವಾರ ಸಮುದ್ರದ ಮಧ್ಯದಲ್ಲಿರುವ ದೇವಗಡ ಅಥವಾ ಕೂರ್ಮಗಡ ನಡುಗಡ್ಡೆ ಕೋಸ್ಟ್‌ಗಾರ್ಡ್‌ಗೆ ಕೊಡಬಹುದಲ್ಲವಾ? ಈಗಾಗಲೇ ದೇಶಕ್ಕಾಗಿ-ರಾಜ್ಯಕ್ಕಾಗಿ ಕಾರವಾರಿಗರು ಅಪಾರ ನೆಲ ಕೊಟ್ಟು ನಿರಾಶ್ರಿತರಾಗಿದ್ದಾರೆ. ಪರ್ಯಾಯ ಸಾಧ್ಯತೆಯಿರುವಾಗಲೂ ಜನರನ್ನು ಒಕ್ಕಲೆಬ್ಬಿಸಿದರೆ ದೊಡ್ಡ ಪಾತಕ ಆಗುತ್ತದೆ. ಹೇಗಿದ್ದರೂ ಸಮುದ್ರದಲ್ಲಿ 12 ನಾಟಿಕಲ್ ಮೈಲಿವರೆಗಿನ ರಕ್ಷಣೆ ರಾಜ್ಯ ಕಡಲು ಕಾವಲು ಪಡೆ ಮಾಡುತ್ತದೆ. ಇದರ ಮುಂದಿನ ಕಡಲು ಕೋಸ್ಟ್‌ಗಾರ್ಡ್ ವ್ಯಾಪ್ತಿಗೆ ಬರುತ್ತದೆ. ಹೀಗಾಗಿ ಅದಕ್ಕೆ ಕೂರ್ಮಗಡ ಅಥವಾ ದೇವಗಡ ದ್ವೀಪಗಳೇ ನೆಲೆಗೆ ಪ್ರಶಸ್ತ ಪ್ರದೇಶ. ದೇಶ ರಕ್ಷಣೆಯ ಹೆಸರಲ್ಲಿ ಪಾಪದ ಜನರನ್ನು ಅಧಿಕ ಪ್ರಸಂಗಿ ಅಧಿಕಾರಿಗಳು-ಅವರ ಕರ್ಮಗೇಡಿ ಸರ್ಕಾರಗಳು ಬಲಿ ಪಡೆಯುವುದು ತರವಲ್ಲ!

ಹೋರಾಟದ ಹಾದಿ

ಕೇವಲ 16 ಎಕರೆ ಪ್ರದೇಶವನ್ನಷ್ಟೇ ಕೋಸ್ಟ್ ಗಾರ್ಡ್ ಕೊಡಲಾಗುತ್ತಿದೆ. ಹೀಗಾಗಿ ಮೀನುಗಾರಿಕೆ ನಡೆಸಲು ಯಾವ ತೊಂದರೆಯೂ ಇಲ್ಲ ಎಂಬ ಸುಳ್ಳು ಅಧಿಕಾರಿಗಳು ಬೊಗಳುತ್ತಿದ್ದಾರೆ. ಹಿಂದೆ ಸೀ-ಬರ್ಡ್ ನೌಕಾನೆಲೆ ಸ್ಥಾಪನೆ ಹೊತ್ತಲೂ ಅಂದಿನ ಜಿಲ್ಲಾಧಿಕಾರಿ ಖರೋಲಾ ಎಂಬ ಸುಳ್ಳು ಆಡಳಿತಗಾರರ ಪ್ರತಿನಿಧಿ ಹೀಗೆ ಬೋಂಗು ಬಿಟ್ಟಿದ್ದ. ಸೀ-ಬರ್ಡ್‌ಗೂ ಮೀನುಗಾರಿಕೆಗೂ ಸಂಬಂಧವೇ ಇಲ್ಲ, ಮೀನುಗಾರರು ನೌಕಾನೆಲೆ ಬಂದನಂತರವೂ ಧಾರಾಳವಾಗಿ ಫಿಶಿಂಗ್ ನಡೆಸಬಹುದೆಂದು ಮೋಸದ ಮಾತಾಡಿದ್ದ. ಆದರೆ ಆಗಿದ್ದೇನು ಗೊತ್ತಾ? ಈಗ ಮೀನುಗಾರಿಕೆಗೆ ತೆರಳಿದ ಬೆಸ್ತರ ಬೋಟ್ ಹಿಡಿದು ಮೀನು ದೋಚುತ್ತಿದ್ದಾರೆ.. ಮಿಲಿಟರಿ ಕಾನೂನಿಗೆ ಒಳಪಡಿಸಿ ಹಿಂಸಿಸುತ್ತಿದ್ದಾರೆ. ಲಾರಿ ಬೀಸುತ್ತಾರೆ. ಅವಾಚ್ಯವಾಗಿ ಬೈದು ಬೆದರಿಸುತ್ತಾರೆ. ನೌಕಾನೆಲೆಯಿಂದ ಮೀನುಗಾರರ ಬದುಕೇ ದುಸ್ತರವಾಗಿದೆ.

ಕೋಸ್ಟ್‌ಗಾರ್ಡ್‌ನಿಂದಲೂ ಹೀಗೆ ತೊಂದರೆ-ತೊಡಕು ಮೀನುಗಾರರಿಗೆ ಆಗುವುದು ಖಂಡಿತ. ಅಕ್ಕ-ಪಕ್ಕದ ಇನ್ನೊಂದಿಷ್ಟು ಬೀಚ್ ಏರಿಯಾ ಕೋಸ್ಟ್‌ಗಾರ್ಡ್ ವಶಪಡಿಸಿಕೊಂಡೇ ಕೊಳ್ಳುತ್ತದೆ. ಈಗಲೇ ನಿರ್ಬಂಧಿತ ಪ್ರದೇಶವೆಂದು ತಮ್ಮ ಕಬ್ಜಾದ ಜಾಗಕ್ಕೆ ಬೋರ್ಡ್ ಹಾಕಿರುವ ಕೋಸ್ಟ್‌ಗಾರ್ಡ್‌ನವರು ಮುಂದೆ ಬೀಚ್ ಹತ್ತಿರ 'ರಕ್ಷಣಾ ನೆಪ'ದಿಂದ ಯಾರನ್ನೂ ಸುಳಿಯಗೊಡಲಾರರು. ಆಗ ಮೀನುಗಾರರ ಪಾಲಿಗಷ್ಟೇ ಅಲ್ಲ, ಇಡೀ ಕಾರವಾರಕ್ಕೆ ಈ ಕೋಸ್ಟ್‌ಗಾರ್ಡ್‌ನಿಂದ ಕಿರಿಕಿರಿ-ಹಿಂಸೆಯಾಗುವುದಂತೂ ಶತಸಿದ್ಧ! ಕೋಸ್ಟ್‌ಗಾರ್ಡ್ ನೆಲೆಯನ್ನು ಸೀ-ಬರ್ಡ್ ಸ್ವಾಧೀನದಲ್ಲಿರುವ ಸಾವಿರಾರು ಎಕರೆ ಪ್ರದೇಶದ ಒಂದು ಮೂಲೆಯಲ್ಲೇಕೆ ಸ್ಥಾಪಿಸಬಾರದು. ಹಾಗಂತ ಕಾರವಾರದ ಪ್ರಜ್ಞಾವಂತರು ಕೇಳುತ್ತಿದ್ದಾರೆ.

ಜನರ ಬೀಚ್‌ಅನ್ನು ರಕ್ಷಣಾ ಇಲಾಖೆಯ ಕೋಸ್ಟ್ ಗಾರ್ಡ್‌ಗೆ ರಹಸ್ಯವಾಗಿ ಹಸ್ತಾಂತರಿಸಿರುವುದರ ವಿರುದ್ಧ ಇಡೀ ಕಾರವಾರ ಈಗಾಗಲೇ ತಿರುಗಿಬಿದ್ದಿದೆ. ಸಾವಿರಾರು ಮೀನುಗಾರರು-ಸಾರ್ವಜನಿಕರು ಸೇರಿ ದೊಡ್ಡ ಪ್ರತಿಭಟನೆ ಮಾಡಿದ್ದಾರೆ. ಕಡಲತೀರದಲ್ಲಿ ತಟ ರಕ್ಷಕ ಪಡೆ ಮತ್ತು ಹೆಲಿಪ್ಯಾಡ್‌ಗೆ ಜಾಗ ಮಂಜೂರಿ ಮಾಡಿರುವ ಆದೇಶ ರದ್ದು ಮಾಡುವಂತೆ ಒತ್ತಾಯಿಸಿದ್ದಾರೆ. ಹಸ್ತಾಂತರ ಆಗಿರುವ ಜಮೀನನ್ನು ವಾಪಸ್ ಪಡೆದು ಮೀನುಗಾರರಿಗೆ-ಸಾರ್ವಜನಿಕರಿಗೆ-ಪ್ರವಾಸಿಗಳಿಗೆ ಈಗಿನಂತೆ ಮುಕ್ತವಾಗಿ ಬಿಟ್ಟುಕೊಡುವಂತೆ ಜಿಲ್ಲಾಡಳಿತವನ್ನು ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ; ಬೀಚ್‌ಗೆ ಸಾರ್ವಜನಿಕ ಪ್ರವೇಶ ನಿಷೇಧಿಸಿ ಹಾಕಲಾಗಿದ್ದ ಬೋರ್ಡ್‌ಗೆ ಕಪ್ಪು ಮಸಿಬಳಿದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಷ್ಟಾದರೂ ಹೇತ್ಲಾಂಡಿ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿಯ ಪತ್ತೆಯೇ ಇಲ್ಲ. ಕಾರವಾರ ಮತ್ತು ಕರಾವಳಿ ತಾಲ್ಲೂಕುಗಳನ್ನು ಕಡೆಗಣಿಸುತ್ತಲೇ ಬಂದಿರುವ ಈ ಹವ್ಯಕ ಸಾಮ್ರಾಜ್ಯದ ಶಿರಸಿ ಸಚಿವ ಕೋಸ್ಟ್‌ಗಾರ್ಡ್ ರಾತ್ರೋರಾತ್ರಿ ಸಾರ್ವಜನಿಕ-ಮೀನುಗಾರರ ಜೀವನಾಧಾರ ಬೀಚ್ ಕಬಳಿಸಿರುವ ಬಗ್ಗೆ ತಲೆಯೇ ಕೆಡಿಸಿಕೊಂಡಿಲ್ಲ. ಸಂಸದ ಅನಂತ್ಕಾಣಿ ಅದ್ಯಾವ ಗತಿಸಿದ ರಾಷ್ಟ್ರ ನೇತಾರನ ವಂಶಸ್ಥರನ್ನು ಹುಡುಕುವ ತರಾತುರಿಯಲ್ಲಿದ್ದಾನೋ? ಹಿಂದೊಮ್ಮೆ ಸುಭಾಷ್ ಚಂದ್ರಬೋಸ್‌ರ ವಂಶಸ್ಥರನ್ನು ತಾನು ಹುಡುಕಿ ತಂದಿದ್ದೇನೆ ಎಂದು ಹಸೀ ಸುಳ್ಳು ಹೇಳಿ ಹಾಸ್ಯಾಸ್ಪದನಾಗಿದ್ದ. ಈ ಎಡವಟ್ಟು ಮಾಣಿಗೆ ಕಮ್ಯುನಲ್ ಕಿತಾಪತಿ ಬಿಟ್ಟರೆ ಮತ್ತೇನೂ ಗೊತ್ತಿಲ್ಲ,

ಇಂಥ ದ್ರೋಹಿ ಲೀಡರ್‌ಗಳಿಂದಾಗಿಯೇ ಉತ್ತರ ಕನ್ನಡ ಉತ್ತರ ಕಾಣದ ಸಮಸ್ಯೆಗಳ ಜಿಲ್ಲೆಯಂತಾಗಿಹೋಗಿದೆ. ಇನ್ನಾದರೂ ಜಿಲ್ಲಾ ಮಂತ್ರಿ ಕಾಗೇರಿ, ಸಂಸದ ಅನಂತ್ಕಾಣಿ, ವಗೈರೆ ಶಾಸಕರು ಎಚ್ಚೆತ್ತುಕೊಳ್ಳುವರಾ? ಜಿಲ್ಲಾಡಳಿತ ಜನಾಕ್ರೋಶ ಆಸ್ಫೋಟಿಸುವ ಮೊದಲೇ ಜನಸಾಮಾನ್ಯರ-ಮೀನುಗಾರರ ಬೀಚನ್ನು ಮುಕ್ತಗೊಳಿಸೀತಾ? ಹೋರಾಟವಂತೂ ಒಂದರಹಿಂದೊಂದರಂತೆ ಆಘಾತಕ್ಕೊಳಗಾಗುತ್ತಿರುವ ಕಾರವಾರಿಗರಿಗೆ ಹೊಸದೇನೂ ಅಲ್ಲ,

ಅನಾಹುತವಾದರೆ ಮಂತ್ರಿ, ಕಾಗೇರಿ ಮತ್ತು ಜಿಲ್ಲಾಡಳಿತವೇ ನೇರಾನೇರ ಹೊಣೆಯಾಗುತ್ತದೆ!!

• ನಹುಶ

ನ್ಯಾ. ಸೋಮಶೇಖರ್ ವರದಿ ಬೀಚಿ ಲೇಖನದಂತಿದೆಯಾ!


ಥೂತ್ತೇರಿ

ಯಾಹೂ

ಕರ್ನಾಟಕದ ಚರ್ಚ್‌ಗಳ ಮೇಲೆ ನಡೆದ ದಾಳಿ ಬಗ್ಗೆ ಆಮೂಲಾಗ್ರ ತನಿಖೆ ಮಾಡಿ ಒಂದು ವರದಿ ಕೊಡಪ್ಪ ಎಂದು ನ್ಯಾಯಮೂರ್ತಿ ಸೋಮಶೇಖರ್ ಅವರನ್ನು ಸರಕಾರ ಕೇಳಿಕೊಂಡಾಗ ಬೆಟ್ಟ ಅಗೆಯುವ ಹಜಾರದೊಂದಿಗೆ ರೆಡಿಯಾದ ಸೋಮಶೇಖರ್ ಅವರು ಇಂತಹ ವರದಿ ಕೊಡುವುದಕ್ಕಿಂತ ಮನೆಯ ವರಾಂಡದಲ್ಲಿ ಕುಳಿತು ಕಾಲಹಾಕಬಹುದಿತ್ತಂತಲ್ಲಾ. ನ್ಯಾಯಮೂರ್ತಿಗಳ ಅಪೂರ್ವ ಸಲಹೆಗಳನ್ನು ನೋಡಿದ ಚೆಡ್ಡಿಗಳೇ ನಕ್ಕು ಸುಮ್ಮನಾದವಂತಲ್ಲಾ. "ಎಲ್ಲಾ ಧಾರ್ಮಿಕ ಸಂಘಟನೆಗಳನ್ನು ಕಾನೂನಿನ ವ್ಯಾಪ್ತಿಗೆ ಒಳಪಡಿಸಿ, ಈ ಸಂಘಗಳ ನಿರ್ವಹಣೆಗೆ ಸಮಿತಿ ರಚಿಸಿ, ಧರ್ಮಗುರುಗಳ ಕಾರ್ಯವೈಖರಿ ಗಮನಿಸಿ, ಹಣಕಾಸಿನ ವ್ಯವಹಾರದ ಮೇಲೆ ನಿಗಾ ಇರಲಿ, ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡಿ, ಕ್ರೈಸ್ತರ ಮೇಲಿನ ಹಲ್ಲೆಗೆ ಸಮಿತಿ ರಚಿಸಿ, ಭೂತ ಮತ್ತು ಭವಿಷ್ಯದ ಘಟನೆಗೆ ಜಿಲ್ಲಾ ಆಡಳಿತವೇ ಹೊಣೆ, ಈಗಿರುವ ಪೋಲೀಸರನ್ನು ನೆಚ್ಚದೆ ಪ್ರತಿ ಜಿಲ್ಲೆಗೂ ಗೂಢಾಚಾರಿಗಳನ್ನು ನೇಮಿಸಿ, ಒಬ್ಬ ಐಜಿಪಿಯನ್ನು ಅಪಾಯಿಂಟ್ ಮಾಡಿಕೊಳ್ಳಿ, ಮಿಲಿಟರಿ ಮಾದರಿಯ ತರಬೇತಿ ಪಡೆದ ಪೊಲೀಸ್ ತಯಾರಿಸಲು ಒಂದು ಒಳ್ಳೆ ಕಾನೂನು ಮಾಡಿಕೊಳ್ಳಿ, ಧಾರ್ಮಿಕ ಆಯೋಗದ ರಚನೆ ಮಾಡಿ, ಆಗಾಗ್ಗೆ ಧಾರ್ಮಿಕ ಸಭೆ ಮಾಡಿ, ಸದರಿ ಸಭೆ ಹಳ್ಳಿ-ಪಟ್ಟಣಗಳಲ್ಲೂ ನಡೆಯಲಿ" ಎಂದು ಬಿಟ್ಟಿ ಸಲಹೆ ಕೊಟ್ಟು ತಿಪ್ಪೆ ಸಾರಿಸಿರುವ ಸೋಮಶೇಖರ್ ಆಯೋಗದ ಬಗ್ಗೆ ಮಾಜಿ ಪ್ರಧಾನಿಗಳಾದ ದೇವೇಗೌಡರು "ಏನ್ರಿ ಇದರರ್ಥ" ಎಂದರಂತಲ್ಲ, ಥೂತ್ತೇರಿ.

* * * * * * * *

ಸಾಮಾನ್ಯವಾಗಿ ಆಯೋಗದ ವರದಿಗಳು ಗಂಭೀರವಾಗಿರುತ್ತವೆ. ಪ್ರಕರಣಕ್ಕೆ ಸಂಬಂಧಪಟ್ಟವರನ್ನು ಪತ್ತೆಹಚ್ಚಿ ಒಂದು ತೀರ್ಮ ನೀಡಿರುತ್ತವೆ. ನ್ಯಾ.ಮೂ. ಸೋಮಶೇಖರ್ ವರದಿ ಓದಿದರೆ ಹಾಸ್ಯ ಲೇಖನ ಓದಿದಂತಿದೆಯಲ್ಲಾ. ಉದಾಹರಣೆಗೆ "ಚರ್ಚಿನ ದಾಳಿಯಲ್ಲಿ ನಿಜವಾದ ಹಿಂದೂಗಳ ಕೈವಾಡವಿಲ್ಲ, ಆಡಳಿತ ಪಕ್ಷದ ರಕ್ಷಣೆ ಸಿಗುತ್ತದೆಂದು ಭ್ರಮಿಸಿದವರ ಕೈವಾಡವಿದೆ. ಇಂತವರಿಂದಲೇ ರಾಜ್ಯದ ಒಂಬತ್ತು ಜಿಲ್ಲೆಗಳಲ್ಲಿ ದಾಳಿ ನಡೆದಿದೆ. ಮತಾಂತರಕ್ಕೂ ದಾಳಿಗೂ ಸಂಬಂಧವಿಲ್ಲ, ಆದರೂ ಮತಾಂತರ ನಡೆದಿದೆ. ವಿದೇಶಿ ಹಣದ ಬಳಕೆಯಾಗಿದೆ. ದಾಳಿಯಿಂದ ಧರ್ಮಕ್ಕೆ ಧಕ್ಕೆಯಾಗಿದೆ. ಅಪನಂಬಿಕೆ ಬೆಳೆದಿದೆ" ಎಂದು ಪತ್ತೆಹಚ್ಚಿ ಬಹಿರಂಗಪಡಿಸಿರುವ ಸೋಮಶೇಖರ್ ವರದಿ ನೋಡಿದ ನಗು ಕಳೆದುಕೊಂಡಿದ್ದ ಚೆಡ್ಡಿಗಳೇ ತುಟಿ ಬಿರಿದು "ಒಳ್ಳೆಯದ್ದು. ಸದರಿ ವರದಿ ಸಂಘವೇ ತಯಾರಿಸಿಕೊಟ್ಟಂತಿದೆ. ಮುಂದೆ ನಮ್ಮ ಕಾರ್ಯಾಚರಣೆಗಳು ನಡೆದಾಗ ಸೋಮಶೇಖರ್ ಸಾಹೇಬರನ್ನೇ ನೇಮಿಸಿಕೊಳ್ಳಬೇಕು" ಎಂದು ತೀರ್ಮಾನಿಸಿದವಂತಲ್ಲಾ, ಥೂತ್ತೇರಿ!



* * * * * * * *

ಜೀವಭಯದಿಂದ ತತ್ತರಿಸಿ ಗಣಬಂದಂತೆ ನಡುಗುತ್ತಿರುವ ಯಡ್ಡಿ ಕೈಗೆ ಆಯೋಗದ ವರದಿ ಕೊಟ್ಟಾಗ "ನನ್ನವೇ ನನಗಾಗ್ಯದೆ. ಇದು ಬೇರೆ" ಎಂಬಂತೆ ಮುಖಮಾಡಿ "ಈ ಬಗ್ಗೆ ಕ್ರಮ ತಗೊಳ್ತಿನಿ" ಎಂದರಂತಲ್ಲಾ. ಎಡೂರಪ್ಪನಿಗೆ ಜೀವಭಯವಿರುವ ಸುದ್ದಿ ಬಹಿರಂಗಗೊಂಡ ಕೂಡಲೇ ಅವರ ಕಷ್ಟಸುಖಕ್ಕೆ ಸಹಜವಾಗಿ ಸ್ಪಂದಿಸುವ ಶೋಭಾ "ನನಗೂ ಜೀವಭಯವಿದೆ. 'ನೀನು ಒಬ್ಬಳೇ ಇದ್ದಾಗ ಸಿಕ್ಕು ನೋಡಿಕೊಳ್ತೀನೆ' ಎಂಬ ಕರೆಗಳು ಬರಲಾರಂಭಿಸಿವೆ" ಎಂದು ದೂರಿದ್ದಾರಂತಲ್ಲಾ. ಸದರಿ ಪ್ರಕರಣದಿಂದ ಇಡೀ ಚೆಡ್ಡಿ ಸಂಪುಟ ಸನ್ನಿರೋಗ ಬಡಿದಂತೆ ಭಯೋತ್ಪಾದನೆಗೆ ತುತ್ತಾಗಿ ಹೋಗಿದೆಯಂತಲ್ಲಾ. ಈ ಪೈಕಿ ಗೃಹಮಂತ್ರಿಗೆ ರಾಜ್ಯಪಾಲರ ಭಯ. ಇನ್ನುಳಿದವರಿಗೆ ಮಾಡಿಕೊಂಡಿರುವುದನ್ನು ಹೇಗೆ ದಕ್ಕಿಸಿಕೊಳ್ಳಬೇಕೆಂಬ ಭಯ. ಹೀಗೆ ಇಡೀ ಯಡ್ಡಿ ಸರ್ಕಾರವೇ ಭಯದ ನೆರಳಲ್ಲಿ ಬದುಕುತ್ತಿರಬೇಕಾದರೆ ಅತ್ತ ಅಧ್ವಾನಿ. ಯಡ್ಡಿಗೆ ಧೈರ್ಯವಾಗಿ ಏನೂ ಹೇಳಲಾಗದೆ "ನಮ್ಮ ಪಕ್ಷದ ಮುಖ್ಯಮಂತ್ರಿಗಳು ತಮ್ಮ ಆಸ್ತಿ ಘೋಷಣೆ ಮಾಡಿಕೊಳ್ಳಬೇಕು" ಎಂದರಂತಲ್ಲಾ. ಇದರಿಂದ ಮತ್ತೂ ಗಲಿಬಿಲಿಯಾದ ಯಡಿಯೂರಪ್ಪ "ನಾನು ಇನ್ನು ಮುಂದೆ ಯಾರಿಗೂ ಉತ್ತರ ಕೊಡಲ್ಲ, ಶಾಲಾಕಾಲೇಜಿಗೆ ನುಗ್ಗಿ ಮಕ್ಕಳೆದುರು ನನ್ನ ಕಷ್ಟ ಹೇಳಿಕೊಳ್ಳುತ್ತೇನೆ" ಎಂದರಂತಲ್ಲಾ, ಥೂತ್ತೇರಿ!!

* * * * * * * *

ಎಡೂರಪ್ಪನ ಐಲು ಜಾರಿಯಾದರೆ ಶಾಲಾಕಾಲೇಜಿನ ಮಕ್ಕಳಿಗೆ ಒಳ್ಳೆ ಮನರಂಜನೆ ಜೊತೆಗೆ ಸ್ವೀಟು-ಖಾರ, ಕಾಫಿಯೂ ದೊರಕಲಿದೆಯಂತಲ್ಲಾ. ಮಾಸ್ತರ ಪಾಠವನ್ನೇ ಅರ್ಥಮಾಡಿಕೊಳ್ಳಲು ಹೆಣಗುವ ಮಕ್ಕಳು ಇನ್ನು ಯಡ್ಡಿ ಭಾಷಣವನ್ನು ಗ್ರಹಿಸುವುದುಂಟೆ ಎಂದು ತರ್ಕಿಸುವ ಸಮಯದಲ್ಲಿ, ಚೆಡ್ಡಿಗಳು ಬದಲಾಯಿಸುವುದು ಮಕ್ಕಳ ಮನಸನ್ನೇ ಅಲ್ಲವೆ? ಆದ್ದರಿಂದ ಹಳೆ ವಾಸನೆಯ ಜಾಡು ಹಿಡಿದ ಯಡ್ಡಿ ಸ್ಕೂಲಿಗೆ ನುಗ್ಗಿ "ಮಕ್ಕಳೇ, ನಾನು ನಿಮಗೆ ಸೈಕಲ್ ಕೊಟ್ಟಿದ್ದೇನೆ, ಮುಂದೆ ಬೈಕ್ ಕೊಡುವ ಆಲೋಚನೆಯಲ್ಲಿದ್ದೆ, ಆದರೆ ಈ ವಿರೋಧ ಪಕ್ಷದವರು ನಾನು ಜೀವಸಹಿತ ರಕ್ತಕಾರಿಕೊಂಡು ವಿಧಾನಸೌಧದೆದುರು ಸಾಯುವಂತೆ ಮಾಟ ಮಾಡಿಸಿದ್ದಾರೆ. ಅವ್ರು ಬಂದಾಗ ವಿಚಾರಿಸಿಕೊಳ್ಳಿ" ಎಂದು ಕಣ್ಣೀರು ಹಾಕಿದ್ದಾದರೆ ಮಕ್ಕಳು ಮಮ್ಮಲ ಮರುಗಿ ವಿರೋಧ ಪಕ್ಷದವರು ಬಂದರೆ ಕಲ್ಲು ಬೀರೇಬೀರುತ್ತಾರಂತಲ್ಲಾ, ಥೂತ್ತೇರಿ!!

ಚರ್ಚ್ ದಾಳಿ ವರದಿ ಕ್ರಿಮಿನಲ್‌ಗಳು ಸೇಫ್!


ರಾಜ್ಯಾದ್ಯಂತ ನಡೆದ ಹಾಗೂ ಅಧಿಕೃತವಾಗಿ ದಾಖಲಾದ ಒಟ್ಟು 57 ಚರ್ಚ್ ದಾಳಿಗಳಲ್ಲಿ RSS, ಬಿಜೆಪಿ ಮತ್ತಿತರ ಸಮಾಜದ್ರೋಹಿಗಳ ಪಾತ್ರ ಏನೇನೂ ಇರಲಿಲ್ಲ ಎಂಬುದೇ ಒಂದು ಆಶ್ಚರ್ಯಕರ ಸತ್ಯ ಶೋಧನೆಯಾಗಿದೆ. ಮತ್ತದೇ ಹಳೆಯ ಮಾತೇ ಹೇಳಬೇಕೆಂದರೆ ಬಿಜೆಪಿ ಸರ್ಕಾರದಲ್ಲಿ ನ್ಯಾಯ ನಿಧಾನವೆಂಬುದಿಲ್ಲ. ಜೊತೆಗೆ ನ್ಯಾಯವೂ ಇಲ್ಲ ಎಂಬುದೀಗ ಮತ್ತೆ ದೃಢಪಟ್ಟಿದೆ.

● ಪಾರ್ವತೀಶ

ಬಿಜೆಪಿ ಸರ್ಕಾರದಲ್ಲಿ ನ್ಯಾಯ ನಿಧಾನವೆಂಬ ಮಾತೇ ಇಲ್ಲ ಬಿಡಿ. 2008 ರ ಜೂನ್‌ನಲ್ಲಿ ಹಾವೇರಿಯಲ್ಲಿ ರೈತರ ಮೇಲೆ ಯಡ್ಡಿ ಗೋಲಿಬಾರ್ ಮಾಡಿಸಿದರು. ಆ ಬಗ್ಗೆ ತನಿಖೆ ನಡೆಸಿದ ನ್ಯಾ. ಜಗನ್ನಾಥ್ ಶೆಟ್ಟಿ ಆಯೋಗವು ಕೇವಲ 22 ತಿಂಗಳಲ್ಲೇ ಅಂದರೆ 2010 ರ ಏಪ್ರಿಲ್‌ನಲ್ಲೇ ತನ್ನ ವರದಿ ನೀಡಿಬಿಟ್ಟಿತು ಮತ್ತು ಅದರಲ್ಲಿ ಗೋಲಿಬಾರ್‌ನಲ್ಲಿ ಸತ್ತ ವ್ಯಕ್ತಿ ರೈತನಲ್ಲ ಬದಲಾಗಿ ಒಬ್ಬ ದೊಂಬಿಕೋರ, ಗೂಂಡಾ ಎಂದು ಪ್ರತಿಪಾದಿಸಲಾಗಿತ್ತು. ಈಗ ಚರ್ಚ್ ದಾಳಿಗೆ ಸಂಬಂಧಿಸಿದಂತೆ ನ್ಯಾ. ಸೋಮಶೇಖರ್ ಆಯೋಗದ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. 2008 ರಲ್ಲಿ ಸತತವಾಗಿ ಹಾಗೂ ಅತ್ಯಂತ ವ್ಯವಸ್ಥಿತವಾಗಿ ನಡೆದ ಈ ದಾಳಿಗಳ ಕುರಿತು ತನಿಖೆ ನಡೆಸಿದ ಆಯೋಗವೂ ಸಹ ಕೇವಲ ಒಂದೂಕಾಲು ವರ್ಷದೊಳಗಾಗಿ ತನ್ನ ವರದಿ ನೀಡಿದೆ.


ಬಹಳ ಮುಖ್ಯವಾಗಿ ವರದಿಯಲ್ಲಿ ಹಿಂದೂ ಕೋಮುವಾದಿಗಳಿಗೆ, ಬಿಜೆಪಿ ಸರ್ಕಾರಕ್ಕೆ, ಆಯಾ ಜಿಲ್ಲಾಡಳಿತ ಹಾಗೂ ಪೊಲೀಸರಿಗೆ ಕ್ಲೀನ್‌ಚಿಟ್ ನೀಡಿಬಿಡಲಾಗಿದೆ.

ಭಜರಂಗದಳದ ಒಬ್ಬ ಮಹೇಂದ್ರ ಕುಮಾರ್, ಇನ್ನೊಬ್ಬ ದಿನೇಶ್, ಉಮೇಶ್, ಸಂತೋಷ್, ರಾಜೇಶ್-ಹೀಗೆ ಕೆಲವರನ್ನು ಕಿಡಿಗೇಡಿಗಳೆಂದು ಕಂಡುಹಿಡಿಯಲಾಗಿದೆ.



ಕ್ರಿಶ್ಚಿಯನ್ ಶಿಕ್ಷಣ ಸಂಸ್ಥೆಗಳ ಮೇಲೆ ಕಾಕದೃಷ್ಟಿ

ಕೋಮುವಾದಿ ಸಂಘಟನೆಗಳು ಚರ್ಚ್‌ಗಳ ಮೇಲೆ ವ್ಯವಸ್ಥಿತ ದಾಳಿ ನಡೆಸುತ್ತಿರುವುದರ ಹಿಂದೆ ಮತಾಂತರದ ಆರೋಪ ಹೊರಿಸಿ ಪಾದ್ರಿಗಳಿಗೆ ಕಿರುಕುಳ ನೀಡುತ್ತಿರುವುದರ ಹಿಂದೆ ಕೇವಲ ಹಿಂದೂತ್ವದ ಅಜೆಂಡಾ ಮಾತ್ರ ಇದ್ದಂತಿಲ್ಲ.



ಮೈ.ಚ.ಜಯದೇವ್

ಕರ್ನಾಟಕದ ಬಹುತೇಕ ಜಿಲ್ಲಾ ತಾಲ್ಲೂಕು ಹಾಗೂ ಸಣ್ಣಪುಟ್ಟ ಟೌನ್ ಸೆಂಟರ್‌ಗಳಲ್ಲೂ ಇರುವ ಕ್ರಿಶ್ಚಿಯನ್ ಕಾನ್ವೆಂಟ್ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಗುರಿಮಾಡಿಕೊಳ್ಳುವ ಕೆಟ್ಟ ಉದ್ದೇಶವೂ ಇದ್ದಂತಿದೆ. ಚರ್ಚ್‌ಗಳು, ಪಾದ್ರಿಗಳು, ನನ್‌ಗಳನ್ನು ದಾಳಿಗೆ ಗುರಿಯಾಗಿಸುತ್ತಾ ಅದರ ಮುಂದುವರೆದ ಭಾಗವಾಗಿ ಕ್ರಿಶ್ಚಿಯನ್ ಶಾಲೆಗಳನ್ನು ಅಪಪ್ರಚಾರಕ್ಕೀಡುಮಾಡಿ ಆಯಾ ಊರುಗಳಿಂದ ದೂರಮಾಡುವುದು ಅವರ ಪಿತೂರಿಯ ಮೊದಲ ಹಂತ. ನಂತರ ಅಂತಲ್ಲೆಲ್ಲಾ ಹಿಂದೂ ಸಂಘಟನೆಗಳು ಅವುಗಳ ನಾಯಕರೇ ಶಾಲೆಗಳನ್ನು ಆರಂಭಿಸಿ ಕಾನ್ವೆಂಟ್‌ಗಳನ್ನು ಸೈಡ್‌ಲೈನ್ ಮಾಡುವುದು ಮುಂದಿನ ಹಂತ.

ಇದರಿಂದ ಕೋಮುವಾದಿಗಳಿಗೆ ನಾನಾ ಲಾಭಗಳಿವೆ. ಒಂದು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿ ಹಣ ದೋಚುವುದು. ಮುಗ್ಧ ಮಕ್ಕಳಲ್ಲಿ ಕೋಮುವಾದಿ ಮನೋಭಾವ ಬೆಳೆಸುವುದು ಇತ್ಯಾದಿ. ಗುಜರಾತ್‌ನಲ್ಲಿ ಹಿಂದೂ ಕೋಮುವಾದಿಗಳು ಮೂಲೆಮೂಲೆಗಳಿಗೂ ತಲುಪಲು ಸಾಧ್ಯವಾಗಿದ್ದು ಇದೇ ತರದ ಶಿಕ್ಷಣ ಸಂಸ್ಥೆಗಳು, ವನವಾಸಿ ಆಶ್ರಮ, ಸಮಾಜ ಸೇವಾ ಸಂಸ್ಥೆಗಳ ಮೂಲಕವೇ ಎಂಬುದು ನಮಗೆ ಇಲ್ಲಿ ನೆನಪಾಗಬೇಕು. ಇತ್ತೀಚೆಗೆ ಕರ್ನಾಟಕದ ನೂರಾರು ಸ್ಥಳಗಳಲ್ಲಿ ಹಿಂದೂ ಕೋಮುವಾದಿಗಳು ಭಾರತೀಯ ವಿದ್ಯಾಮಂದಿರ ಇತ್ಯಾದಿಗಳಿಂದ ಅಸಂಖ್ಯಾ ಶಾಲಾಕಾಲೇಜುಗಳು ಶುರುಮಾಡುತ್ತಿದ್ದಾರೆ. ಇವರಿಗೆ ರಾಜ್ಯಮಟ್ಟದಲ್ಲಿ ದೊಡ್ಡ ಪ್ರತಿಸ್ಪರ್ಧೆ ಇರುವುದು ಕ್ರಿಶ್ಚಿಯನ್ ಶಿಕ್ಷಣ ಸಂಸ್ಥೆಗಳಿಂದ ಮಾತ್ರ ಎಂಬುದನ್ನು ಪರಿಗಣಿಸಿದರೆ ಚೆಡ್ಡಿಗಳ ಪಿತೂರಿ ಏನೆಂಬುದು ಅರ್ಥವಾಗುತ್ತದೆ.

ಮಹೇಂದ್ರ ಕುಮಾರ್ ಕ್ಷಮೆ ಕೇಳಬೇಕಲ್ಲವೇ?

ಭಜರಂಗದಳದ ಮಾಜಿ ರಾಜ್ಯ ಸಂಚಾಲಕ ಕೊಪ್ಪದ ಮಹೇಂದ್ರಕುಮಾರ್ ಇವತ್ತೊ ನಾಳೆಯೋ ಜಾತ್ಯತೀತ ಜನತಾದಳ ಸೇರುತ್ತಿದ್ದಾನೆ. ಇದರಿಂದ ಜೆಡಿಎಸ್‌ಗೆ ಒಳ್ಳೆಯದಾಗುತ್ತದೋ ಅಥವಾ ಕೆಟ್ಟದ್ದಾಗುತ್ತದೋ ಎಂಬುದನ್ನು ನಂತರ ನೋಡೋಣ.



ಆದರೆ ಮಹೇಂದ್ರಕುಮಾರ್‌ಗೆ ಈಗ ಜೆಡಿಎಸ್ ಸೇರುವ ತುರ್ತು ಯಾಕೆ ಉದ್ಭವಿಸಿರಬಹುದು?

ಸಂಘಪರಿವಾರಿಗಳು ಈಗ ದೂರ ತಳ್ಳಿದ್ದಾರೆ. ರಾಜ್ಯ ಬಿಜೆಪಿ ಸರ್ಕಾರವೇ ಮುಂದೆ ನಿಂತು ಮಹೇಂದ್ರ ಕುಮಾರ್‌ಗೆ ಜೈಲು ಕಾಣಿಸಿದೆ. ನಂತರ ಚರ್ಚ್ ದಾಳಿ ಕುರಿತಂತೆ ನ್ಯಾ.ಸೋಮಶೇಖರ್ ಆಯೋಗದ ವರದಿಯಲ್ಲಿ ಮಹೇಂದ್ರಕುಮಾರ್ ಕೈವಾಡ ಕುರಿತಂತೆ ಆರೋಪಿಯನ್ನಾಗಿಸಿದ ಮೇಲೆ ಆತನಿಗೆ ಚೆಡ್ಡಿ ಕ್ಯಾಂಪ್ ಬಿಟ್ಟು ಹೊರಬರುವುದಲ್ಲದೇ ಬೇರೆ ಆಯ್ಕೆಗಳೇ ಇರಲಿಲ್ಲ.

ಹಾಗಾಗಿ ಹಿಂದೂ ಭಯೋತ್ಪಾದಕ ಕೆಲಸಗಳು ತಪ್ಪು ಎಂಬ ಜ್ಞಾನೋದಯವಾಗಿ ಆತ ಜೆಡಿಎಸ್ ಸೇರುತ್ತಿದ್ದಾರೆಂದು ಯಾರೂ ಕೂಡ ಅರ್ಜೆಂಟಾದ ನಿರ್ಧಾರಕ್ಕೆ ಬರುವ ಅಗತ್ಯವಿಲ್ಲ.

ಇಷ್ಟರ ನಡುವೆ ಆರೆಸ್ಸೆಸ್‌ನ ಬ್ರಾಹ್ಮಣ ನಾಯಕರು ಸಂಘಪರಿವಾರದಲ್ಲಿರುವ ಶೂದ್ರ ಮಿಲಿಟೆಂಟ್ ಕಾರ್ಯಕರ್ತರನ್ನು ನಾನಾ ಕೆಟ್ಟ ಕೆಲಸಗಳಿಗೆ ಬಳಸಿಕೊಂಡು ನಂತರ ಅವರನ್ನು ಬೀದಿಗೆ ತಳ್ಳುವ ಕುತಂತ್ರವೂ ಮತ್ತೆ ಸಾಬೀತಾಗಿದೆ.

ಭಜರಂಗದಳದ ಮಹೇಂದ್ರಕುಮಾರ್‌ನ ಇವತ್ತಿನ ಸ್ಥಿತಿ ಅದಕ್ಕೊಂದು ಲೇಟೆಸ್ಟಾದ ಜೀವಂತ ಸಾಕ್ಷಿಯಾಗಿದೆ.

ಕೇಶವಕೃಪಾದೊಳಗೆ ಕುಳಿತು ಮನೆಹಾಳು ಕೆಲಸಗಳನ್ನು ಪ್ಲಾನ್ ಮಾಡುವ ಆರೆಸ್ಸೆಸ್‌ನ ಬ್ರಾಹ್ಮಣ ನಾಯಕರು ಅದನ್ನು ಜಾರಿಗೊಳಿಸುವಾಗ ಬಹುತೇಕ ಶೂದ್ರ ಯುವಕರನ್ನೇ ಛೂಬಿಡುತ್ತಾರೆ. ದೇಶಭಕ್ತಿ, ಹಿಂದೂ ಸಮಾಜ ಎಂದಿತ್ಯಾದಿ ಕತೆಕಟ್ಟುತ್ತಾರೆ. ಮುಗ್ಧರ ತಲೆಕೆಡಿಸಿ ತಮ್ಮ ಪುರೋಹಿತಶಾಹಿ ಹಿತಾಸಕ್ತಿಯ ಯಜ್ಞಕ್ಕೆ ಶೂದ್ರರನ್ನೇ ಬಲಿಕೊಡುವ ಅವರ ಪ್ರವೃತ್ತಿ ಹೊಸದೇನಲ್ಲ.

ಈ ಹಿನ್ನೆಲೆಯಲ್ಲಿ ನೋಡಿದರೆ ಒಕ್ಕಲಿಗ ಮಹೇಂದ್ರಕುಮಾರ್ ಕೂಡ ಒಂದು ರೀತಿಯ ಬಲಿಪಶುವೆ. ಆದರೆ ಆತ ಸಂಘಪರಿವಾರದ ವಲಯದಿಂದ ಆಚೆ ಬರುತ್ತಿರುವಾಗ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಲೇಬೇಕಾಗುತ್ತದೆ.

ಮೊದಲನೆಯದಾಗಿ ಭಜರಂಗದಳದ ಹೆಸರಿನಲ್ಲಿ ಕೆಲ ವರ್ಷಗಳಿಂದ ಮಾಡಿಕೊಂಡು ಬಂದ ಸಮಾಜ ವಿರೋಧಿ ಕೃತ್ಯಗಳಿಗೆ ಆತ ಕರ್ನಾಟಕದ ಜನತೆಯ ಕ್ಷಮಾಪಣೆ ಯಾಚಿಸಬೇಕು. ತನ್ನ ತಪ್ಪುಗಳ ಬಗ್ಗೆ ಮಹೇಂದ್ರನಿಗೆ ಹೃದಯಪೂರ್ವಕವಾಗಿ ಅರಿವಾಗಿದ್ದೇ ನಿಜವಾದಲ್ಲಿ ಕ್ಷಮೆ ಕೇಳುವುದೇ ಸರಿ. ಮತ್ತೂ ಹೇಳಬೇಕೆಂದರೆ ಆರೆಸ್ಸೆಸ್ಸಿನವರ ಪಿತೂರಿ, ದಲಿತ-ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಕುರಿತಂತೆ ಅಗತ್ಯಾನುಸಾರ ಪೊಲೀಸರಿಗೆ ಹಾಗೂ ನ್ಯಾಯಾಲಯಗಳಿಗೆ ಹೇಳಿಕೆ ನೀಡುವುದಾದರೆ ಇನ್ನೂ ಉತ್ತಮ. ಇದು ಯಾಕೆ ಬೇಕೆಂದರೆ ಮಹೇಂದ್ರಕುಮಾರ್‌ಗೆ ರಾಜಕಾರಣಿಯಾಗುವ ಆಸೆ ಈಗ ಬಂದಿದೆ. ಬಹುಶಃ ಶೃಂಗೇರಿ ವಿಧಾನಸಭಾ ಕ್ಷೇತ್ರದ ಮುಂದಿನ ಜೆಡಿಎಸ್ ಅಭ್ಯರ್ಥಿಯಾಗುವ ಆಸೆಯೂ ಆತನಿಗಿರಬಹುದು. ಹಾಲಿ ಬಿಜೆಪಿ ಶಾಸಕ ಜೀವರಾಜ್‌ಗೂ ಮಹೇಂದ್ರಗೂ ಸಂಬಂಧ ಯಾವಾಗಲೋ ಹಳಸಿಕೊಂಡಿದೆ. ಕೊಪ್ಪ-ಶೃಂಗೇರಿ-ಎನ್.ಆರ್.ಪುರ ಕ್ಷೇತ್ರದಲ್ಲಿ ಮಲೆನಾಡು ಒಕ್ಕಲಿಗರೇ ಬಹುಸಂಖ್ಯಾತರು. ಹಾಗಾಗಿ ದೇವೇಗೌಡ-ಕುಮಾರಸ್ವಾಮಿಗೂ ಅಲ್ಲಿ ಒಕ್ಕಲಿಗ ಜಾತಿಪ್ರಜ್ಞೆ ಕೆರಳಿಸಿ ಜೆಡಿಎಸ್‌ನ ಬಾವುಟ ಹಾರಿಸಬೇಕು ಎಂಬ ಗುರಿ ಇರಲೂಬಹುದು. ದಕ್ಷಿಣ ಕರ್ನಾಟಕದ ಹಾಸನ-ಮಂಡ್ಯ, ರಾಮನಗರ, ತುಮಕೂರು, ಬೆಂಗಳೂರು ಮುಂತಾದೆಡೆ ಜೆಡಿಎಸ್‌ಗೆ ಒಕ್ಕಲಿಗ ಜಾತಿಬೆಂಬಲ ಈಗಾಗಲೇ ಸದೃಢಗೊಂಡಿದೆ. ಅದೇರೀತಿ ಮಲೆನಾಡಿನಲ್ಲೂ ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ ಮುಂತಾದೆಡೆ ಇರುವ ಒಕ್ಕಲಿಗರನ್ನು ಜೆಡಿಎಸ್‌ನತ್ತ ಸೆಳೆಯುವ ಯೋಜನೆ ಈ ನಾಯಕರಿಗಿದೆ. ಬಂಗಾರಪ್ಪ ಈಗಾಗಲೇ ದಳದಲ್ಲಿದ್ದಾರೆ. ಮಹೇಂದ್ರನ ಜೆಡಿಎಸ್ ಸೇರ್ಪಡೆ ಈ ಪ್ರಕ್ರಿಯೆಯ ಮುಂದುವರೆದ ಭಾಗವಷ್ಟೇ. ಆದರೆ ಕೊಪ್ಪದ ಅನಿಲ್ ಕುಲಾಸೋ ತರದ ಪ್ರಾಮಾಣಿಕ ಸಾಮಾಜಿಕ ಕಾರ್ಯಕರ್ತರು ಮಹೇಂದ್ರನನ್ನು ಯಾವ ಕಾರಣಕ್ಕೂ ನಂಬುವುದಿಲ್ಲ. ಆಯೋಗಕ್ಕೆ ಮಹೇಂದ್ರನ ಪುಂಡಾಟಿಕೆ ಬಗ್ಗೆ ಮಹತ್ತರ ದಾಖಲೆ ಒದಗಿಸಿದವರಲ್ಲಿ ಕುಲಾಸೋ ಪ್ರಮುಖರಾಗಿದ್ದಾರೆ.



ಆಯೋಗದ ಎದುರು ಕುಲಾಸೋ.....



ಕುಮಾರಸ್ವಾಮಿ ಇದನ್ನೆಲ್ಲ ಕೇವಲ ಓಟಿನ ಲೆಕ್ಕಾಚಾರದಲ್ಲಿ ನೋಡಿದರೆ ಅದು ಕೆಟ್ಟದಾಗಿರುತ್ತದೆ. ಕನಿಷ್ಠಪಕ್ಷ ಮಹೇಂದ್ರಕುಮಾರ್ ಹಿಂದೂವಾದದ ವಿರುದ್ಧ ಕೆಲ ತಿಂಗಳಾದರೂ conristant ಆಗಿ ಕೆಲಸ ಮಾಡಿ ತೋರಿಸಿದರೆ ಮಾತ್ರ ಜನರಿಗೂ ಆತನನ್ನು ನಂಬಲು ಒಂದು ಕಾರಣವಿರುತ್ತದೆ. ಜೊತೆಗೆ ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಮಹೇಂದ್ರ ಕಾರಣದಿಂದಲೇ ಭಜರಂಗ ದಳ ಸೇರಿರುವ ನೂರಾರು ಶೂದ್ರ ಯುವಕರಿದ್ದಾರೆ. ಅವರನ್ನೆಲ್ಲ ಮತ್ತೆ ನಾಗರಿಕ ಸಮಾಜದ ಮುಖ್ಯವಾಹಿನಿಗೆ ಕರೆತಂದು ಮನುಷ್ಯರನ್ನಾಗಿಸುವ ನೈತಿಕ ಜವಾಬ್ದಾರಿ ಮಹೇಂದ್ರ ಮೇಲೆ ಇದೆ.

ಒಬ್ಬ ಮನುಷ್ಯ ಬೆಂಕಿಯಂತಾಗಿ ವಿನಾಕಾರಣ ಎಲ್ಲವನ್ನೂ ಸುಡುತ್ತಾ ಹೋಗುವುದು ಬೇರೆ, ಆದರೆ ತನ್ನೊಳಗಿನ ಬೆಂಕಿಯನ್ನು ಎಲ್ಲರ ಒಳಿತಿಗಾಗಿ ಬೆಳಕಾಗಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಬೇಕಾಗುತ್ತದೆ. ಮಹೇಂದ್ರಕುಮಾರ್‌ಗೆ ಇದು ಅರ್ಥವಾಗಲಿ.







...ೀಮುವಾದಿಗಳೊಂದಿಗೆ ಶಾಮೀಲಾದ ಪೊಲೀಸರು

...ಸೋಮಶೇಖರ್ ಆಯೋಗವು ಸರ್ಕಾರ, ...ಾಗೂ ಜಿಲ್ಲಾಡಳಿತಗಳಿಗೆ ಪೊಲೀಸರಿಗೆ ... ನೀಡಿರುವುದು ಒಂದು ಕಡೆ ಇರಲಿ, ...ಯೋಗದ ವರದಿಯಲ್ಲೇ ಪೊಲೀಸರ ... ಬಗ್ಗೆ ಪರೋಕ್ಷವಾಗಿ ದಾಖಲಿಸಲಾಗಿದೆ. ... ನಡೆದ 57 ದಾಳಿಗಳ ಜಿಲ್ಲಾವಾರು ...ಗಿದೆ.

...ಂಗಳೂರು ನಗರ-ಗ್ರಾಮಾಂತರ 3
...ಳಗಾಂ 1
...ಳ್ಳಾರಿ 1
4. ಚಿಕ್ಕಬಳ್ಳಾಪುರ 1
5. ಚಿಕ್ಕಮಗಳೂರು 4
6. ದಕ್ಷಿಣ ಕನ್ನಡ 33
7. ದಾವಣಗೆರೆ 10
8. ಕೋಲಾರ 1
9. ಉಡುಪಿ 5

ಈ ದಾಳಿಗಳಿಗೆ ಸಂಬಂಧಿಸಿದಂತೆ ಸ್ಥಳ-ಚರ್ಚ್ ಹೆಸರು, ದಾಳಿಯ ಸ್ವರೂಪ, ದಾಳಿಗೆ ಕಾರಣರಾದ ವ್ಯಕ್ತಿಗಳು ಆದ ನಷ್ಟ, ನೀಡಲಾದ ಪರಿಹಾರಗಳೆಂಬ ಆಧಾರದಲ್ಲಿ ಆಯೋಗ ವಿಶ್ಲೇಷಣೆ ನಡೆಸಿದೆ.

Annexure XLVII ಸಂಖ್ಯೆಯ ಈ ಮಾಹಿತಿ ಅಧ್ಯಯನ ಯೋಗ್ಯವಾಗಿದೆ.


ಒಟ್ಟು 14 ದಾಳಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿಗಳು ಯಾರೆಂಬುದು ಗೊತ್ತಾಗಲಿಲ್ಲವೆಂದು ಆಯೋಗ ಹೇಳಿದೆ. ಆದರೆ ಅದೇ ವೇಳೆಯಲ್ಲಿ ದಾಳಿ ಆಗಿರುವುದು ನಿಜ ಎಂತಲೂ ಒಪ್ಪಿಕೊಂಡಿದೆ.

ಹಾಗಾದರೆ ದಾಳಿಕೋರರನ್ನು ಪತ್ತೆಹಚ್ಚಿ ಬಂಧಿಸದೇ ಹೋದ ಪೊಲೀಸರ ವೈಫಲ್ಯದ ಬಗ್ಗೆ ಆಯೋಗ ಕಾಮೆಂಟ್ ಮಾಡಬಹುದಿತ್ತಲ್ಲವೆ?

ಬೆಂಗಳೂರಿನ ರಾಜರಾಜೇಶ್ವರಿನಗರದ ಹೋಲಿ ನೇಮ್ ಆಫ್ ಜೀಸಸ್ ಚರ್ಚ್, ಶಹಪೂರ್‌ನ ಮೌಂಟ್ ಕಾರ್ಮೆಲ್ ಚರ್ಚ್, ಚಿಕ್ಕಬಳ್ಳಾಪುರದ ಥಾಮಸ್ ಪೀಸ್ ಚರ್ಚ್, ಮೂಡಿಗೆರೆಯ ಜಗದೀಶ್ವರಿ ಚರ್ಚ್, ಕುದುರೆಮುಖದ ಕಾರ್ಮೆಲ್ ಮಾತೆ ಚರ್ಚ್, ಕೆನರಾ ಆರ್ಗನೈಜೇಷನ್ ಫಾರ್ ಡೆವಲಪ್‌ಮೆಂಟ್ ಚರ್ಚ್, ಮಂಗಳೂರಿನ ಪದುವಾ ಪಿಯೂ ಕಾಲೇಜ್ ಮೇಲೆ ನಡೆದ ದಾಳಿಗಳಿಗೆ ಯಾರು ಕಾರಣ ಎಂಬುದು ಪತ್ತೆಯಾಗಿಲ್ಲ ಎಂಬುದಾಗಿ ಆಯೋಗ ಹೇಳುತ್ತದೆ.

ಆದರೆ ಅಪರಾಧಿಗಳನ್ನು ಇದುವರೆಗೂ ಬಂಧಿಸದ ಪೊಲೀಸರು ಕತ್ತೆ ಕಾಯುತ್ತಿದ್ದಾರಾ ಎಂದು ಯಾರು ಕೇಳಿಲ್ಲ ಯಾಕೆ?

ಆಳುವ ಬಿಜೆಪಿ ಸರ್ಕಾರಕ್ಕೆ ಆಯೋಗದ ವರದಿಯಿಂದ ಖುಷಿಯಾಗಿರಬಹುದು. ಆದರೆ ನಾಡಿನ ಸೆಕ್ಯುಲರ್‌ವಾದಿಗಳು, ಕ್ರಿಶ್ಚಿಯನ್ನರು ಹಾಗೂ ನ್ಯಾಯಪರರು ಇದನ್ನು ಒಪ್ಪುವ ಅಗತ್ಯವಿಲ್ಲ. ಸಿಬಿಐ ತನಿಖೆಗೆ ಒತ್ತಾಯಿಸುವ ಹಾಗೂ ರಾಜ್ಯ ಪೊಲೀಸರ ವಿರುದ್ಧ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿ ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸುವುದೊಂದೇ ಈಗ ಉಳಿದಿರುವ ಆಯ್ಕೆಯಾಗಿದೆ.



... ನಡೆದ ಹಾಗೂ ಅಧಿಕೃತವಾಗಿ ...ಒಟ್ಟು 57 ಚರ್ಚ್ ದಾಳಿಗಳಲ್ಲಿ ...ಜೆಪಿ ಮತ್ತಿತರ ಸಮಾಜ ದ್ರೋಹಿಗಳ ...ನೂ ಇರಲಿಲ್ಲ ಎಂಬುದೇ ಒಂದು ... ಸತ್ಯ ಶೋಧನೆಯಾಗಿದೆ.

... ಹಳೆಯ ಮಾತೇ ಹೇಳಬೇಕೆಂದರೆ ...ರದಲ್ಲಿ ನ್ಯಾಯ ನಿಧಾನವೆಂಬುದಿಲ್ಲ, ...ಯವೂ ಇಲ್ಲ ಎಂಬುದೀಗ ಮತ್ತೆ

...ಹಾಕಿಕೊಂಡ ಪ್ರಶ್ನೆಗಳು ...ಡುಕೊಂಡ ಉತ್ತರಗಳು

... ದಾಳಿಗಳಿಗೆ ...ಂತೆ ವಿಚಾರಣೆ ...ಗಲೇ ಆಯೋಗದ ...ರ್ವಾಗ್ರಹ ...ನ್ನಬಹುದು. ... ಸರಿಯಾದ ...ದ್ದಲ್ಲಿ ...ನ್ನು ...ದಾದ ... ಇದ್ದವು. ...ದ ...ಯಲ್ಲಿ ... ದಾಳಿಗಳಿಗೆ ...ನೀಡಿದ ಅಂಶಗಳು ಯಾವುವು? ...ಗೆ ಕಾರಣರಾದ ವ್ಯಕ್ತಿಗಳು ಹಾಗೂ ... ಯಾವುವು? ... ನಡೆದಾಗ ಹಾಗೂ ನಂತರದ ಪರಿಸ್ಥಿತಿ ...ಲ್ಲಿ ಆಯಾ ಜಿಲ್ಲಾಡಳಿತಗಳಿಂದ ನಿರ್ಲಕ್ಷ್ಯ

...ಂತಹ ಬಹುಮುಖ್ಯವಾದ ...ಆಯೋಗ ಉತ್ತರ ಕಂಡುಕೊಳ್ಳಬೇಕಿತ್ತು, ...ಗ ಆಗಿರುವುದೇನು? ...ಮಶೇಖರ್ ಆಯೋಗವು ಕಳೆದ ವರ್ಷ ನೀಡಿದ್ದ ತನ್ನ ಮಧ್ಯಂತರ ವರದಿಯಲ್ಲಿನ ಅಂಶಗಳನ್ನೇ ಅಂದರೆ ಸಂಘ ಪರಿವಾರ ಹಾಗೂ ಬಿಜೆಪಿ ಸರ್ಕಾರವನ್ನು ರಕ್ಷಿಸುವ ಕೆಲಸವನ್ನೇ-ತನ್ನ ಅಂತಿಮ ವರದಿಯಲ್ಲೂ ಮಾಡಿದೆ. ಮೇಲೆ ಹಾಕಿಕೊಂಡಿದ್ದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ವಿಫಲವಾಗಿದೆ. ಲಕ್ಷಾಂತರ ಜನರ ಮನಸ್ಸಿನಲ್ಲಿದ್ದ ಪ್ರಶ್ನೆಗಳಿಗೆ ಅಂದರೆ ಈ ದಾಳಿಗಳು ಯಾಕೆ ನಡೆದವು? ಅವುಗಳ ಹಿಂದಿದ್ದವರು ಯಾರು? ದಾಳಿಗಳಲ್ಲಿ ಸರ್ಕಾರದ ಪಾತ್ರ ಏನಿತ್ತು? ಎಂಬ ಪ್ರಶ್ನೆಗಳು ಕೊನೆಗೂ ಪ್ರಶ್ನೆಗಳಾಗಿಯೇ ಉಳಿದುಹೋಗಿವೆ.



ಆಯೋಗದ ವರಧಿಯಲ್ಲಿ "ಬಿಜೆಪಿ, ಸಂಘ ಪರಿವಾರ ಹಾಗೂ ರಾಜ್ಯ ಸರ್ಕಾರದ ಪಾತ್ರ ಈ ದಾಳಿಯಲ್ಲಿದೆ ಎಂಬುದಕ್ಕೆ ಸೂಕ್ತ ಪುರಾವೆಗಳಿಲ್ಲ" ಎನ್ನಲಾಗಿದೆ. ಹೆಚ್ಚೆಂದರೆ ಮಹೇಂದ್ರ ಕುಮಾರ್ ಹಾಗೂ ಭಜರಂಗ ದಳ ಕುರಿತಂತೆ ನಿಷ್ಠುರವಾದ ಅಭಿಪ್ರಾಯ ಹೇಳಲಾಗಿದೆ. ಇದೊಂದು ವಿರೋಧಾಭಾಸದ ಅನಿಸಿಕೆಯಾಗಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಮಂಗಳೂರು ಡಯಸಿಸ್‌ನ ಫಾದರ್ ಆಸಿಸಿ ಆಲ್ಮೇಡಾ "ಒಂದೆಡೆ ದಾಳಿಗಳಲ್ಲಿ 'ಸಂಘ ಪರಿವಾರ ಇಲ್ಲ'' ಎಂದು ಹೇಳಿರುವ ಆಯೋಗ ಮತ್ತೊಂದೆಡೆ 'ದಾಳಿಗಳಲ್ಲಿ ಭಜರಂಗ ದಳ ಇತ್ತು' ಎಂದಿದೆ.

ಏನಿದರ ಅರ್ಥ?

ಇವೆರಡು ಬೇರೆ ಬೇರೆ ಅಂತಲೆ! ಎಂದು ಪ್ರಶ್ನಿಸಿದ್ದಾರೆ.

ಈ ಭಜರಂಗ ದಳವು RSS ಸಂಘ ಪರಿವಾರದ ಕೇಡಿ ಗುಂಪುಗಳಲ್ಲಿ ಒಂದೆಂಬುದು ಇಡೀ ಜಗತ್ತಿಗೇ ತಿಳಿದಿದೆ. ಇದೇ RSSಗಳು ಮಹೇಂದ್ರ ಕುಮಾರ್ ನನ್ನು ಭಜರಂಗ ದಳದಿಂದ ಕಿತ್ತು ಹಾಕಿ ಸೂರ್ಯನಾರಾಯಣ ಎನ್ನುವ ಚಿಲ್ಲಿಯನ್ನು ತಂದು ಪ್ರತಿಷ್ಠಾಪಿಸಿದ್ದಾರೆ. ಈ ನೀಚನು ಅದೇ ಕೋಮುದ್ವೇಷದ ಮಾತು ಮುಂದುವರೆಸುತ್ತಿದ್ದಾನೆ.

ಬಾಬರಿ ಮಸೀದಿ ನಾಶದ ಕುರಿತು ತನಿಖೆ ನಡೆಸಿದ ಲಿಬರ್ಹಾನ್ ಆಯೋಗವೂ RSS, ವಿಶ್ವ ಹಿಂದೂ ಪರಿಷತ್, ಭಜರಂಗ ದಳಗಳ ನಡುವಿನ ಒಳಸಂಬಂಧಗಳ ಬಗ್ಗೆ ದಾಖಲೆ ಸಮೇತ ಸಾಬೀತುಮಾಡಿದೆ.

ಸೋಮಶೇಖರ್ ಆಯೋಗದ ಕಣ್ಣಿಗೆ ಇದು ಬೀಳಲಿಲ್ಲವಾ?

ಸರ್ಕಾರ, ಜಿಲ್ಲಾಡಳಿತ ಹಾಗೂ ಪೊಲೀಸರೂ ದಾಳಿಕೋರರ ಜೊತೆ ಶಾಮೀಲಾಗಿದ್ದರೆಂಬ ವಿಚಾರದ ಬಗ್ಗೆ ಆಯೋಗವು "ಅದು ನಿಜವಲ್ಲ" ಎನ್ನುವಂತೆ ಅಭಿಪ್ರಾಯ ಪಟ್ಟಿದೆ!

ಇದೆಂಥ ಕುಚೋದ್ಯ!!

ಇದಿಷ್ಟೇ ಅಲ್ಲದೆ ಚರ್ಚ್ ಮೇಲಿನ ದಾಳಿಗಳನ್ನು ಕ್ರಿಶ್ಚಿಯನ್ನರು ಪ್ರತಿಭಟಿಸಿದಾಗ ಪೊಲೀಸರು ಕ್ರಿಶ್ಚಿಯನ್ನರ ಮೇಲೆಯೇ ಹಲ್ಲೆ ನಡೆಸಿದ್ದರು. ಆದರೆ ಆಯೋಗ ಇದನ್ನು ನಿರ್ಲಕ್ಷಿಸಿದೆ. 'ದಕ್ಷಿಣ ಕನ್ನಡ ಜಿಲ್ಲೆಯ ಪರ್ಮನೂರಿನ ಸೇಂಟ್ ಸೆಬಾಸ್ಟಿಯನ್ ಚರ್ಚ್‌ನಲ್ಲಿ ಪೊಲೀಸರು ಅತಿರೇಕದಿಂದ ವರ್ತಿಸಿರುವುದು ನಿಜ. ಆದರೆ ಬೇರೆಡೆಯೂ ಹಾಗೇ ಆಗಿದೆ ಎನ್ನಲು ಆಧಾರಗಳಿಲ್ಲ' ಎಂದು ತಿಪ್ಪೇ ಸಾರಿಸಿದೆ.

ಕರ್ನಾಟಕ ಪೊಲೀಸರು ಮುಸ್ಲಿಂ-ದಲಿತ-ಕ್ರಿಶ್ಚಿಯನ್ನರ ವಿರುದ್ಧ ಹಿಂದೂ ಕೋಮುವಾದಿಗಳಂತೆಯೇ ದ್ವೇಷ ಹಾಗೂ ಪೂರ್ವಾಗ್ರಹ ಹೊಂದಿರುವ ವಿಚಾರವನ್ನು ಆಯೋಗ ಪರಿಗಣಿಸದೇ ಹೋದದ್ದು ನಿಜಕ್ಕೂ ದುರದೃಷ್ಟಕರ. ಆಯೋಗದ ವರದಿಯ ವೈರುಧ್ಯ ಏನೆಂದರೆ 'ದಕ್ಷಿಣ ಕನ್ನಡ ಜಿಲ್ಲೆಯ ಕೆಲ ಚರ್ಚ್‌ಗಳ ಒಳಗೆ ಪೊಲೀಸರು ನುಗ್ಗಿ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿರುವುದು ನಿಜ' ಎಂತಲೂ ಹೇಳಿರುವುದು. ಕೆಲವೆಡೆ ಪೊಲೀಸರು ಅಮಾಯಕ ಕ್ರಿಶ್ಚಿಯನ್ನರ ಮೇಲೆಯೇ ಲಾಠಿ ಚಾರ್ಜ್ ನಡೆಸಿ ಮಹಿಳೆಯರು, ಮಕ್ಕಳನ್ನು ಗಾಯಗೊಳಿಸಿದ್ದನ್ನು ಆಯೋಗ ಗಮನಿಸಿದೆ. ಆದರೆ ಮತಾಂತರ ಇತ್ಯಾದಿ ಸುಳ್ಳು ಆರೋಪದಡಿ ಪೊಲೀಸರು ನೂರಾರು ಕ್ರಿಶ್ಚಿಯನ್ನರನ್ನು ಬಂಧಿಸಿ ಕೇಸ್ ಹಾಕಿ ಹಿಂಸಿಸಿರುವ ಬಗ್ಗೆ ಆಯೋಗವು ಗಮನವನ್ನೇ ಹರಿಸಿಲ್ಲ.

ಆದರೇನು, ಇದೆಲ್ಲಾ ಜಿಲ್ಲಾಡಳಿತ ಹಾಗೂ ಪೊಲೀಸರ ವೈಫಲ್ಯ ಎಂತಾಗಲಿ ಅಥವಾ ಕೋಮುವಾದಿ ನಡವಳಿಕೆಯಾಗಿತ್ತು ಎಂದಾಗಲಿ ಅಭಿಪ್ರಾಯಕ್ಕೆ ಬರುವುದಿಲ್ಲ. ಆಗಿನ ದಕ್ಷಿಣ ಕನ್ನಡದ ಎಸಿಪಿಯಾಗಿದ್ದ ಸತೀಶ್ ಕುಮಾರ್ ಸ್ವತಃ ಆಯೋಗದ ಎದುರು ಹಾಜರಾಗಿ



ಭಜರಂಗದಳದವರ ದುಷ್ಕೃತ್ಯಗಳ ಬಗ್ಗೆ ಹೇಳಿಕೆ ನೀಡಿದಾಗಲೂ ಆಯೋಗ ಅದನ್ನು ಗಮನಿಸದೇ ಹೋದದ್ದು ಆಶ್ಚರ್ಯಕರವಾಗಿದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಕರ್ನಾಟಕದಲ್ಲಿ ದಮನಿತರಿಗೆ, ಅಸಹಾಯಕರಿಗೆ 'ನ್ಯಾಯ' ಎಂಬುದು ಮರೀಚಿಕೆಯಾಗಿದೆ.

ರುಸಾರಿಯೊ- ಕರ್ನಾಟಕ ಸರ್ಕಾರದ ಪಾತ್ರದ ಬಗ್ಗೆ ನಿಷ್ಪಕ್ಷಪಾತವಾಗಿ ಹೇಳಬೇಕಿತ್ತು. ಆಯೋಗದ ವರದಿಯಲ್ಲಿ ಜಿಲ್ಲಾಡಳಿತ ಹಾಗೂ ಪೊಲೀಸರ ವೈಫಲ್ಯಗಳ ಬಗ್ಗೆ ಪದೇಪದೇ ಪ್ರಸ್ತಾಪಿಸಲಾಗಿದೆ. ಹಾಗಾದರೆ ಇದೂ ಸಹ ಸರ್ಕಾರದ ವೈಫಲ್ಯ ಆಗುವುದಿಲ್ಲವೆ.

ಆಯೋಗ ಇದನ್ನೇಕೆ ಪರಿಗಣಿಸಲಿಲ್ಲ?

ಸರ್ಕಾರವು ಮಾಡಬೇಕಾದ ಕರ್ತವ್ಯ ನಿಭಾಯಿಸಲಿಲ್ಲ ಎಂಬುದು ಇಲ್ಲಿ ಸ್ಪಷ್ಟವಾಗಿದೆ. ಚರ್ಚ್ ದಾಳಿಗಳನ್ನು ಮಹೇಂದ್ರ ಕುಮಾರ್ ಸಮರ್ಥಿಸಿಕೊಳ್ಳುತ್ತಿದ್ದಾಗ ಐದು ದಿನಗಳ ಕಾಲ ಬಂಧಿಸದೆ ಕಾನೂನು ಕ್ರಮವನ್ನು ತೆಗೆದುಕೊಳ್ಳದೆ ಹಾಗೆಯೇ ಬಿಡಲಾಗಿತ್ತು.

ಇದರರ್ಥ ಏನಾಗಿತ್ತು? ಮಹೇಂದ್ರಗೆ ಸರ್ಕಾರ ಹಾಗೂ ಪೊಲೀಸರ ಬೆಂಬಲ ಇತ್ತೆಂಬುದಲ್ಲವೆ!


ಮಂಡ್ಯ ಕಲ್ಲುಗಳ್ಳ ಎಮ್ಮೆಲ್ಲೆಗಳ ಗೂಂಡಾಗಿರಿ!

ಪಾಂಡವಪುರ ಮತ್ತು ಶ್ರೀರಂಗಪಟ್ಟಣದ ತಾಲ್ಲೂಕುಗಳಲ್ಲಿ ಕಲ್ಲುಗಳ್ಳರು ಅಕ್ಷಮ ಲೂಟಿಗಿಳಿದಿದ್ದಾರೆ. ಇದಕ್ಕಾಗಿ ಈ ಎರಡು ತಾಲ್ಲೂಕುಗಳಲ್ಲಿನ ಅರಣ್ಯ ಭೂಮಿಗಳ ದಾಖಲೆಗಳನ್ನೇ ತಿದ್ದಿದ್ದು ಇಲ್ಲಿ ಇದ್ದಬದ್ದ ಕಾಡುಗಳು ಕೂಡ ಖಾಲಿಯಾಗುತ್ತಿವೆ. ಇವರ ಲೂಟಿಯ ದಾಹಕ್ಕೆ ಕೆಆರ್‌ಎಸ್‌ನಂತಹ ಬಹಳ ಪ್ರಾಮುಖ್ಯತೆಯುಳ್ಳ ಡ್ಯಾಂ ಬುಡಕ್ಕೂ ಬಾಂಬು ಇಡುತ್ತಿದ್ದಾರೆ! ಜನರ ಸಂಪತ್ತು ಜನಪ್ರತಿನಿಧಿಗಳೆನಿಸಿಕೊಳ್ಳುವವರಿಂದಲೇ ನಿಃಶಾಲಿಯಾಗಿ ಕಲ್ಲುಗಳ್ಳ ಶಾಸಕರ ತಿಜೋರಿಯಂತೂ ಭರ್ತಿಯಾಗಿ ತುಂಬುತ್ತಿದೆ. ಇವರನ್ನು ವಿರೋಧಿಸುವವರ ಮೇಲೆ ಗೂಂಡಾಗಿರಿಗೂ ಇಳಿದಿದ್ದಾರೆ. ಇಂತಹ ಮಹಾನ್ ಕಾರ್ಯ ಮಾಡುತ್ತಿರುವವರು ಮೇಲುಕೋಟೆ ಶಾಸಕ ಪುಟ್ಟರಾಜು ಮತ್ತು ಶ್ರೀರಂಗಪಟ್ಟಣದ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ ಎಂಬ ಜೋಡಿಕಳ್ಳರು!

ಇಡೀ ಮಂಡ್ಯ ಜಿಲ್ಲೆಯಲ್ಲಿಯೇ ಅತ್ಯಂತ ಹೆಚ್ಚು ಕಲ್ಲು ಗಣಿಗಳಿರುವ ತಾಲ್ಲೂಕುಗಳೆಂದರೆ ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳು. ಇವು ಹಸಿರಿನಿಂದ ಕಂಗೊಳಿಸಲು ಕಾರಣ ಕಾವೇರಿ ನದಿ. ಕಬ್ಬು, ಬತ್ತ, ರಾಗಿ, ತರಕಾರಿ ಬೆಳೆಗಳನ್ನು ಬೆಳೆಯುವ ಈ ತಾಲೂಕುಗಳಲ್ಲಿ ಕಲ್ಲು ಸಂಪತ್ತನ್ನು ಹೊಂದಿರುವ ಬೆಟ್ಟಗುಡ್ಡಗಳಿಗೂ ಕೊರತೆಯಿಲ್ಲ. ಇಂತಹ ಬೆಟ್ಟದ ಪ್ರದೇಶಗಳಲ್ಲಿ ರೈತರು ಜೋಳ, ರಾಗಿ ಹೀಗೆ ಹಲವು ಕಿರು ಬೆಳೆಗಳನ್ನ ಬೆಳೆದುಕೊಳ್ಳುತ್ತಾರೆ. ಇಂತಹ ರೈತರ ಪಾಲಿಗೆ ಈ ಇಬ್ಬರು ಶಾಸಕರು ಕಂಟಕರಾಗಿದ್ದಾರೆ. ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಕಲ್ಲುಕ್ವಾರೆ ಜಮೀನುಗಳನ್ನು ಹೊಂದಿರುವ ರೈತರಿಗೆ ಒಂದೋ ಜಮೀನು ಬಿಟ್ಟುಕೊಡುವುದು ಅಥವಾ ಬೆದರಿಕೆಗೆ ಒಳಗಾಗುವುದು ಎರಡೇ ದಾರಿ ಉಳಿದುಕೊಂಡಿದೆ.



ಚೋದ್ಯ ಅಂದರೆ, ಅತ್ತ ಮಾಜಿ ಸಿಎಂ ಕುಮಾರಸ್ವಾಮಿ ಕಳ್ಳಗಣಿ ಕೊರೆಯುತ್ತಿರುವ ರೆಡ್ಡಿಗಳಿಗೆ ಝಾಡಿಸುತ್ತಿದ್ದರೆ, ಇತ್ತ ಅದೇ ತರಹದ ಕೆಲಸ ಮಾಡುತ್ತಿರುವ ತನ್ನ ಹಿಂಬಾಲಕ ಶಾಸಕರಿಗೆ ಮಾತ್ರ ಬೆಂಬಲ ನೀಡುತ್ತಿದ್ದಾರೆ. ಇನ್ನು ಪುಟ್ಟರಾಜು ಮತ್ತು ರಮೇಶ್ ಬಾಬು ಮಾಡುತ್ತಿರುವ ಅಕ್ರಮಗಳು ಅಷ್ಟಿಷ್ಟಲ್ಲ. ತಮ್ಮ ಕ್ಷೇತ್ರಗಳನ್ನ ತಮ್ಮದೇ ಪಾಳೇಪಟ್ಟನಂತೆ ಮಾಡಿಕೊಂಡು ತಮ್ಮ ಮಾತು ಕೇಳುವ ಎಸಿ, ತಹಶೀಲ್ದಾರರುಗಳನ್ನೇ ಹಾಕಿಸಿಕೊಂಡು ಇವರು ಮಾಡಿರುವ ಭಾನಗಡಿಗಳು ಮಿತಿಮೀರಿವೆ.



ಪಾಂಡವಪುರ ಮತ್ತು ಶ್ರೀರಂಗಪಟ್ಟಣದಲ್ಲಿನ ಅರಣ್ಯ ಇಲಾಖೆಗೆ ಸೇರಿದ ಪ್ರದೇಶ ಹಾಗೂ ಇತರ ಜಮೀನನ್ನು ಗೋಮಾಳ ಎಂದು ಸರ್ವೇನಂಬರ್‌ಗಳನ್ನೇ ಅದಲುಬದಲು ಮಾಡಿಸಿ, ಆರ್‌ಟಿಸಿಯನ್ನ ತಿದ್ದಿಸಿಕೊಂಡು ಗಣಿಗಾರಿಕೆ ನಡೆಸುತ್ತಿದ್ದಾರೆ. ಈ ಬಗ್ಗೆ ವಿಶೇಷ ಜಿಲ್ಲಾಧಿಕಾರಿ ಬಿ.ಜೆ.ಗದಗ್‌ರವರು 1982ರಲ್ಲೇ ಮಾಡಿದ್ದ ಗಣಿಗೆ ಸಂಬಂಧಿಸಿದ ಆದೇಶಕ್ಕೆ ಬೆಲೆಯೇ ಇಲ್ಲದಂತಾಗಿದೆ. ಇಂತಹ ಮಹಾನ್ ಕಾರ್ಯಗಳು ನಡೆಯುತ್ತಿದ್ದರೂ ಸಹ ಅರಣ್ಯ ಇಲಾಖೆ, ಕಂದಾಯ ಇಲಾಖೆಯ ಅಧಿಕಾರಿಗಳೂ ಶಾಮೀಲಾಗಿ ಮೌನವಾಗಿದ್ದಾರೆ.




ಶ್ರೀರಂಗಪಟ್ಟಣ ತಾಲ್ಲೂಕಿನ ಹಂಗರಹಳ್ಳಿ ಕಲ್ಲುಕ್ವಾರೆ ಹತ್ತು ವರ್ಷಗಳ ಹಿಂದೆಯೇ ಕುಖ್ಯಾತಿ ಪಡೆದಿತ್ತು. ಈ ಕ್ವಾರೆ ಮೈಸೂರು ಪಾಲಿಕೆ ಧೂರ್ತ ಕಾರ್ಪೊರೇಟರ್ ಪುಟ್ಟಸ್ವಾಮಿಗೌಡನ ಮಾಲೀಕತ್ವದ್ದಾಗಿತ್ತು, ಅದು ಇವತ್ತಿನಂತಹ ಗಣಿಗಾರಿಕೆಯಲ್ಲದಿದ್ದರೂ ಆಗ ಬೆಳಕಿಗೆ ಬಂದ ವಿದ್ಯಮಾನವು ಇಲ್ಲಿನ ಕ್ವಾರೆ ಜಗತ್ತಿನ ಅತೀಕ್ರೂರ ಜೀತಗಾರಿಕೆಗೆ ಕುಖ್ಯಾತಿ ಪಡೆದುಕೊಂಡಿತ್ತು. ಇಲ್ಲಿ 80 ಜನ ದಲಿತರನ್ನ ಜೀತ ಮಾಡಿಸಲಾಗುತ್ತಿತ್ತು. ಇದರಲ್ಲಿ 5 ಜನರಿಗೆ 15 ಕೆ.ಜಿ.ಭಾರದ ಸರಪಳಿ ಬಿಗಿದು, ಕೆಲಸಬಿಟ್ಟು ಹೊರ ಹೋಗದಂತೆ ಅತ್ಯಂತ ಕ್ರೂರವಾಗಿ ಜೀತ ನಡೆಸಲಾಗುತ್ತಿತ್ತು. ಇದನ್ನು 2000ನೇ ಇಸವಿಯಲ್ಲಿ ಕೆ.ಎಸ್.ನಂಜುಂಡೇಗೌಡರ ನೇತೃತ್ವದಲ್ಲಿ ರೈತ ಸಂಘದ ಕಾರ್ಯಕರ್ತರು ಹೊರ ಜಗತ್ತಿಗೆ ಪರಿಚಯಿಸಿದ್ದರು.

ಇಂತಹ ಕುಖ್ಯಾತಿಯ ಹಂಗರಹಳ್ಳಿ ಮತ್ತು ಚನ್ನನಕೆರೆ ಸುತ್ತಮುತ್ತ ಅಧಿಕೃತವಾಗಿ ಆದರೆ ಯಾರ್‍ಯಾರದ್ದೋ ಬೇನಾಮಿ ಹೆಸರಿನಲ್ಲಿ ನೀಡಿರುವ ಪರವಾನಗಿಗಳು ಕನಿಷ್ಠ ನೂರು. ಇವುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚಿನವನ್ನು ಅವಧಿ ಮುಗಿದಿದ್ದರೂ ಮುಂದುವರೆಸಲಾಗಿದೆ. ಅಷ್ಟೇ ಅಲ್ಲದೆ, ಅನಧಿಕೃತವಾಗಿ ನಡೆಯುತ್ತಿರುವ ಗಣಿಗಾರಿಕೆಗಳು ನೂರಕ್ಕೂ ಹೆಚ್ಚು. ಬಾಬುನ ಪಕ್ಕಾ ಚೇಲಾ ಮುಂಡುಗದೊರೆ ಮರಿಯಪ್ಪನೆ ಕಲ್ಲು ಕಳ್ಳತನಕ್ಕೆ ಉಸ್ತುವಾರಿ. ಅರಕೆರೆ ಶಿವಯ್ಯ ಹಂಗರಹಳ್ಳಿಯ ಗೋವಿಂದಾ, ಹನುಮಂತುಗಳದ್ದೇ ವಸೂಲಿ ಉಸ್ತುವಾರಿ. ಇನ್ನು ಮುಂಡುಗದೊರೆ, ದೊಡ್ಡಪಾಳ್ಯ, ನೀಲನಕೊಪ್ಪಲು, ಟಿ.ಎಂ.ಹೊಸೂರು, ಚಿಕ್ಕಪಾಳ್ಯ, ಶಾಂತಿಕೊಪ್ಪಲು, ಬೀಚನಕೊಪ್ಪಲು ಗ್ರಾಮಗಳ ಆಸುಪಾಸಿನಲ್ಲಿ ಇದ್ದ ಅರಣ್ಯ ಇಲಾಖೆಗೆ ಸೇರಿದ ಬೆಟ್ಟಗುಡ್ಡಗಳು ದಿನನಿತ್ಯ ಕರಗುತ್ತಿವೆ. ಶಾಸಕ ಬಾಬುವಿನ ಹೆಸರಿನಲ್ಲಿ ಒಂದೇ ಒಂದು ಗಣಿಯೂ ಇಲ್ಲದಿದ್ದರೂ, ಆತನ ಹತ್ತಿರದ ಸಂಬಂಧಿ ಹೆಸರಿನಲ್ಲಿ ನಡೆಯುತ್ತಿರುವ ಪಿನಾಕಿನಿ ಕ್ರಷರ್ ರಾಕ್ಷಸ ಕಂಪೆನಿಯಾಗಿದೆ. ತಾಲ್ಲೂಕಿನಲ್ಲಿ ನಡೆಯುತ್ತಿರುವ ಗಣಿಗಳ ಮಾಲೀಕರ ಹೆಸರುಗಳು ಏನೇ ಇದ್ದರೂ ಇವುಗಳಲ್ಲಿ ಬಹುತೇಕವಕ್ಕೆ ನಿಜವಾದ ಮಾಲೀಕ ರಮೇಶ್ ಬಾಬುನೇ ಆಗಿದ್ದಾನೆ ಎಂಬ ಮಾತು ಕ್ವಾರೆ ಮಾಲೀಕರ ವಲಯದಲ್ಲಿ ಕೇಳಿಬರುತ್ತಿದೆ.

ಬಾಬುವಿನ ಕಲ್ಲು ದಾಹಕ್ಕೆ ಹಂಗರಹಳ್ಳಿಯ ಸರ್ವೆ ನಂ.185ನ ಅರಣ್ಯ ಇಲಾಖೆಯ 602.11 ಎಕರೆ ಅರಣ್ಯ ಪ್ರದೇಶದ ಬೆಟ್ಟ ಗುಡ್ಡಗಳು, ಮರ ಮಟ್ಟುಗಳು ಮತ್ತು ಮುಂಡುಗದೊರೆಯ ಸರ್ವೆ ನಂ.351ರಲ್ಲಿನ 538 ಎಕರೆ ಇಡೀ ಭೂಪ್ರದೇಶ ಕರಗುತ್ತಿವೆ. ಇವೆಲ್ಲವೂ ಶಾಸಕನ ಖಾಸಗಿ ಆಸ್ತಿಯಂತಾಗಿ ಗಣಿಗಾರಿಕೆ ಎಗ್ಗಿಲ್ಲದೆ ಸಾಗಿದೆ. ಇದರಲ್ಲೇ ಮಂಡ್ಯ ಮೂಲದ ಕಡುಭ್ರಷ್ಟ ಪತ್ರಕರ್ತನೊಬ್ಬನಿಗೆ 2 ಎಕರೆ ಕ್ವಾರೆಯನ್ನೂ ಸಹ ದಯಪಾಲಿಸಲಾಗಿದೆ.

ಈ ಭಾಗದಲ್ಲಿ ನಡೆಯುತ್ತಿರುವ ಗಣಿಗಳಿಗೆ ಸ್ಫೋಟಕಗಳ ಮಾರಾಟದ ಪರವಾನಗಿಯನ್ನ ಶಾಸಕ ತನ್ನ ಸಂಬಂಧಿ ಚಿಕ್ಕಪಾಳ್ಯದ ಗ್ರಾ.ಪಂ.ಸದಸ್ಯ ಮಹೇಂದ್ರನಿಗೆ ಕೊಡಿಸಿದ್ದಾನೆ. ಈತನ ಸ್ಫೋಟಕ ಮಾರಾಟಕ್ಕೆ ಯಾವುದೇ ನಿಯಂತ್ರಣವಿಲ್ಲ. ಸ್ಫೋಟಕ ಮಾರಾಟ ಮಾಡುತ್ತಲೇ ಕುಬೇರನಾಗಿದ್ದಾನೆ ಎಂಬುದು ಈತನನ್ನು ಬಲ್ಲವರ ಮಾತು. ಈ ಮಿತಿಮೀರಿದ ಸ್ಫೋಟಕಗಳು ಶ್ರೀರಂಗಪಟ್ಟಣ ಅಷ್ಟೇ ಅಲ್ಲದೆ ಪಾಂಡವಪುರದ ಕಲ್ಲು ಗಣಿಮಾಫಿಯಾಗಳಿಗೂ ಪೂರೈಕೆಯಾಗುತ್ತಿದೆ. ಈತನ ರಾತ್ರಿ ವ್ಯಾಪಾರ ಹೊರಜಿಲ್ಲೆಗಳಿಗೂ ವಿಸ್ತರಿಸಿದೆ. ಆದರೆ ಪೊಲೀಸ್ ಇಲಾಖೆಗಾಗಲೀ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಾಗಲೀ ನಮ್ಮಲ್ಲೊಂದು ಎಕ್ಸ್‌ಪ್ಲೋಸಿವ್ ಆಕ್ಟ್-1884 ಕಾಯ್ದೆ ಇದೆ ಎಂಬ ವಿಚಾರವೇ ಗೊ[...] ಎಂಬಂತಿದ್ದಾರೆ.



ಪುಟ್ಟರಾಜು

ಈ ಕಾಯ್ದೆಗೆ ತಂದಿರುವ ತಿದ್ದುಪಡಿಯ ಪ್ರ[...] ಕ್ವಾರೆ ಮಾಲೀಕರು ತಾವು ಸ್ಫೋಟಿಸಿದ ವಿವರ ಮ[...] ಉಳಿಕೆ ಸ್ಫೋಟಕಗಳ ಮಾಹಿತಿಯನ್ನ ಪ್ರತೀ[...] ಕಡ್ಡಾಯವಾಗಿ ನೀಡಬೇಕು. ಆದರೆ ಕಾಯ್ದೆ[...] ಶೇ.5 ನಿಯಮವನ್ನೂ ಯಾವೊಬ್ಬ ಕ್ವಾ[...] ಮಾಲೀಕನಾಗಲಿ, ಸ್ಫೋಟಕ ಮಾರಾ[...] ಗಾರನಾಗಲೀ ಪಾಲಿಸುತ್ತಿಲ್ಲ. ಬದಲ[...] ತಮ್ಮ ಹಡಬಿಟ್ಟಿ ದುಡ್ಡಿನಿಂದ ಕಾನೂ[...] ಪಾಲಕರೂ ಕಾನೂನು ಮರೆಯುವ[...] ಮಾಡಿದ್ದಾರೆ. ಇಷ್ಟೇ ಅಲ್ಲದೇ ಬೆಂಗಳ[...] ಮತ್ತು ಮೈಸೂರಿನ ಲ್ಯಾಂಡ್ ಮಾಫಿ[...] ಡಾನ್‌ಗಳು ಕ್ವಾರೆ ಗಿಟ್ಟಿಸಿಕೊಂಡಿದ್ದ[...] ಆಂಧ್ರದ ಮಣಿ, ಚೌಧರಿಗಳ ಗಣಿಲ[...] ನಿರಂತರವಾಗಿ ನಡೆಯುತ್ತಿದೆ. ಇದೆಲ್ಲ ಗ[...] ದ್ದರೂ ತಹಶೀಲ್ದಾರ್ ಅರುಳ್ ಕುಮ[...] ಮಾತ್ರ ಮೌನವಾಗಿದ್ದಾನೆ.

ಇವೆಲ್ಲವೂ ಶ್ರೀರಂಗಪಟ್ಟಣದ [...] ಯಾದರೆ, ಮೇಲುಕೋಟೆ ಕ್ಷೇತ್ರದ ಕಥೆ [...] ಭೀಕರ! ಶಾಸಕ ಚಿನಕುರಳಿ ಪುಟ್ಟರಾಜು[...] ಹೆಸರಿಗೆ 'ಜನಪ್ರಿಯ ಶಾಸಕ' ಎಂ[...] ಬರೆಯುವವರು ಆ ಪದಕ್ಕೇ ಅವಮ[...] ಮಾಡುತ್ತಿದ್ದಾರೆ. ಇದೇ ಪುಟ್ಟರಾಜುವಿನ [...] ವರ್ಷದ ಇತಿಹಾಸವನ್ನ ತಿರುವಿಹಾಕಿದರೆ [...] ಆತ ಕಲ್ಲುಸಾಗಾಣಿಕೆ ಮಾಡುವ ಲಾರಿ ಚಾ[...] ಲಾರಿ ಚಾಲಕ ಶಾಸಕನಾಗಬಾರದೆಂದೇನಿ[...] ಆದರೆ ಇವತ್ತಿಗೆ ಈತ ಏನಿಲ್ಲವೆಂದರೂ ನೂ[...] ಕೋಟಿಗೆ ತೂಗುತ್ತಾನೆ ಎಂದರೆ ಅ[...] ಮರ್ಮಗಳೇನಿರಬಹುದು ಎಂದು ಪ್ರಶ್ನಿಸ[...] ಬೇಕು.

ಒಂದು ಕಾಲದ ಲಾರಿ ಚಾಲಕ, ನಂತರ [...] ಗುತ್ತಿಗೆದಾರನಾಗಿದ್ದ ಪುಟ್ಟರಾಜು ಇಂದು [...] ಪಾಂಡವಪುರ ತಾಲ್ಲೂಕಿನಲ್ಲಿ ನಡೆಯುತ್ತಿರುವ ಕಲ್ಲು[...] ಗಾರಿಕೆಗೆ ಕಿಂಗ್. ಆತನ ಅಣ್ಣ ಚಿಕ್ಕರಾಮೇಗೌಡನ ಮಕ್ಕ[...] ಅಶೋಕ ಮತ್ತು ಶಿವಕುಮಾರ್‌ರ ಆಟಾಟೋಪ[...] ಕೊನೆಯಿಲ್ಲದಾಗಿವೆ. ಈ ಪುಂಡರ ಮಾಲೀಕ[...] ಮೆ.ಎಸ್.ಟಿ.ಜಿ. ಅಸೋಸಿಯೇಟ್ಸ್ ಹೆಸರಿನಲ್ಲಿ ನಡ[...] ತ್ತಿರುವ ಕಲ್ಲುಗಣಿಗಾರಿಕೆಯಲ್ಲಿನ ಅಕ್ರಮಗಳು, ಸಕಾ[...] ಕಟ್ಟಬೇಕಿರುವ ತೆರಿಗೆ ವಂಚನೆಗಳು, ಸ್ಫೋಟಕ ಮ[...] ದುರ್ಬಳಕೆಗಳ ಬಗ್ಗೆ ತನಿಖೆ ನಡೆಸಿದರೆ ಇಡೀ ಕುಟು[...] ಜೈಲುಕಂಬಿ ಎಣಿಸಬೇಕಾಗುತ್ತದೆ.

ಪುಟ್ಟರಾಜುವಿಗೆ ಪಾಂಡವಪುರ ತಾಲೂಕಿನಲ್ಲಿ [...] ಕಳ್ಳತನದಲ್ಲಿ ಪೈಪೋಟಿ ಇದ್ದಿದ್ದು ಮಾಜಿ ಬಿಜೆಪಿ, [...] ಕಾಂಗ್ರೆಸ್‌ನ ಕಲ್ಲುಗಳ್ಳ ಡಾ.ಸಿ.ಕೆ. ರವಿಶಂಕರ್‌ನ ಮೆ.ಶಿ[...] ಅಸೋಸಿಯೇಟ್ಸ್‌ನಿಂದ. ಆದರೆ ಈ ವ್ಯಕ್ತಿ ವೈದ್ಯ[...] ವೃತ್ತಿಯನ್ನು ಬಿಟ್ಟು ಕಲ್ಲುಗಣಿಯ ಅವ್ಯವಹಾ[...] ಕಾನೂನುಬದ್ಧ ಎಂದು ಹೇಳುತ್ತಲೇ ಕೆ.ಆರ್.ಪೇಟೆ ರಸ್ತೆ[...] ವಡ್ಡರಹಳ್ಳಿಯಲ್ಲಿ ಗಣಿಗಾರಿಕೆಯನ್ನ ನಡೆಸುತ್ತಿದ್ದ. ಅಕ್ಕ[...] ಊರಿನ ಪುಂಡರಿಗೆ ಪುಡಿಗಾಸು ಕೊಟ್ಟು ಮ[...] ಕಲ್ಲುಲೂಟಿಯನ್ನು ಬಹಳ ದಿನ ಮುಂದುವರೆಸಲಾಗ[...] ಯಾಕೆಂದರೆ ಕ್ವಾರೆಯಲ್ಲಿ ಹಾಕುತ್ತಿದ್ದ ಕಾನೂನುಬ[...] ರಿಗ್‌ಬ್ಲಾಸ್ಟ್ ಎಂಬ ಬಾಂಬಿನಂತಹ ಶಕ್ತಿಯ ಸ್ಫೋಟ[...] ವಡ್ಡರಹಳ್ಳಿಯ ಜನರು ಪ್ರತಿದಿನ ನರಕದಂತೆ, ಆತಂಕ[...] ಬದುಕುತ್ತಿದ್ದರು. ಮನೆಗಳು ಬಿರುಕು ಬಿಡುತ್ತಿದ್ದವು. ಇದ[...] ಎಚ್ಚೆತ್ತ ಗ್ರಾಮದ ಜನರು ಮತ್ತು ರೈತಸಂಘದ ಹೋ[...] ದಿಂದ ಸಂಪೂರ್ಣವಾಗಿ ಮುಚ್ಚಿಸಲಾಯಿತು. ಇದಕ್ಕೂ [...] ಮೊದಲು ಪುಟ್ಟರಾಜುವಿನ ಅಕ್ರಮ ಗಣಿಗಾರಿಕೆಗಳ [...] ಹಲವು ಪ್ರತಿಭಟನೆಗಳನ್ನೂ ನಡೆಸಲಾಗಿತ್ತು.

ಆದರೆ ಪುಟ್ಟರಾಜು ತನ್ನ ಅಣ್ಣನ ಮಂಡ[...]


ರೈತಸಂಘ ಇದಕ್ಕೂ ಉತ್ತರ ಕೊಡಬೇಕಿದೆ

ಪಾಂಡವಪುರ ಹಾಗೂ ಶ್ರೀರಂಗಪಟ್ಟಣದ ಗಣಿಗಾರಿಕೆಯ ವಿರುದ್ಧ ಸದ್ಯ ದೊಡ್ಡ ದನಿಯೆತ್ತಿರುವವರು ರೈತ ಸಂಘದವರು. ಪುಟ್ಟಣ್ಣಯ್ಯ ಮತ್ತು ನಂಜುಂಡೇಗೌಡರು ಇದರ ನೇತೃತ್ವ ವಹಿಸಿದ್ದಾರೆ. ಭೂಮಿಯನ್ನೂ, ಜನರನ್ನೂ ಹಿಂಡಿ ಬೆಳೆಯುತ್ತಿರುವ ಪುಟ್ಟರಾಜು ಮತ್ತು ಬಾಬು ವಿರುದ್ಧದ ಹೋರಾಟ ನಡೆಯಲೇಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಇದು ಕೇವಲ ಕಲ್ಲು ಗಣಿಗಾರಿಕೆ ವಿರುದ್ಧದ ಹೋರಾಟ ಅಲ್ಲ, ಪುಟ್ಟಣ್ಣಯ್ಯನವರಿಗೆ ಪುಟ್ಟರಾಜು ವಿರುದ್ಧ ಸೇಡು ತೀರಿಸಿಕೊಳ್ಳಲು ನಡೆಸುತ್ತಿರುವ ಚಳವಳಿ ಅಷ್ಟೇ ಎಂದು ಮೂಗುಮುರಿಯುವವರೂ ಇದ್ದಾರೆ. ಒಂದು ವೇಳೆ ಅದೇ ಕಾರಣಕ್ಕೆ ಮಾಡುತ್ತಿದ್ದರೂ ಈ ನಾಡಿನ ಸಂಪತ್ತನ್ನು ಲೂಟಿ ಹೊಡೆಯುತ್ತಿರುವ, ಯಾರ ಅಂಕೆಗೂ ಸಿಗದೇ ಅಬ್ಬರ ಮಾಡುತ್ತಿರುವ ಪುಟ್ಟರಾಜು ವಿರುದ್ಧ ಹೋರಾಟ ನಡೆಯಬೇಕಾದ ಅಗತ್ಯವಂತೂ ಇದ್ದೇ ಇದೆ. ಪುಟ್ಟಣ್ಣಯ್ಯನವರು ಸದರಿ ಹೋರಾಟಕ್ಕೆ ಪರೋಕ್ಷವಾಗಿ ಕಾಂಗ್ರೆಸ್ ಮತ್ತು ಬಿಜೆಪಿಗಳ ಬೆಂಬಲವನ್ನು ಪಡೆದು ನಡೆಸುತ್ತಿದ್ದಾರೆ ಎಂಬ ಗುಮಾನಿ ಹಲವರಿಗಿದೆ. ಇತ್ತೀಚಿಗಿನ ಜಿಲ್ಲಾ ಪಂಚಾಯ್ತಿ ಮತ್ತು ತಾಲೂಕು ಪಂಚಾಯ್ತಿ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ಬಹಿರಂಗ ಒಪ್ಪಂದ ಮತ್ತು ಬಿಜೆಪಿ ಜೊತೆ ಗುಪ್ತ ಒಪ್ಪಂದವನ್ನು ರೈತಸಂಘ ಮಾಡಿಕೊಂಡಿದ್ದು ಈ ಗುಮಾನಿ ಸಂಪೂರ್ಣ ಸುಳ್ಳಿರಲಾರದು ಎಂದು ಭಾಸಿಸುವಂತೆ ಮಾಡಿದೆ.



ಪುಟ್ಟಣ್ಣಯ್ಯ

ಬಿಜೆಪಿ ಮತ್ತು ಕಾಂಗ್ರೆಸ್‌ಗಳ ತಿಮಿಂಗಿಲಗಳೇ ಇಡೀ ರಾಜ್ಯದಲ್ಲಿ ಅದಿರು, ಕಲ್ಲು ಮರಳು ಇತ್ಯಾದಿ ಲೂಟಿಗಳಲ್ಲಿ ತೊಡಗಿರುವುದು ಎಲ್ಲರಿಗೂ ಗೊತ್ತಿದೆ. ದೊಡ್ಡ ಕಳ್ಳರನ್ನು ಎದುರಿಸಲು ಸಣ್ಣ ಕಳ್ಳರ ಜೊತೆ ರಾಜಿ ಮಾಡಿಕೊಳ್ಳುವುದನ್ನು ಎಲ್ಲಾ ಪ್ರಗತಿಪರ ಸಂಘಟನೆಗಳು ಮಾಡುತ್ತವೆ. ಆದರೆ ಇಲ್ಲಿ ಪಾಂಡವಪುರದ ಕಳ್ಳರನ್ನು ಹಣಿಯಲು ರಾಜ್ಯಮಟ್ಟದ ಡಕಾಯಿತರ ಜೊತೆ ಸೇರುವುದು ಎಷ್ಟು ಸರಿ ಎಂಬುದನ್ನು ರೈತಸಂಘದವ[...] ಯೋಚಿಸಬೇಕಿದೆ. ಎಲ್ಲಾ ಪ್ರಗತಿಪರರನ್ನೂ ಒಟ್ಟುಗೂಡಿಸಿಕೊಂಡು, ಇದು ರಾಜ್ಯ ಲೂಟಿಕೋರರ – ರಾಜ್ಯ[...] ಪ್ರಜ್ಞಾವಂತ ಜನರ ನಡುವಿನ ಹೋರಾಟ ಎಂಬಂತೆ ಕಣಕ್ಕಿಳಿದಿದ್ದರೆ ಇಂತಹ ಆಪಾದನೆಗಳು ಬರುತ್ತಿರಲಿಲ್ಲ. ಆದ[...] ಎರಡು ತಾಲೂಕುಗಳ ಚುನಾವಣಾ ಹೊಂದಾಣಿಕೆಗಳ ಸುತ್ತಲೇ ರೈತ ಸಂಘ ಸುತ್ತುತ್ತಿದೆ. ಸದ್ಯಕ್ಕೆ ಪಾಂಡವಪು[...] ಮತ್ತು ಶ್ರೀರಂಗಪಟ್ಟಣಕ್ಕೆ ಎಂಎಲ್‌ಎ ಆಗುವುದೇ ಏಕಮಾತ್ರ ಗುರಿ ಎಂಬಂತೆ ಪುಟ್ಟಣ್ಣಯ್ಯನವರು ಹಾಗ[...] ನಂಜುಂಡೇಗೌಡರು ಭಾವಿಸಿರುವುದೇ ಇದಕ್ಕೆ ಕಾರಣವಾಗಿದೆ.



ನಲ್ಲಿ ಅಷ್ಟೇ ಅಲ್ಲದೇ, ತನ್ನ ಚೇಲಾಗಳಾದ ಅಂಕೇ ...ಲು ರಮೇಶ್, ಕಣಿವೆ ಕೊಪ್ಪಲು ಜಯರಾಂ, ...ನಗಾನಹಳ್ಳಿ ಮಹದೇವ, ರಾಗಿಮುದ್ದನಹಳ್ಳಿಯ ...ೀಗೌಡರ ಹೆಸರಿನಲ್ಲಿ ನಡೆಯುತ್ತಿರುವ ಕ್ವಾರೆಗಳ ಹಿಂದೆ ...ರೆ. ಕಾನೂನುಬದ್ಧವಾಗಿ ಪರವಾನಗಿ ಪಡೆದಿದ್ದರೂ, ...ರೆಲ್ಲರ ಕ್ವಾರೆಗಳು ನಡೆಯುತ್ತಿರುವುದು ಪರವಾನಗಿ ...ರುವ ಅಕ್ಕಪಕ್ಕದ ಸರ್ಕಾರಿ ಜಮೀನುಗಳಲ್ಲಿ. ಇಲ್ಲಿ ...ಾಟವಾಗುವ ಎಲ್ಲಾ ಕಲ್ಲಿನ ಲೆಕ್ಕವನ್ನು ಶಾಸಕನ ಅಣ್ಣನ ಅಶೋಕನಿಗೆ ಕೊಡಬೇಕಿದೆ. ಅಂದರೆ ಹೆಸರು ...ಯವರದ್ದು, ಬಸಿರು ಮಾತ್ರ ಪುಟ್ಟರಾಜುವಿನ ...ಂಬದ್ದು. ರಾಜರ ಕಾಲದಿಂದಲೂ ಹುಲ್ಲುಗಾವಲಿಗೆ ...ಸಲಿಟ್ಟಿರುವ ವಡ್ಡರಹಳ್ಳಿ, ಚಿನಕುರಳಿ, ಬೇಬಿ, ವನಗಾನ ಭಾಗದಲ್ಲಿರುವ 1094 ಎಕರೆ ಅಮೃತ್‌ಮಹಲ್ ...ಲ್ ಹೆಸರಿನ ವಿಶಾಲ ಅರಣ್ಯದಲ್ಲಿ ಹುದುಗಿರುವ ... ಸಂಪತ್ತನ್ನು ಎಡೆಬಿಡದೆ ಲೂಟಿ ಮಾಡುತ್ತಿರುವವರಲ್ಲಿ ...ರಾಜು ಕುಟುಂಬದ್ದೇ ಮಾನೋಪಲಿ.

ಇದಷ್ಟೇ ಅಲ್ಲದೇ ಬನ್ನಂಗಾಡಿ ಸರ್ವೆ ನಂ. 24ರ ... ಇಲಾಖೆಯ 500 ಎಕರೆಯಲ್ಲಿ ಹಲವು ಕಡೆ ...ಯುತ್ತಿರುವ ಗಣಿಗಾರಿಕೆಗಳಷ್ಟೇ ಅಲ್ಲದೇ, ರಾಗಿ ಮುದ್ದನಹಳ್ಳಿ, ಮೋಳೆಸಂದ್ರ, ಚಿಕ್ಕಮರಹಳ್ಳಿ, ಕಂಚನಹಳ್ಳಿ, ಹಳೇಬೀಡು, ಕನ್ನಂಬಾಡಿ, ಗುಮ್ಮನಹಳ್ಳಿ, ಶಂಭೂನಹಳ್ಳಿ, ಬಸ್ತಿಹಳ್ಳಿ, ಚಂದ್ರೆ, ನರನಹಳ್ಳಿ, ಶಿಂಗಾಪುರಾ,


ರವಿಶಂಕರ್

...ೋನಹಳ್ಳಿ, ವಡೆಸಂದ್ರ, ನುಗ್ಗೆನಳ್ಳಿ ...ಗಾನಹಳ್ಳಿ ಮತ್ತಿತರೆಡೆ ಗಣಿಗಾರಿಕೆ ಯಾವ ...ಡೆಗಳಿಲ್ಲದೆ ನಡೆಯುತ್ತಿದೆ. ಇಲ್ಲೂ ಬೇನಾಮಿ ...ನಲ್ಲಿ ಶಾಸಕರ ಅಣ್ಣನ ಮಕ್ಕಳ ಹಿಡಿತವಿದೆ. ...ಂದಲೂ ಪ್ರತೀ ತಿಂಗಳ ಕಪ್ಪ ವಸೂಲಿ ...ಯುತ್ತಿದೆ ಎಂಬ ಆರೋಪಗಳಿವೆ.

...ಾವೇರಿಪುರದಲ್ಲಿ ಬಡ ಬೋವಿಗಳು ನಡೆಸುತ್ತಿದ್ದ ...ೂೋಪಕರಣಗಳಿಲ್ಲದೆ ಮಾಡುತ್ತಿದ್ದ ಸಣ್ಣಪುಟ್ಟ ಕ್ವಾರೆಗಳನ್ನ ಪುಟ್ಟರಾಜು ಫ್ಯಾಮಿಲಿ ಗೂಂಡಾಗಿರಿ ನಡೆಸಿ ...ೂಂಡಿತು. ಆಗ ಇವರು ಕನ್ನಂಬಾಡಿಗೆ ಕಟ್ಟೆ ಕಟ್ಟಿದ ...ೀವಿಗಳು ಎಂಬ ಕಾರಣಕ್ಕೆ ರೈತಸಂಘ ಅವರ ಬೆನ್ನಿಗೆ ... ಹೋರಾಡಿತ್ತು. ಇತ್ತೀಚೆಗೆ ಬೆದರಿಕೆ ಹಾಕಿ ಇಡೀ ...ಿ ಜನಾಂಗವನ್ನ ತಮ್ಮ ಕಲ್ಲು ಕ್ವಾರೆಗಳಲ್ಲಿ ಜೀತ ...ಡುತ್ತಿರುವುದು ಗುಟ್ಟಾಗಿ ಉಳಿದಿಲ್ಲ.

...ಟ್ಟರಾಜುವಿನ ಗಣಿ ...ಹಾಕುವ ರಿಗ್‌ಬ್ಲಾಸ್ಟ್ ...ಗಿ ಹತ್ತಾರು ಹಳ್ಳಿ ...ಪ್ರತೀ ದಿನವೂ ಭೂ ...ಗಳಿಗೆ ಲೆಕ್ಕವಿಲ್ಲದಂತಾ ...ಪ್ರಸಿದ್ಧ ತಾಣ ಮೇಲು ...ಯ ತನಕವೂ ಸಹ ...ಕಲ್ಲುಗಣಿ ಮಾಫಿಯಾ ...ಬುವರೆದಿದೆ.


ರಮೇಶ್‌ಬಾಬು

...ರು ಮತ್ತು ಮಂಡ್ಯದ ಲಕ್ಷಾಂತರ ಜನರ ಜೀವನಾಡಿ ...ಎಸ್. ಡ್ಯಾಂಗೂ ಪುಟ್ಟರಾಜುವಿನ ಗಣಿಗಾರಿಕಾ ... ನೇರವಾಗಿ ಕೇವಲ 2 ಕಿ.ಮಿ ಅಂತರವಿದೆ. ಇವರು ... ರಿಗ್‌ಬಾಂಬ್‌ನ ಕಂಪನಕ್ಕೆ ಕೆಆರ್‌ಎಸ್ ಡ್ಯಾಂ ಸಹ ... ಬಿಟ್ಟು ದೊಡ್ಡ ಅಪಾಯವಾಗಬಹುದು. ಇದರ ...ಿ ಗೊತ್ತಿದ್ದೂ ಗಣಿಗಾರಿಕೆ ನಡೆಸುತ್ತಾರೆಂದರೆ ಇವರು ...ತ್ಪಾದಕರಿಗಿಂತ ಕಡಿಮೆ ಏನಿಲ್ಲ. ಇದು ಪೊಲೀಸ್ ...ಗೆ ಗೊತ್ತಿದ್ದರೂ ತೆಪ್ಪಗಿರುವುದು ಯಾತಕ್ಕಾಗಿ ಎಂಬ ...ಎಸ್‌ಪಿ ಕೌಶಲೇಂದ್ರ ಕುಮಾರ್ ಉತ್ತರಕೊಡಬೇಕಿದೆ.

...ಕಿ ವಿಚಾರದಲ್ಲಿ ಮೊದಲಿಂದಲೂ ರೈತಸಂಘ ...ಧಿಸುತ್ತಲೇ ಬಂದಿದೆ. ಆದರೆ ಈ ನಡುವೆ ಇದು ...ರಿ, ರೈತ ಸಂಘ ಮತ್ತು ಜೆಡಿಎಸ್‌ಗಳೆರಡೂ ಈ ...ದನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ದಿನನಿತ್ಯ ... ಹೇಳಿಕೆಗಳು, ಸರಣೀ ಪತ್ರಿಕಾಗೋಷ್ಠಿಗಳು ...ತ್ತಿವೆ. ರೈತ ಸಂಘ ಮತ್ತು ಜೆಡಿಎಸ್ ಎನ್ನುವುದಕ್ಕಿಂತ ...ಜು ನೇರವಾಗಿ ಫೈಟ್‌ಗೆ ಬಿದ್ದಂತಿದೆ. ಪುಟ್ಟರಾಜುಗೆ ...ಉಳಿವಿನ ಆತಂಕ ಎದುರಾಗಿದೆ. ಶಾಸಕ ಪುಟ್ಟರಾಜು ...ಪತ್ರಕರ್ತರಿಗೆ ತಿಂಗಳಿಗೊಂದಾವರ್ತಿ ಹೆಂಡ, ಬಾಡು, ...ಅಮೇಧ್ಯ ಹರಿಸುವ ಮೂಲಕ ತಮ್ಮನ್ನು ಕೀಳು ...ಳಿಸಿದ್ದಾನೆ ಎಂಬುದು ಅವರಿಗೆ ಅರ್ಥವಾದಂತಿಲ್ಲ. ... ಸಂಘ ನಡೆಸುತ್ತಿರುವ ಹೋರಾಟ ಗುರಿ ...ವುದೇ, ಈ ಶಾಸಕದ್ವಯರ ಲೂಟಿ ಮತ್ತು ಗೂಂಡಾ ...ದು ಗತಿಸಿಹೋಗುವುದೇ ಎಂಬುದು ಮುಂಬರುವ ...ಗಳಲ್ಲಿ ತೀರ್ಮಾನವಾಗಲಿದೆ.

● ಲಕ್ಷ್ಮೀಶ್ ಚೀರನಹಳ್ಳಿ

ಬಾಗಲಕೋಟೆ: ಆಟೋ ಪರವಾನಗಿ ಪರಿಶಿಷ್ಟರಿಗೆ ಮಹಾ ಮೋಸ!

ಗೋವಿಂದ ಕಾರಜೋಳನ ಉಸ್ತುವಾರಿಯಲ್ಲಿ ಕಂಗೆಟ್ಟಿರುವ ಬಾಗಲಕೋಟೆಯೊಳಗೆ ಆಗಬಾರದ್ದೆಲ್ಲ ಆಗು ತ್ತಿದೆ. ಸದ್ಯ ಇಡೀ ಜಿಲ್ಲೆ ಲಾರಿಪಟುಗಳ ಆರ್ಭಟಕ್ಕೆ ಸಿಕ್ಕು ತಲ್ಲಣಿಸುತ್ತಿದೆ. ಇವರೆಲ್ಲರ ನೆರಳಲ್ಲೇ ಪ್ರತೀ ಸರ್ಕಾರಿ ಕಚೇರಿಗಳೂ ಧನದಾಹಿ ಅಧಿಕಾರಿ ವರ್ಗದಿಂದ ತುಂಬಿ ಹೋಗಿದೆ. ಇಂತಹುದೊಂದು ಭ್ರಷ್ಟಾಚಾರದ ಪರ್ವವೀಗ ಪರಿಶಿಷ್ಟ ಪಂಗಡದವರ ಬದುಕಿನ ಮೇಲೂ ಸವಾರಿ ನಡೆಸಿದೆ. ಆಟೋಗಳಿಗೆ ಪರವಾನಗಿ ನೀಡುವ ವಿಚಾರದಲ್ಲಿ ಅದು ಸಾಬೀತಾಗಿದೆ.

ಬಿಜಾಪುರ ಮತ್ತು ಕೊಪ್ಪಳ ಜಿಲ್ಲೆಗಳ ಉಸ್ತುವಾರಿ ಹೊತ್ತು ಆ ಜಿಲ್ಲೆಗಳನ್ನು ಸಪಾಟು ಸಾರಿಸಿ ಬಂದ ಕಾರಜೋಳ ಬಾಗಲಕೋಟೆಗೆ ವಕ್ಕರಿಸಿದ್ದೊಂದು ಮಹಾ ದುರಂತ. ದಲಿತನಾಗಿ ಹುಟ್ಟಿ ಆ ಸಮುದಾಯದ ತಲ್ಲಣಗಳನ್ನು ಕಂಡುಂಡು ಬೆಳೆದ ಕಾರಜೋಳ ಈಗ ಅದೆಲ್ಲವನ್ನು ಮರೆತು ಬಿಟ್ಟಿದ್ದಾನೆ. ತನ್ನದೇ ಕೈ ಕೆಳಗಿನ ಮಂದಿಯಿಂದ ದಲಿತರ ಬದುಕು ಬರ್ಬಾದಾದರೂ ಚೆಡ್ಡಿಧಾರಿ ಕಾರಜೋಳನಿಗೆ ಏನೂ ಅನ್ನಿಸುವುದಿಲ್ಲ. ಈತನ ಕೈಕೆಳಗೆ ಅದ್ಯಾವಪರಿ ದಲಿತ ದಮನ ಕಾರ್ಯ ನಡೆಯುತ್ತಿದೆಯೆಂಬುದಕ್ಕೆ ಇತ್ತೀಚೆಗೆ ನಡೆದ ಆಟೋ ಪರವಾನಗಿ ನೀಡಿಕೆಯ ವಂಚನೆಯೆ ಪ್ರಮುಖ ಸಾಕ್ಷಿ.

ಬಾಗಲಕೋಟೆಯಲ್ಲಿ ಬರಬರುತ್ತಾ ಡೀಸೆಲ್ ಆಟೋ (ಟಾಂಟಾಂ)ಗಳ ಹಾವಳಿ ವಿಪರೀತವಾಗಿತ್ತು. ಇದಕ್ಕೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ಆದೇಶವೊಂದನ್ನು ಹೊರಡಿಸಿದ ಜಿಲ್ಲಾಡಳಿತ ಇಂಥ ಆಟೋಗಳಿಗೆ ಹೊಸದಾಗಿ ಪರವಾನಗಿ ನೀಡದಂತೆ ಸೂಚಿಸಿತು. ಇದಾದದ್ದು 2006 ರಲ್ಲಿ. ಇದಲ್ಲದೆ ಕೇವಲ ನಿರುದ್ಯೋಗಿ ದಲಿತ ಯುವಕರಿಗೆ ಮಾತ್ರ ಪರವಾನಗಿ ನೀಡಬಹುದೆಂದೂ ಆರ್‌ಟಿಓ ಇಲಾಖೆಗೆ ನಿರ್ದೇಶನ ನೀಡಲಾಗಿತ್ತು. ಅದುವರೆಗೆ ಜನರ ಸಂಖ್ಯೆಗಿಂತ ಆಟೋಗಳೇ ಹೆಚ್ಚಾಗಿದ್ದರಿಂದ ಪೈಪೋಟಿಯ ನಡುವೆ ಪೇಚಾಟಕ್ಕೆ ಸಿಲುಕಿದ್ದ ಜನಸಾಮಾನ್ಯರೂ ಈ ತೀರ್ಮಾನವನ್ನು ಒಪ್ಪಿಕೊಂಡಿದ್ದರು.

ಆದರೆ ಇಂತಹುದೊಂದು ಜನೋಪಕಾರಿ ಯೋಜನೆ ಆರ್‌ಟಿಓ ಇಲಾಖೆಯ ಭ್ರಷ್ಟ ಅಧಿಕಾರಿಗಳಿಗೆ ಮತ್ತು ಅಲ್ಲಿ ನಡೆಯೋ ಡೀಲುಗಳಿಂದಲೇ ಹೊಟ್ಟೆ ಹೊರೆಯುವ ಮಂದಿಗೆ ಹಬ್ಬದೂಟವಾಗಿ ಬದಲಾಯ್ತು. ಈ ರೀತಿಯದ್ದೊಂದು ಕಾನೂನು ಬಂದಿದೆ ಅಂತ ಪ್ರಚಾರವಾಯಿತಾದರೂ ರಸ್ತೆಗಿಳಿಯುವ ಡೀಸೆಲ್ ಆಟೋಗಳ ಪ್ರಮಾಣ ದುಪ್ಪಟ್ಟಾಗಿತ್ತು. ಈ ಬಗ್ಗೆ ಕೆಲ ಪ್ರಜ್ಞಾವಂತರು ಪ್ರಶ್ನಿಸಿದರೆ, ಆರ್‌ಟಿಓ ಇಲಾಖೆ ಮಳ್ಳ ಮೌನ ತಳೆಯಿತು. ಆಟೋ ಯೂನಿಯನ್‌ನ ಸೋಕಾಲ್ಡ್ ಹೋರಾಟಗಾರರ ಕಡೆಯಿಂದ ಧಮ್‌ಕಿಗಳೆದುರಾದವು.

ಹಾಗಾದರೆ ಇಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ವಿಚಾರಣೆಗಿಳಿದದ್ದೇ, ವಂಚನೆಗಳು ಸರಣಿ ಸರಣಿಯಾಗಿ ಬಿಚ್ಚಿಕೊಳ್ಳಲಾರಂಭಿಸಿದವು. ದುರಂತವೆಂದರೆ, ಇಷ್ಟೆಲ್ಲಾ ವಂಚನೆಗಳ ಮೂಲವಿರುವುದು ಸಮಾಜ ಕಲ್ಯಾಣ ಇಲಾಖೆಯಲ್ಲಿ! ಈ ವಂಚನೆಯ ಸೂತ್ರ ಹಿಡಿದು ಕೊಬ್ಬಿ ಹೋಗಿರುವಾತ ಇಲಾಖೆಯ ಜಿಲ್ಲಾ ಅಧಿಕಾರಿ ಎಸ್.ಆರ್. ಕಾಮತ!

ಈ ಕಾಮತನ ಕೈಗೊಂದಿಷ್ಟು ಕಾಸು ಮಡಗಿದರೆ ಸಾಕು, ಯಾವನಿಗೆ ಯಾವ್ಯಾವ ಸರ್ಟಿಫಿಕೇಟ್‌ಗಳು ಬೇಕೋ, ಅವೆಲ್ಲ ಸಿಕ್ಕು ಬಿಡುತ್ತವೆ. ಕಾಮತ ಇಂಥ ಬೋಗಸ್ ಸರ್ಟಿಫಿಕೇಟ್ ಮಾಡಿಸಲು ಒಂದು ಪಡೆಯನ್ನೇ ಸಾಕಿಕೊಂಡಿದ್ದಾನೆ. ಈ ಟೀಮಿನಲ್ಲಿ ತಾಲ್ಲೂಕು ಅಧಿಕಾರಿ ಇಟಗಣ್ಣವರ್, ಡಾ. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಫೀಲ್ಡ್ ಆಫೀಸರ್ ಹಡಪದ, ಕ್ಲರ್ಕ್ ಆದ ತುಳಸಗೇರಿ ಪ್ರಮುಖರು.



ಸದ್ಯ ಹೊಸ ಆಟೋಗಳಿಗೆ ಪರವಾನಗಿ ನೀಡಬಾರದು. ನೀಡುವುದಾದರೂ ನಿರುದ್ಯೋಗಿ, ದಲಿತ ಯುವಕರಿಗೆ, ಅದರಲ್ಲೂ ವಿಶೇಷವಾಗಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಮಂಜೂರಾತಿ ಪಡೆದವರಿಗೆ ಮಾತ್ರ ಆಟೋ ಪರವಾನಗಿ ನೀಡಬೇಕೆಂದು ಜಿಲ್ಲಾಡಳಿತ ಆದೇಶ ಹೊರಡಿಸಿತ್ತಲ್ಲಾ? ಪ್ರವರ್ಗ 1 ರಲ್ಲಿ ಬರುವ ಒಂದಷ್ಟು ಮಂದಿ ಪರಿಶಿಷ್ಟ ಪಂಗಡದ ವರೆಂಬಂತೆ ನಕಲಿ ಸರ್ಟಿಫಿಕೇಟ್ ಸೃಷ್ಟಿಸಿ ಆಟೋ ಪರವಾನಗಿ ಪಡೆದುಕೊಂಡಿದ್ದಾರೆ. ಆ ಪಂಗಡದ ಅರ್ಹರಿಗೆ ಮಹಾ ಮೋಸ ಮಾಡಿದ್ದಾರೆ. ಇಂಥವರಿಗೆಲ್ಲ ನಕಲಿ ಸರ್ಟಿಫಿಕೇಟ್ ಸೃಷ್ಟಿಸಿ ಕೊಟ್ಟಿದ್ದು ಕಾಮತನ ಕಳ್ಳ ಗ್ಯಾಂಗು!

ಪ್ರಸ್ತುತ ಆಟೋ ಪರವಾನಗಿ ವಿಚಾರದಲ್ಲಿ ನಡೆದ ವಂಚನೆಗೆ ಸಂಪೂರ್ಣ ಕಾರಣ ಕಾಮತ. ಈತ ಹತ್ತು ವರ್ಷಗಳಿಂದ ಇಲ್ಲೇ ಗೂಟ ಬಡಿದು ಕೂತು ಬಿಟ್ಟಿದ್ದಾನೆ. ಜಿಲ್ಲಾ ಉಸ್ತುವಾರಿ ಸಚಿವರಾಗಿ ಯಾರೇ ಬಂದರೂ ಮನಸಾರೆ ಅವರ ಸೇವೆಗೆ ನಿಲ್ಲುವ, ಹಿರಿಯ ಅಧಿಕಾರಿಗಳ ಮರ್ಜಿಗಳನ್ನು ಮನಸಾರೆ ಪೂರೈಸುವ ಈತ ಆ ಬಲದಿಂದಲೇ ಉಸಿರಾಡುತ್ತಾ ಆರ್ಥಿಕವಾಗಿ ಕೊಬ್ಬಿ ಹೋಗಿದ್ದಾನೆ. ಸದ್ಯ ದಲಿತರಿಗೆ ದ್ರೋಹವೆಸಗಿದ ಈತನನ್ನು ಕಾರಜೋಳನೇ ಪೊರೆಯುತ್ತಿದ್ದಾನೆ. ಇನ್ನು ಶಾಸಕ ವೀರಣ್ಣ ಚರಂತಿ ಮಠನಿಗೀತ ನಿಯತ್ತಿನ ಚೇಲಾ.

ಇಂಥಾ ಚೇಲಾಗಿರಿಗಳು ಕಾಮತನನ್ನು ಯಾವ ಪರಿ ರಕ್ಷಿಸುತ್ತವೆಂಬುದಕ್ಕೆ ಮೊನ್ನೆ ನಡೆದ ಘಟನೆಯೇ ಸಾಕ್ಷಿ. ಕಾಮತನ ನೆರಳಲ್ಲಿ ಆಟೋ ವಿಚಾರದಲ್ಲಿ ನಡೆದ ವಂಚನೆ ವಿರುದ್ಧ ದಲಿತ ಸಂಘಟನೆಗಳು ಪ್ರತಿಭಟನೆ ನಡೆಸಿದವು. ಖುದ್ದು ಜಿಲ್ಲಾಧಿಕಾರಿ ಎಂ.ಎಂ. ಕುಂಜಪ್ಪನವರಿಗೇ ದೂರು ನೀಡಿತು. ಈ ಸಂದರ್ಭದಲ್ಲಿ ದಿನಾಂಕ 10.11.10 ರಲ್ಲಿ ಸಮಾಜ ಕಲ್ಯಾಣ ಇಲಾಖೆ, ಅಂಬೇಡ್ಕರ್ ಅಭಿವೃದ್ಧಿ ನಿಗಮದವರು 10 ಆಟೋಗಳಿಗೆ ಮಂಜೂರಾತಿ ನೀಡಿದ್ದು ಬೋಗಸ್ ಎಂಬ ಬಗ್ಗೆ ವಿವರವಾದ ದಾಖಲೆಗಳನ್ನೂ ಸಲ್ಲಿಸಿತ್ತು. ಆದರೆ ಡಿಸಿ ಸಾಹೇಬರು ಕಾರಜೋಳ ಹಾಗೂ ಶಾಸಕ ಚರಂತಿಮಠನ ಮರ್ಜಿಗೆ ಬಿದ್ದು ಗಪ್‌ಚುಪ್ ಆದರು. ತನ್ನ ಜನರಿಗೆ ಸಿಗಬೇಕಾದ ಸೌಲಭ್ಯಗಳನ್ನು ಖೋಟಾ ಸರ್ಟಿಫಿಕೇಟ್ ಪಡೆದು ಯಾರ್‍ಯಾರೋ ಹೊಡಕೊಂಡರೂ ಕಾರಜೋಳ ತೆಪ್ಪಗಿದ್ದ.

ಸದ್ಯ ದಲಿತ ಸಂಘಟನೆಗಳು ಸಲ್ಲಿಸಿರುವ ದೂರು-ದಾಖಲೆಗಳು ವಂಚನೆಯನ್ನು ಇಂಚಿಂಚು ತೆರೆದಿಡುತ್ತಿವೆ. ಹಿಂದೂ ಕಟಬರ (ಮೀನುಗಾರರು) ಜನಾಂಗದ ಮಂದಿ ತಮ್ಮ ಜಾತಿಯನ್ನು ಭೋವಿ ಅಂತ ತಿದ್ದಿದ್ದಾರೆ. ಆದರೆ ಅವರೆಲ್ಲರ ಶಾಲಾ ಸರ್ಟಿಫಿಕೇಟ್‌ಗಳಲ್ಲಿ ಕಟಬರ ಅಂತಲೇ ಇದೆ. ಇವರೆಲ್ಲರೂ ಪರಿಶಿಷ್ಟ ನಿರುದ್ಯೋಗಿಗಳಿಗೆ ದಕ್ಕಬೇಕಿದ್ದ ಸವಲತ್ತನ್ನು ಬಾಚಿಕೊಂಡಿದ್ದಾರೆ.

ಈ ಬಗ್ಗೆ ತಕ್ಷಣ ಕ್ರಮ ಜರುಗಿಸದಿದ್ದರೆ ತೀವ್ರ ಹೋರಾಟ ನಡೆಸುವುದಾಗಿ ದಲಿತ ಸಂಘಟನೆಗಳು ಎಚ್ಚರಿಸಿದವು. ಇದರಿಂದ ಪೇಚಿಗೆ ಸಿಕ್ಕಿದ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಇಟಗಣ್ಣವರ ಆರ್‌ಟಿಓಗೆ ಪತ್ರ ಬರೆದು ಕೂಡಲೇ ಅಕ್ರಮ ಆಟೋಗಳನ್ನು ಸೀಜ್ ಮಾಡುವಂತೆ ಪತ್ರ ಬರೆದ. ಆದರೆ ಕಾರಜೋಳ ಹಾಗೂ ಚರಂತಿ ಮಠನ ಒತ್ತಡದಿಂದ ಸೀಜ್ ನಡೆಯಲಿಲ್ಲ. ಇಂದಿಗೂ ಅಕ್ರಮ ಆಟೋಗಳು ಬಾಗಲಕೋಟೆಗುಂಟ ಹಾಯಾಗಿ ಓಡಾಡಿಕೊಂಡಿವೆ. ಇನ್ನು ಸ್ವಲ್ಪವೇ ಸ್ವಲ್ಪ ಕರ್ತವ್ಯಪ್ರಜ್ಞೆಯಿದ್ದರೂ ಈ ವಂಚಕರ ವಿರುದ್ಧ, ಅದಕ್ಕೆ ಸಹಾಯ ಮಾಡಿದವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಬಹುದಿತ್ತು. ಅಂತಹುದೊಂದು ಕ್ರಮ ಕೈಗೊಳ್ಳುವ ಸ್ವಾತಂತ್ರ್ಯ ಆರ್‌ಟಿಓ ಇಲಾಖೆಗೂ ಇತ್ತು. ಆದರೆ ಆರ್‌ಟಿಓ ಅಧಿಕಾರಿ ಪಾಟೀಲ್ ಕಾರಜೋಳನ ಕಚೇರೀಲಿ ಹ್ಯಾಪ್ಮೋರೆ ಹಾಕಿ ಕುಂತಿದ್ದಾನೆ.

ಸದ್ಯ ಈ ರೀತಿ ಅಡಿಗಡಿಗೆ ಭ್ರಮನಿರಸನವಾದರೂ ಧೃತಿಗೆಡದ ದಲಿತ ಸಂಘಟನೆಗಳು ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ. ಲೋಕಾಯುಕ್ತರು ಈ ಬಗ್ಗೆ ಸಮಗ್ರ ತನಿಖೆ ನಡೆಸಿದರೆ ಸಮಾಜ ಕಲ್ಯಾಣ ಇಲಾಖೆ, ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಆರ್‌ಟಿಓದ ಖದೀಮನೇಕರು ಮನೆ ದಾರಿ ಹಿಡಿಯುವುದು ಖಚಿತ.

ಆ ಮೂಲಕವಾದರೂ ಅರ್ಹರಿಗಾಗುತ್ತಿರುವ ವಂಚನೆಗೊಂದು ಬ್ರೇಕ್ ಬೀಳಬೇಕಿದೆ.

● ಮೇಘರಾಜ್

ಚಿಕ್ಕಮಗಳೂರು: ಸಿಡಿಪಿ ಅಧಿಕಾರಿಗಳಿಂದ ಬಡಮಕ್ಕಳ ಹೊಟ್ಟೆಗೆ ತಣ್ಣೀರು ಬಟ್ಟೆ

ಚಿಕ್ಕಮಗಳೂರು ಜಿಲ್ಲೆಯ ಸರ್ಕಾರಿ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಎತ್ತಿದ ಕೈ, ಜನಪ್ರತಿನಿಧಿಗಳ ದಿವ್ಯ ನಿರ್ಲಕ್ಷ್ಯದ ಪರಿಣಾಮ ಮೇಯುವ ಅಧಿಕಾರಿಗಳಿಗೆ ಮೂಗುದಾರ ಪೋಣಿಸುವ ಕೆಲಸವಿನ್ನೂ ನಡೆದಿಲ್ಲ. ಇವತ್ತಿಗೆ ಚಿಕ್ಕಮಗಳೂರಿನ ತುಂಬಾ ತುಂಬಿ ತುಳುಕುತ್ತಿರುವ ಚೆಡ್ಡಿ ಶಾಸಕರಿಗೆ ಬಡವರ, ಮಕ್ಕಳ, ಮಹಿಳೆಯರ ಕಾಳಜಿ ಇಲ್ಲವೇ ಇಲ್ಲ. ಇದ್ದಷ್ಟು ದಿನ ತಿಂದುಂಡು ಕೊಬ್ಬುವ ಪಣ ತೊಟ್ಟಂತಿರುವ ಖದೀಮ ಅಧಿಕಾರಿಗಳು ಬಡವರ ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟುತ್ತಿದ್ದಾರೆ.


ಹಾಗೆ ನೋಡಿದರೆ ಈ ಜಿಲ್ಲೆಯ ಅಷ್ಟೂ ತಾಲ್ಲೂಕುಗಳಲ್ಲಿ ನಡೆಯುತ್ತಿರುವುದು ದೊಡ್ಡ ಅಧ್ವಾನ. ಜಿಲ್ಲೆಯ ಮಟ್ಟಿಗೆ ಸಾವಿರಾರು ಅಂಗನವಾಡಿ ಕೇಂದ್ರಗಳಿವೆ. ಕಳೆದ ವರ್ಷ ನೂರಾರು ನೂತನ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆ. ಆದರೆ ಜಪ್ಪಯ್ಯ ಅಂದರೂ ಅವುಗಳಿಗೆ ವಿಶೇಷ ಸವಲತ್ತುಗಳು, ಪರಿಕರಗಳು, ಅಗತ್ಯ ಸೌಕರ್ಯಗಳನ್ನ ಒದಗಿಸಿಲ್ಲ. ಒಂದು ವರ್ಷ ಕಳೆದರೂ ಸಹಾಯಕಿಯರ ನೇಮಕವಾಗಿಲ್ಲ. ಐದು ಸಾವಿರ ರೂಪಾಯಿಯ ಲಂಚ ಕೊಡದಿದ್ದರೆ ನೇಮಕ ಮಾಡುವುದಿಲ್ಲ ಅಂತ ಅಧಿಕಾರಿಗಳು ಕಡಕ್ಕಾಗಿ ವಸೂಲಿ ದಂಧೆಗಿಳಿದಿದ್ದಾರೆ. ಕಳೆದ ಮಳೆಗಾಲದ ಆರಂಭದಲ್ಲಿ ಅಂಗನವಾಡಿಗಳಲ್ಲಿನ ಪ್ರತಿ ಮಕ್ಕಳಿಗೆ ಕೇಂದ್ರ ಸರಕಾರದಿಂದ ಸಾವಿರದ ಆರುನೂರು ರೂಪಾಯಿಗಳು ಬಂದಿತ್ತಲ್ಲ, ಅದನ್ನು ಅಂಗನವಾಡಿ ಕಾರ್ಯಕರ್ತೆಯರ ಮತ್ತು ಆಯಾ ಭಾಗದ ಗ್ರಾಮ ಪಂಚಾಯಿತಿ ಅಧ್ಯಕ್ಷರ ಜಂಟಿ ಹೆಸರಿನ ಬ್ಯಾಂಕು ಖಾತೆಗೆ ಜಮೆಮಾಡಲಾಗಿತ್ತು. ಮಕ್ಕಳ ಆಟಿಕೆ ಸಾಮಗ್ರಿಗಳು, ಔಷಧಿಗಳ ಖರೀದಿಗೆ ಆ ಸೀಮಿತ ಹಣದಲ್ಲೇ ಅಂಗನವಾಡಿ ಕಾರ್ಯಕರ್ತೆಯರು ಖರೀದಿಸಬೇಕಿತ್ತು. ಆದರೆ ಸಿಡಿಪಿಓಗಳ ಜಬರ್ದಸ್ತಿನಲ್ಲಿ ಅನೇಕಾನೇಕ ವಂಚನೆಗಳು ನಡೆದುಹೋದವು.

ಜಿಲ್ಲೆಯ ಬಹುತೇಕ ಎಲ್ಲಾ ಅಂಗನವಾಡಿಗಳಿಗೆ ಬೆಂಗಳೂರಿನ ಬಸವೇಶ್ವರ ನಗರದ ಬಿಇಎಂಎಲ್ ಬಡಾ ವಣೆಯ ಶ್ರೀ ಓಂಕಾರ್ ಎಂಟರ್‌ಪ್ರೈಸಸ್ ಹೆಸರಿನಲ್ಲಿ ಆಟಿಕೆ ಸಾಮಗ್ರಿಗಳಿಗೆ ರಸೀದಿ ಕೊಟ್ಟು 1000 ರೂ.ಗಳನ್ನು ಮುಂಡಾಮೋಚಿದ್ದಾರೆ. ಇವುಗಳಿಗೇನು ಟೆಂಡರ್ ಕರೆಯುವಂತಿಲ್ಲ. ಖರೀದಿಸಿರುವ ಆಟಿಕೆ ಸಾಮಗ್ರಿಗಳು ಕೇವಲ ಒಂಬತ್ತು ವಿಧಗಳಲ್ಲಿವೆ. ಉಡುಪಿಯ ಕೆನರಾ ಡ್ರಗ್‌ಹೌಸ್‌ನಿಂದ ಆರುನೂರು ರೂಪಾಯಿಗಳಿಗೆ ಹತ್ತು ವಿಧದ ಔಷಧಿ ಖರೀದಿಸಲಾಗಿದೆ. ತಮಾಷೆಯೆಂದರೆ ಈ ಔಷಧಿಗಳು ಯಾವ್ಯಾವ ಕಾಯಿಲೆಗಳಿಗೆ ಯಾವ ಹೊತ್ತಿನಲ್ಲಿ ಹೇಗೆ ಕುಡಿಸುವುದೆಂದು ಯಾರಿಗೂ ಗೊತ್ತಿಲ್ಲ. ಅವುಗಳನ್ನು ಮಕ್ಕಳಿಗೆ ಕುಡಿಸಿರುವ ಉದಾಹರಣೆ ಇಲ್ಲ. ಯಾಮಾರಿಸಿ ಕುಡಿಸಿದರೆ ಅಪಾಯವಾಗುವ ದಿಗಿಲು ಕಾರ್ಯಕರ್ತೆಯರಿಗಿದೆ.

ಕಳೆದ ವರ್ಷವೂ ಹೀಗೇ ನಡೆದಿತ್ತು. ಅವತ್ತಿನ ರಸೀದಿಗಳು ಅಂಗನವಾಡಿಗಳಿಗಿನ್ನೂ ತಲುಪಿಲ್ಲ. ಇಲಾಖೆಯೊಳಗಿನಿಂದ ಪಡೆಯದಿದ್ದರೆ ಗೌರವಧನ ಕಡಿತದ ಬೆದರಿಕೆ ಹಾಕಲಾಗುತ್ತದೆ. ಚಿಲಿಪಿಲಿ ತರಬೇತಿ ಶಿಬಿರದ ಹಣವನ್ನು ಮುಳುಗಿಸುತ್ತಿರುವ ಕೂಗು ದಟ್ಟವಾಗಿದೆ. ಸರಕಾರ 50 ಸಾವಿರ ಹಣಕಾಸಿನ ನೆರವನ್ನು ನೀಡುತ್ತಿದೆ. ಇದರಲ್ಲಿ ಕನಿಷ್ಠ 50 ಮಂದಿಗೆ ತರಬೇತಿ ನೀಡಬೇಕೆಂಬ ನಿಯಮವಿದೆ. ಆದರೆ ಕೇವಲ 20 ಮಂದಿಗೆ ತರಬೇತಿ ನೀಡಿ ಉಳಿದ ಹಣವನ್ನು ಯಾಮಾರಿಸುತ್ತಿದ್ದಾರೆ. ಮೂರು ದಿನದ ತರಬೇತಿಯಲ್ಲಿ 25 ರೂ. ಮತ್ತು ಟಿಕೆಟ್ ದರ ಮಾತ್ರ ಸಿಗುತ್ತದೆ. ಸಹಿ ಹಾಕಿಸಿಕೊಂಡ ಬಳಿಕ ಕೇವಲ ಒಂದು ದಿನದ ವೇತನ ಕೊಟ್ಟು ವಂಚಿಸುವುದು ನಡೆಯುತ್ತಿದೆ. ಉದ್ಯೋಗಿನಿ ಯೋಜನೆ, ಆಸರೆ ಯೋಜನೆಗಳು ಕಂಡಕಂಡವರ ಪಾಲಾಗುತ್ತಿವೆ. ಬಡವರಿಗೆ ಸಿಗಬೇಕಿರುವ ಸಬ್ಸಿಡಿ ಹಣಕಾಸಿನ ನೆರವುಗಳೂ ಉಳ್ಳವರ ಸೊತ್ತಾಗಿ ಹೋಗುತ್ತಿದೆ.

ಈ ರೀತಿಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಖದೀಮ ಅಧಿಕಾರಿಗಳು ಬಡಕೂಲಿ ಕಾರ್ಮಿಕರ ಮಕ್ಕಳ, ಮಹಿಳೆಯರ ಸವಲತ್ತುಗಳನ್ನು ಕೊರೆದು ತಿನ್ನುತ್ತಿದ್ದಾರೆ. ಬಡಮಕ್ಕಳ ತಟ್ಟೆಯಿಂದ ಅನ್ನ ಕಸಿಯಲೂ ಇವರು ಹೇಸುತ್ತಿಲ್ಲ. ಭಾಗ್ಯಲಕ್ಷ್ಮಿ ಯೋಜನೆಯ ಸಾವಿರಾರು ಬಾಂಡ್‌ಗಳು ಫಲಾನುಭವಿಗಳ ಕೈಗೆ ತಲುಪಿಲ್ಲ. ಹಳ್ಳಿಗಳಿಂದ ಪಟ್ಟಣದವರೆಗೆ ಮಹಿಳೆಯರು ಅಂಡಲೆದರೂ ಅನುಕೂಲವಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಬಡ ಮಹಿಳೆಯರು ತೀವ್ರ ನೊಂದಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಎಂದರೆ ಇದೇನಾ? ಪುಟ್ಟ ಮಕ್ಕಳಿಗೆ ಪೂರೈಸುತ್ತಿರುವ ಪೌಷ್ಟಿಕ ಆಹಾರ ತಿನ್ನಲು ಅಯೋಗ್ಯವಾಗಿದೆ. ಇದೆಲ್ಲಾ ಸರಕಾರದ ಕಟ್ಟಳೆಗಳ ನಡುವೆ ಅರ್ಥವಾಗದಂತೆ ನಡೆಯುತ್ತಿದೆ. ಇನ್ನು ಮುಂದಾದರೂ ಇಲ್ಲಿನ ಅಸಡ್ಡೆಗಳು ಮತ್ತು ಭ್ರಷ್ಟಾಚಾರಗಳು ಕಡಿಮೆಯಾದರೆ ಅದಕ್ಕಿಂತ ಸಂತೋಷದ ಸಂಗತಿ ಬೇರೊಂದಿಲ್ಲ.

● ಅಜೇಜ್ ಕಿರುಗುಂದ



ಬಳ್ಳಾರಿ ಕಾಂಗ್ರೈಯಲ್ಲಿ ಕೊಂಡಯ್ಯ ದಿವಾಕರ ಬಾಬು ಕಿತ್ತಾಟ

ಬಳ್ಳಾರಿ ಜಿಲ್ಲಾ ಕಾಂಗ್ರೆಸ್‌ನಲ್ಲಿನ ಒಳಜಗಳ ತಾರಕಕ್ಕೇರಿದೆ. ಇತ್ತೀಚಿನ ಹಲವಾರು ಚುನಾವಣೆಗಳಲ್ಲಿ ನಿರಂತರವಾಗಿ ಸೋಲುತ್ತಾ ಬಿಜೆಪಿಯ ಗೆಲುವಿಗೆ ಪರೋಕ್ಷ ಬೆಂಬಲ ನೀಡುತ್ತಿರುವ ಜಿಲ್ಲಾ ಕಾಂಗ್ರೆಸ್ ಮುಖಂಡರು ಕೆಟ್ಟಮೇಲೂ ಬುದ್ಧಿ ಕಲಿತಂತಿಲ್ಲ.

ಬಳ್ಳಾರಿ ಜಿಲ್ಲಾ ಕಾಂಗ್ರೆಸ್‌ನಲ್ಲಿ ಕೆ.ಸಿ. ಕೊಂಡಯ್ಯ ಮತ್ತು ಎಂ. ದಿವಾಕರ ಬಾಬು ಹೆಸರಲ್ಲಿ ಎರಡು ಬಣಗಳು ಸೃಷ್ಟಿಯಾಗಿವೆ. ಈ ಎರಡು ಗುಂಪುಗಳಲ್ಲಿ ಕೊಂಡಯ್ಯ ಪ್ರಸ್ತುತ ಜಿಲ್ಲಾ ಬಿಜೆಪಿಯ ಚುಕ್ಕಾಣಿ ಹಿಡಿದಿರುವ ಗಣಿಕಳ್ಳ ಜಿ. ಜನಾರ್ದನ ರೆಡ್ಡಿ ವಿರುದ್ಧ ವ್ಯವಸ್ಥಿತವಾಗಿ ದಾಖಲೆಗಳ ಸಮೇತ ಹೋರಾಡುತ್ತ ಪಕ್ಷಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಇನ್ನೊಂದು ಗುಂಪಿನ ದಿವಾಕರ ಬಾಬು ಜಿಲ್ಲಾ ಕಾಂಗ್ರೆಸ್‌ನ ಹಾಲಿ ಅಧ್ಯಕ್ಷ ಮತ್ತು ಮಾಜಿ ಸಚಿವ.

ಈಗ ಜಿಲ್ಲೆಯ 16 ಬ್ಲಾಕ್ ಅಧ್ಯಕ್ಷರು, ವಿವಿಧ ಚುನಾವಣೆಗಳಲ್ಲಿ ಸೋಲುಂಡ ಅಭ್ಯರ್ಥಿಗಳು, ಪಕ್ಷದ ಹಿತೈಷಿಗಳು... ಎಲ್ಲರೂ ಈಗ ದಿವಾಕರ ಬಾಬು ವಿರುದ್ಧ ತಿರುಗಿ ಬಿದ್ದಿದ್ದಾರೆ. ಆದರೆ ಬಾಬು ಮಾತ್ರ ತಾನೇ ಜಿಲ್ಲಾ ಕಾಂಗ್ರೈ ಅಧ್ಯಕ್ಷನಾಗಿರಬೇಕು ಅಂಥ ರಚ್ಚೆ ಹಿಡಿದಿದ್ದಾನೆ. ಆಕಸ್ಮಾತ್ ಅದು ಸಾಧ್ಯವಾಗದಿದ್ದರೆ ನೆರೆಯ ಆಂಧ್ರದ ಗಡೇಕಲ್ಲು ಗ್ರಾಮದಿಂದ ಬಳ್ಳಾರಿಗೆ ಹೊಟ್ಟೆಯಪಾಡಿಗೆ ಬಂದು ಕೋಟ್ಯಾಧೀಶನಾಗಿರುವ ಆಂಜನೇಯಲು ಅಥವಾ ಅಕ್ರಮ-ಅನಧಿಕೃತ ಗಣಿಗಾರಿಕೆಯಲ್ಲಿ ಹಣ ಲೂಟಿ ಮಾಡಿರುವ ವಿ.ಕೆ. ಬಸಪ್ಪ ಅಧ್ಯಕ್ಷರಾಗಲಿ ಎಂದು ದಿವಾಕರ ಬಾಬು ತಂತ್ರ ಹೊಸೆಯುತ್ತಿದ್ದಾನೆ.

ಇತ್ತೀಚೆಗೆ ಬಳ್ಳಾರಿಯ ಸೆಂಟಿನರಿ ಹಾಲ್‌ನಲ್ಲಿ ಕಾಂಗ್ರೈಗರ ಸಭೆಯೊಂದು ನಿಗದಿಯಾಗಿತ್ತು. ಈ ಸಭೆಯಲ್ಲಿ ಕೊಂಡಯ್ಯ ಅವರ ಮೇಲೆ ದಿವಾಕರಬಾಬು ಹಿಂಬಾಲಕರಾದ ಹಲವು ಪಡ್ಡೆ ಹುಡುಗರು ಹಲ್ಲೆ ನಡೆಸಲು ಸಂಚು ನಡೆಸಿದ್ದಾರೆಂಬ ವಿಚಾರ ದಿವಾಕರಬಾಬು ಗುಂಪಿನ ವಿ.ಕೆ. ಬಸಪ್ಪನೇ ಎಲ್ಲೆಡೆ ಹರಡಿಸಿದ್ದ. ತಮ್ಮ ಮೇಲೆ ಹಲ್ಲೆ ನಡೆಯುವ ಮಾಹಿತಿಯನ್ನು ಖಚಿತಪಡಿಸಿಕೊಂಡ ಕೊಂಡಯ್ಯ ಆ ಸಭೆಯನ್ನು ಕೂಡಲೇ ರದ್ದುಪಡಿಸಿದ್ದರು.

ಪರಿಸ್ಥಿತಿ ಹೀಗಿರುತ್ತಲೇ ಕಳೆದ ಜನವರಿ 28ರ ಸಂಜೆ ಬಳ್ಳಾರಿಯ ಬಾಲಾ ರೀಜನ್ಸಿ ಹೋಟಲ್‌ನಲ್ಲಿ ಪಕ್ಷದ ವೀಕ್ಷಕ ಸಗೀರ್ ಅಹ್ಮದ್ ನೇತೃತ್ವದಲ್ಲಿ ಸಭೆಯೊಂದು ನಡೆಯಿತು. ಜಿಲ್ಲಾ ಕಾಂಗ್ರೈಗರು ಗುಂಪುಗುಂಪಾಗಿ ಬಂದು ತಮ್ಮ ಅಹವಾಲು ಸಲ್ಲಿಸುತ್ತಿದ್ದರು. ಸಗೀರ್ ಅಹ್ಮದ್ ಅವರನ್ನು ಮಾತನಾಡಿಸಿ ವೇದಿಕೆಯಿಂದ ಕೆಳಕ್ಕಿಳಿಯುತ್ತಿದ್ದ ದಿವಾಕರಬಾಬು ಎದುರಲ್ಲೇ ಕೊಂಡಯ್ಯ ಅವರ ಬೆಂಬಲಿಗರಾದ ಬಿ. ರಾಂಪ್ರಸಾದ್, ಬೆಣಕಲ್ ಬಸವರಾಜಗೌಡ ಮತ್ತು ಹುಮಾಯೂನ್ ಖಾನ್ ನಿಂತಿದ್ದರು.

ಅವರನ್ನು ಕಂಡಕೂಡಲೇ "ಕೊಂಡಯ್ಯಕಾ ಬೇಜೂಜ್ ಆದ್ಮಿ ಇದರ್ ಕ್ಯೂ ಕಡಾಯ?" ಎಂದು ದಿವಾಕರ ಬಾಬು ಗದರಿಸಿದ್ದಾರೆ. ಆಗ ಹುಮಾಯೂನ್ "ಆಪ್ ಕ್ಯಾ ಐಸಾ ಬಾತ್ ಕರ್ ರಹಾ ಹೈ?" ಎಂದು ದಿವಾಕರ ಬಾಬು ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹುಮಾಯೂನ್ ಜೊತೆಗಿದ್ದ ರಾಂಪ್ರಸಾದ್ ಮತ್ತು ಬೆಣಕಲ್ ಬಸವರಾಜ್‌ಗೌಡ ಕೂಡ "ಏನಣ್ಣಾ ನೀನು ಬಾಯಿಗೆ ಬಂದಂತೆ ಮಾತನಾಡುತ್ತೀಯ? ಏನ್ ಸಮಾಚಾರ?" ಅಂತ ಬಾಬು ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಆಗ ಎಚ್ಚೆತ್ತ ದಿವಾಕರ ಬಾಬು "ನಾನು ನಿಮ್ಮನ್ನು ಬೈದಿಲ್ಲ" ಎಂದು ಆ ಮೂವರನ್ನು ಸಮಾಧಾನ ಮಾಡಿ ಕಾರು ಹತ್ತಿಹೊರಟುಹೋಗಿದ್ದಾರೆ. ಆದರೆ ಅಲ್ಲೇ ಇದ್ದ ಆರು ಯುವ ಪುಂಡರ ಪಡೆ ಹುಮಾಯೂನ್, ಬೆಣಕಲ್ ಬಸವರಾಜಗೌಡ ಮತ್ತು ರಾಂಪ್ರಸಾದ್ ಮೇಲೆ ಏಕಾಏಕಿ ಹಲ್ಲೆ ನಡೆಸಿದ್ದಾರೆ. ಬಾಯಿಗೆ ಬಂದದ್ದನ್ನೆಲ್ಲ ಆಡಿದ್ದಾರೆ. ಈ ಅನಿರೀಕ್ಷಿತ ದಾಳಿಯಿಂದ ಸಹಜವಾಗಿಯೇ ಗಾಬರಿಗೊಂಡ ಮೂವರೂ ಕೂಡಲೇ ಸಮೀಪದಲ್ಲಿರುವ ಕೊಂಡಯ್ಯನವರ ಮನೆಗೆ ಹೋಗಿದ್ದಾರೆ.

ಈ ಬೆಳವಣಿಗೆಯಿಂದ ಕೊಂಡಯ್ಯ ಅವರಿಗೆ ಅಚ್ಚರಿಯಾದರೂ "ಇದರ ಬಗ್ಗೆ ಪೊಲೀಸರಿಗೆ ದೂರು ನೀಡುವುದು ಬೇಡ" ಎಂದು ದಾಳಿಗೊಳಗಾದವರನ್ನು ಸಮಾಧಾನ ಮಾಡಿ ಅವರನ್ನೆಲ್ಲ ವೈದ್ಯರ ಬಳಿ ಕಳುಹಿಸಿದ್ದಾರೆ. ಆದರೆ ದಿವಾಕರಬಾಬು ಸುಮ್ಮನಿರಲಿಲ್ಲ, ದಾಳಿಗೊಳಗಾದ ಹುಮಾಯೂನ್ ಖಾನ್ ಮತ್ತು ಬೆಣಕಲ್ ಬಸವರಾಜ್ ವಿರುದ್ಧ ಜಾತಿನಿಂದನೆ ದೂರು ದಾಖಲಿಸುವಂತೆ ತನ್ನ ಹಿಂಬಾಲಕ ವಿ.ಕೆ. ಬಸಪ್ಪನನ್ನು ಹುಸಲಾಯಿಸಿದ್ದಾರೆ.

ಇದೆಲ್ಲ ಒಂದೆಡೆ ಆಗುತ್ತಿದ್ದರೆ ಈ ಘಟನೆಯಲ್ಲಿ ಅನವಶ್ಯಕವಾಗಿ ಎಂಟ್ರಿ ಕೊಟ್ಟವನೇ ಸಿಐಡಿ ಚಂದ್ರ. "ಬಸವನ್ನ ಕೆಳಾಗ ಹಾಕ್ಕೊಂಡು ಮೂರ್ನಾಲ್ಕು ಉಳ್ಳ್ಯ ಹಾಕಿ ಚೆನ್ನಾಗಿ ವದ್ದಾರೆ. ನಾನೇ ಬಿಡಿಸ್ದೆ. ಇಲ್ಲಾಂದ್ರೆ ಇವತ್ತು ಬಸವನ್ನ ಹೆಣಾ ಬೀಳ್ತಿತ್ತು" ಎಂದು ಕಂಡಕಂಡವರ ಮುಂದೆ ಹೇಳಿ ತನ್ನ ಬಾಯಿಚಪಲ ತೀರಿಸಿಕೊಂಡಿದ್ದಾನೆ. ಈ ವಿಚಾರ ಬೆಣಕಲ್ ಬಸವರಾಜನ ಗುಂಪಿನ ಕಿವಿಗೆ ಹೇಗೋ ತಲುಪಿ ಅದೇ ರಾತ್ರಿ 11 ಗಂಟೆ ಸುಮಾರಿಗೆ ಕೆಲ ಹುಡುಗರು ಈ ಸಿಐಡಿ ಚಂದ್ರನ್ನ ಹಿಗ್ಗಾಮುಗ್ಗ ಥಳಿಸಿದ್ದಾರೆ.

ಇಬ್ಬರಿಗೂ ಅಪಾಯ!

ಕಾಂಗ್ರೈನಲ್ಲಿರುವ ಒಳಜಗಳದಿಂದ ಫಲ ಪಡೆಯಲು ಗಣಿಕಳ್ಳ ಜಿ. ಜನಾರ್ದನ ರೆಡ್ಡಿ ಹವಣಿಸುತ್ತಿದ್ದಾನೆ. ಮೊನ್ನಿನ ಗುದ್ದಾಟದಿಂದಾಗಿ ಕಾಂಗ್ರೈನಲ್ಲಿನ ವಿರೋಧಿ ಬಣಗಳು ಪರಸ್ಪರ ಅಟ್ರಾಸಿಟಿ ಕೇಸ್ ದಾಖಲಿಸುವುದನ್ನೇ ಎದುರು ನೋಡುತ್ತಿದ್ದಾನೆ. ಅಷ್ಟೇ ಅಲ್ಲದೆ, ರೆಡ್ಡಿ ಮುಲಾಜಿನಲ್ಲಿರುವ ಕೆಲ ಪೊಲೀಸ್ ಅಧಿಕಾರಿಗಳು ಕೊಂಡಯ್ಯ ಅವರ ಮನೆ[illegible] ಬಂದು "ಈ ಘಟನೆ ಕುರಿತು ರಾಂಪ್ರಸಾದ್ ಮೂಲ[illegible] ಸ್ಟೇಟ್‌ಮೆಂಟ್ ಪಡೆಯುತ್ತೇವೆ. ಎಫ್‌ಆರ್[illegible] ಮಾಡಿಕೊಳ್ಳುವುದಿಲ್ಲ. ನಮ್ಮ ಮೇಲೆ ಭಾರೀ ಒತ್ತ[illegible] ಇದೆ. ದಯವಿಟ್ಟು ಒಪ್ಪಿಕೊಳ್ಳಿ. ದಿವಾಕರಬಾಬುನ ಒಳಗ[illegible] ಕಳುಹಿಸುತ್ತೇವೆ. ನಮಗೂ ಅದೇ ಬೇಕು" ಎಂದು ದುಂಬಾಲು ಬಿದ್ದಿದ್ದಾರೆ.

ಆದರೆ ಕೊಂಡಯ್ಯ ಅವರು ಅದಕ್ಕೆಲ್ಲ ಅವಕಾ[illegible] ನೀಡಿಲ್ಲ. ಇದರ ಹಿಂದೆ ರೆಡ್ಡಿಯ ಸಂಚಿರುವುದು ಅರಿವಾಗಿ ಜಾಣತನದಿಂದ ಪೊಲೀಸ್ ಅಧಿಕಾರಿಗಳನ್ನು ಕೊಂಡಯ್ಯ ಸಾಗಹಾಕಿದ್ದಾರೆ.

ಕೊಂಡಯ್ಯನವರ ವಿರುದ್ಧ ಸದಾ ಒಂದಲ್ಲ ಒಂದು ಕಾರಣಕ್ಕೆ ಕತ್ತಿ ಮಸೆಯುತ್ತಿರುವ ಮುಂಡ್ಲೂರು ದಿವಾಕರಬಾಬು ಎಚ್ಚೆತ್ತುಕೊಳ್ಳಬೇಕಿದೆ. ತಾನು ಹೀಗೆ ಮುಂದುವರೆದರೆ ಮುಂದೆ ಬಳ್ಳಾರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಮಾತ್ರವಲ್ಲ ತಾನೂ ನಿರ್ನಾಮವಾಗುತ್ತೇನೆ ಎಂಬುದನ್ನು ದಿವಾಕರ ಬಾಬು ಅರಿಯಬೇಕಿದೆ.

• ವರದಿಗಾರ

ಯಾರು ಈ ಸಿಐಡಿ ಚಂದ್ರ?

ಈ ಸಿಐಡಿ ಚಂದ್ರನ ಹಿಂದೆ ದೊಡ್ಡ ವೃತ್ತಾಂತವೇ ಇದೆ. ಬಿಜೆಪಿ ಪಾಳೆಯದಲ್ಲಿಯ ರಹಸ್ಯಗಳನ್ನು ಸಂಗ್ರಹಿಸಿ ದಿವಾಕರಬಾಬುಗೆ ರವಾನೆ ಮಾಡುತ್ತಲೇ ದಿವಾಕರಬಾಬುನ ಕ್ಯಾಂಪ್‌ನಲ್ಲಿ ನಡೆಯುತ್ತಿರುವ ಎಲ್ಲಾ ರಹಸ್ಯಗಳನ್ನು ಅವರ ವಿರೋಧಿಗಳಿಗೆ ನೀಡಿ ಜಿಲ್ಲೆಯಲ್ಲಿ ಕಾಂಗ್ರೆಸ್ ಮಣ್ಣು ಮುಕ್ಕುವಂತೆ ನೋಡಿಕೊಂಡು ಬಿಜೆಪಿಯ ಏಜೆಂಟ್ ಆಗಿ ಕೆಲಸ ಮಾಡುತ್ತಿರುವ ಕರಾಮತ್ತುಗಾರ ಈ ಚಂದ್ರ. ಈತನ ಇಂತಹ ಕೇಡಿ ಕೆಲಸಗಳಿಂದಲೇ ಇವನಿಗೆ 'ಸಿಐಡಿ' ಎಂಬ ಅಡ್ಡ ಹೆಸರು ತಾಗಿಕೊಂಡಿದೆ.

ಹಿಂದೊಂದು ಸಾರಿ ಈ ಚಂದ್ರಬಾಬುನಿಂದಲೇ ಒದೆ ತಿಂದಿದ್ದ ಈಗ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಎನ್. ಸೂರ್ಯನಾರಾಯಣ ರೆಡ್ಡಿಯ ಕ್ಯಾಂಪನ್ನು ಸೇರಿಕೊಂಡು ಏಕಕಾಲದಲ್ಲಿ ಬಿಜೆಪಿ ಮತ್ತು ದಿವಾಕರಬಾಬು ಪರ ಸೀಕ್ರೆಟ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದಾನೆ ಈ ಚಂದ್ರ. ಈತ ಯಾವುದೇ ಪಕ್ಷಕ್ಕೆ ಹೋದರೂ ಅಲ್ಲಿನ ನಿಷ್ಠಾವಂತರು, ದಕ್ಷರು, ಬದ್ಧತೆಯಿಂದ ಕೆಲಸ ಮಾಡುವವರನ್ನೆಲ್ಲ ನಿರಂತರವಾಗಿ ಹಣಿಯುತ್ತಾನೆ. ಯಾವುದೇ ಅರ್ಹತೆ ಇಲ್ಲದಿದ್ದರೂ ಎಲ್ಲರಿಂದ ಡೊಗ್ಗು ಸಲಾಮು ನಿರೀಕ್ಷಿಸುವ ಚಂದ್ರ ಕಾಲಿಟ್ಟಲ್ಲಿ ಬೆಂಕಿ, ಭಸ್ಮ ಖಚಿತ. ಆದ್ದರಿಂದ 'ಸಿಐಡಿ' ಚಂದ್ರ ಎನ್ನುವುದರ ಜೊತೆ ಈತ ಐರನ್‌ಲೆಗ್ ಎನ್ನುವ ಕೀರ್ತಿಯನ್ನೂ ಹೊಂದಿದ್ದಾನೆ.

ಜಿಲ್ಲೆಯಲ್ಲಿ ಜೆಡಿಎಸ್‌ಅನ್ನು ಸಂಘಟಿಸಬೇಕು, ಪಕ್ಷವನ್ನು ಜಿಲ್ಲೆಯಲ್ಲಿ ಅಧಿಕಾರಕ್ಕೆ ತರಬೇಕು ಎಂದು ಹಂಬಲಿಸುತ್ತಿರುವ ಸೂರ್ಯನಾರಾಯಣ ರೆಡ್ಡಿ ಇಂತಹ ಕಳ್ಳ - ಸಿಐಡಿ, ಐರನ್ ಲೆಗ್ ಬಗ್ಗೆ ಎಚ್ಚೆತ್ತುಕೊಳ್ಳಬೇಕು. ಇಲ್ಲವಾದಲ್ಲಿ ದಿವಾಕರಬಾಬುಗೆ ಆದ ಗತಿಯೇ ಈ ರೆಡ್ಡಿಗೂ ಖಚಿತ.

ಡಿಸಿಸಿ ಅಧ್ಯಕ್ಷರು ಯಾರಾದರೆ ಪಕ್ಷಕ್ಕೆ ಒಳಿತು?

ಕಮ್ಮಾ ಜನಾಂಗದ ಎಂ. ದಿವಾಕರಬಾಬು ಈಗ ಸವಕಲು ನಾಣ್ಯ. ಹೀಗಾಗಿ ಪಕ್ಷ ಕೂಡ ಚೈತನ್ಯ ಪಡೆಯುತ್ತಿಲ್ಲ. ಸ್ವಚ್ಛ ಕನ್ನಡ ಮಾತನಾಡಲು ಬಾರದ, ಪಕ್ಷದ ಬಹುತೇಕ ಮುಖಂಡರ ತೀವ್ರ ವಿರೋಧ ಕಟ್ಟಿಕೊಂಡಿರುವ ದಿವಾಕರಬಾಬು ಡಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಇರಲು ಅರ್ಹತೆ ಪಡೆದಿಲ್ಲ. ಅಷ್ಟೇ ಅಲ್ಲ, ಮೊನ್ನೆ ನಡೆದ ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಬಳ್ಳಾರಿ ತಾಲೂಕಿನ ಒಂದು ಸ್ಥಾನವನ್ನೂ ಈತನಿಂದ ಗೆಲ್ಲಲಾಗಲಿಲ್ಲ. ಇನ್ನು ತಾಲೂಕು ಪಂಚಾಯತಿ ಅಭ್ಯರ್ಥಿಗಳು ತಮ್ಮ ಸ್ವಸಾಮರ್ಥ್ಯದಿಂದಲೇ ಗೆಲುವು ಸಾಧಿಸಿದರು.

ಪದೇಪದೆ ಲಿಂಗಾಯತರು - ಕುರುಬರು - ವಾಲ್ಮೀಕಿಗಳನ್ನು ಬಾಯಿಗೆ ಬಂದಂತೆ ವೇದಿಕೆಗಳಲ್ಲಿ ಜಾತಿ ಹಿಡಿದು ಹಿಗ್ಗಾಮುಗ್ಗ ಬೈಯುವ ದಿವಾಕರಬಾಬುಗೆ ಒಣ ಧಿಮಾಕು ಇದೆ. ಪಕ್ಷದ ಕಾರ್ಯಕರ್ತರು ನಿತ್ಯ ಬೆಳಗಾದರೆ ಈತನ ಮನೆಯ ಮುಂದೆ ಮಂದಿಯೂರಿ ನಿಲ್ಲಬೇಕು. ಹೀಗೆ ತನ್ನನ್ನು ಹುಡುಕಿಕೊಂಡು ಬರುವ ಪಕ್ಷದ ಸದಸ್ಯರ ವಯಸ್ಸು ವಿದ್ಯಾರ್ಹತೆ, ಜ್ಞಾನ, ಸೇವೆ, ಜಾತಿಗಳನ್ನು ನೋಡದೇ 'ನಾನೇ ಮೇಧಾವಿ, ನನ್ನನ್ನು ಕೇಳಿಯೇ ಸೂರ್ಯ ಹುಟ್ಟುತ್ತಾನೆ' ಎನ್ನುವ ರೀತಿಯಲ್ಲಿ ಎದುರಿನವರನ್ನು ಏಕವಚನದಲ್ಲೋ, ಜಾತಿಯನ್ನು ಹೀಯಾಳಿಸಿಯೋ ಮಾತನಾಡುವುದು ಈತನ ಅಹಂಕಾರಕ್ಕೆ ಸಾಕ್ಷಿಯಾಗಿದೆ. ದಿವಾಕರಬಾಬುವಿನ ಅಪರಾವತಾರವೇ ಆಂಜನೇಯಲು. ಆಂಧ್ರದ ಗಡೇಕಲ್ಲು ಈತನ ಊರು. ವಿವಿಧ ಜನರಿಗೆ ತಿರುಪತಿ ನಾಮ ಇಡುವ ಮೂಲಕವೇ ಕೋಟ್ಯಾಂತರ ರೂಪಾಯಿ ಮಾಡಿಕೊಂಡಿರುವ ಈ ಆಂಜನೇಯಲು ಬಾಯಿ ತೆಗೆದರೆ 'ವಾನೆಮ್ಮ ನರಕೇಸ್ತಾನ್' ತರಹದ ಮಂತ್ರ ಉದುರುತ್ತದೆ. ಅನೇಕ ಸಂದರ್ಭಗಳಲ್ಲಿ ಸೋನಿಯಾ, ರಾಹುಲ್,.ಪ್ರಿಯಾಂಕ, ಸಿದ್ಧರಾಮಯ್ಯ ಕುರಿತು ಇಂತಹ ಮಂತ್ರ ಪ್ರೋಕ್ಷಣೆ ಮಾಡಿದ್ದಾನೆ. ಸ್ವಯಂಘೋಷಿತ ನಾಯಕ, ಹುಟ್ಟು ಹೋರಾಟಗಾರ ಎನ್ನುವ ಫೀಲಿಂಗ್‌ನಲ್ಲಿ ಡಿಸಿಸಿ ಅಧ್ಯಕ್ಷಸ್ಥಾನದ ಕನಸು ಕಾಣುತ್ತಿರುವ ಈ ಆಂಜನೇಯಲು ಜಾತಿ, ಭಾಷೆ, ನಾಯಕತ್ವ ಗುಣ, ಸಂಘಟನಾ ಶಕ್ತಿ ದೂರಾಲೋಚನೆ ಎಲ್ಲವುಗಳಲ್ಲೂ ಶೂನ್ಯ. ಅಷ್ಟೇ ಅಲ್ಲ, ಪಕ್ಷದ ದುಡ್ಡು ಮತ್ತು ಡಿಕೆಶಿ ಹೆಸರಲ್ಲೇ ದೊಡ್ಡವನಾಗಿರುವ ಈತ ಮುಂದಿನ ಬಾರಿ ತಾನೇ ಬಳ್ಳಾರಿ ವಿಧಾನಸಭೆಯ ಕಾಂಗ್ರೆಸ್ ಎಂಬಂತೆ ಪೋಸು ಕೊಡುತ್ತಿದ್ದಾನೆ. ಇಂಥವನು ಪಕ್ಷದ ಅಧ್ಯಕ್ಷನಾದರೆ ಜಿಲ್ಲೆಯ ಪಶ್ಚಿಮ ತಾಲೂಕುಗಳಲ್ಲಿ ಪುನಃಶ್ಚೇತನಗೊಳ್ಳುತ್ತಿರುವ ಕಾಂಗ್ರೆಸ್ ಧೂಳೀಪಟವಾಗುತ್ತದೆ. ಗಣಿ ರೆಡ್ಡಿಗಳ ಜೊತೆ ಪರೋಕ್ಷ ಒಪ್ಪಂದ ಮಾಡಿಕೊಂಡಿರುವ ಈ ಮನೆಮುರುಕನ ತಿಕ್ಕಲು ಕನಸುಗಳು ಸಾವಿರ ಸಾವಿರ.

ಆಂಜನೇಯಲುಗಿಂತ ಎಂ.ಪಿ.ರವೀಂದ್ರ ಉತ್ತಮ ಅಭ್ಯರ್ಥಿ. ಜಾತಿ, ಹಣ, ಸಂಘಟನೆ, ತಂತ್ರಗಾರಿಕೆ, ಅನುಭವ ವಾಸ್ತವಾಂಶಗಳನ್ನು ಅರ್ಥಮಾಡಿಕೊಳ್ಳುವ ತಾಳ್ಮೆ - ಸಂಯಮವನ್ನು ರವೀಂದ್ರ ಹೊಂದಿದ್ದಾರೆ. ಮಾತ್ರವಲ್ಲ, ಗಣಿ ಕಳ್ಳ ರೆಡ್ಡಿಗಳ ವಿರುದ್ಧ ಆರಂಭದಿಂದಲೂ ಹೋರಾಡುತ್ತಲೇ ಬಂದಿದ್ದಾರೆ. ಇಂಥವರಿಗೆ ಅಧ್ಯಕ್ಷ ಗಾದಿ ವಹಿಸಿದರೆ ಕಾಂಗ್ರೆಸ್ ಒಂದಷ್ಟು ಉದ್ಧಾರವಾಗಬಹುದೆಂಬ ನಿರೀಕ್ಷೆ ಹಲವರಲ್ಲಿದೆ.

ಗೆಳೆಯ ಕುಮಾರ ಚಲ್ಯ ಕುರಿತು


ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ. ಶಿವಕುಮಾರ್ ಚಲ್ಯ 'ಲಂಕೇಶ್' ಮೇಲೆ ಕೊಂಚ ಬೇಸರಗೊಂಡಿದ್ದಾರೆ.

ಈಗೊಂದೆರಡು ವಾರದ ಹಿಂದಿನ ಲಂಕೇಶ್ ಸಂಚಿಕೆಯ ಭೂತ್ಕೇರಿ ಎನ್ನುವ ತಮಾಷೆ ಕಾಲಂನಲ್ಲಿ ಶಿವಕುಮಾರ ಚಲ್ಯರ ಕುರಿತು ಕೊಂಚ ಮೆಚ್ಚುಗೆ, ಕೊಂಚ ಗೇಲಿಯ ಒಂದು ಬರಹ ಪ್ರಕಟವಾಗಿತ್ತು.

ಈ ಅಂಕಣ ಬರೆಯುವ ಕಿಡಿಗೇಡಿಯು ಶಿವಕುಮಾರ ಚಲ್ಯರ ಹೆಸರನ್ನು ಕೊಂಚ ಚಿಕ್ಕದಾಗಿಸಿ, ಅವರ ಕಾವ್ಯನಾಮವಾದ ಕುಮಾರ ಚಲ್ಯ ಎಂದು ಬರೆದದ್ದೇ ಅಲ್ಲದೆ ವಿನಾಕಾರಣ ಆ ಕಾವ್ಯನಾಮವನ್ನು ಮತ್ತೂ ಕಿರಿದಾಗಿಸಿದ್ದು ಚಲ್ಯರ ಬೇಸರಕ್ಕೆ ಕಾರಣವಾಗಿರುವಂತಿದೆ.

ಬರಹಗಾರರಿಗೆ ಕಾವ್ಯನಾಮ ಅನಿವಾರ್ಯವೇನಲ್ಲ, ಅನಗತ್ಯವೆಂತಲೂ ಇಲ್ಲ. ಎಲ್ಲರಿಗೂ 'ಕುವೆಂಪು' ತರದ ಕಾವ್ಯನಾಮ ಒದಗಿಬರುವುದೂ ಇಲ್ಲ. ವಿವಿಯ ಅಕಾಡೆಮಿಕ್ ಹಾಗೂ ಹೊರಗಿನ ಸಾಂಸ್ಕೃತಿಕ ಪರಿಸರದಲ್ಲಿ ಕಾವ್ಯನಾಮಗಳನ್ನು ತೇಲಿಬಿಡುವಾಗ ಗೊಂದಲವಾಗದಂತೆ ಸಭ್ಯರು ಎಚ್ಚರದಿಂದಿರಬೇಕಷ್ಟೆ. ಅದೇನೇ ಇರಲಿ, ಕನ್ನಡ ಕಾವ್ಯ ಜಾನಪದ ಹಾಗೂ ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಶ್ರದ್ಧೆಯಿಂದ ಕೆಲಸ ಮಾಡುತ್ತಿರುವ ಹಾಗೂ ವಿದ್ಯಾರ್ಥಿಗಳ ಮೆಚ್ಚಿನ ಶಿಕ್ಷಕರೂ ಆಗಿರುವ ಕುಮಾರ ಚಲ್ಯರು ತಮ್ಮ ಕಾರ್ಯವನ್ನು ಹಿಂದಿನ ಸ್ಫೂರ್ತಿಯಲ್ಲೇ ಮುಂದುವರೆಸಲಿ..

ಚಲ್ಯರ ಬರಹಗಳನ್ನು ಲಂಕೇಶ್‌ಗಾಗಿ ನಿರೀಕ್ಷಿಸುತ್ತಾ....



• ಪಾರ್ವತೀಶ

ದಿನಾಂಕ 16.1.2011 ರಂದು ಶಿವಮೊಗ್ಗದಲ್ಲಿ ಜಿಲ್ಲಾ
ದ ಸಾಹಿತ್ಯ ಪರಿಷತ್ತಿನ ವತಿಯಿಂದ ಉರ್ದು ಶಾಲೆಗಳಲ್ಲಿ
ದ-ಉರ್ದು ಭಾಷಾ ಕಲಿಕೆ ಎಂಬ ಚಿಂತನಾ ಸಮಾವೇಶ
ನ್ನ ಹಮ್ಮಿಕೊಳ್ಳಲಾಗಿತ್ತು. ಕನ್ನಡ ಅಭಿವೃದ್ಧಿ ಪ್ರಾಧಿಕಾರ,
ಗಳೂರು, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ
ಗೂ ಸುನ್ನಾ ವಿದ್ಯಾಸಂಸ್ಥೆ ಶಿಕಾರಿಪುರ ಈ ಮೂರು
ಸ್ಥೆಗಳು ಈ ಸಮಾವೇಶಕ್ಕೆ ಬೆಂಬಲ ನೀಡಿದ್ದವು. ಈ
ಮಾವೇಶದ ಉದ್ಘಾಟನೆಗಾಗಿ ನನ್ನನ್ನು ಆಹ್ವಾನಿಸಲಾಗಿತ್ತು.

ಇಂತಹ ಒಂದು ಚಿಂತನಾ ಸಮಾವೇಶವನ್ನು ಹಮ್ಮಿ
ಳ್ಳಲು ವಿದ್ಯಾರ್ಥಿಗಳ ಕುರಿತು ಕೆಲವು ಶಿಕ್ಷಕರಿಗಿದ್ದ
ಜಿಯೇ ಕಾರಣವಾಗಿತ್ತು. ಉಪನ್ಯಾಸಕರಾದ ಡಾ.
ರಾಜ್ ಚಂದ್ರಗುತ್ತಿ, ಪ್ರೊ. ದಾದಾಪೀರ್, ಕಲೀಮುಲ್ಲಾ
ಮ ಈ ವಿದ್ಯಾರ್ಥಿಗಳ ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು
ಗೆ ವಿವರಿಸಿದರು. ಶಿವಮೊಗ್ಗ ಜಿಲ್ಲೆಯ ಹಲವಾರು
ಲೆಗಳ ಶಿಕ್ಷಕ, ಶಿಕ್ಷಕಿಯರನ್ನು ಈ ಸಮಾವೇಶಕ್ಕೆ
ಆಂತ್ರಿಸಲಾಗಿತ್ತು. ಸರ್ಫರಾಜ್ ಚಂದ್ರಗುತ್ತಿಯವರು ತಮ್ಮ
ಕಾಳಜಿಯ ಕಾರಣವನ್ನು ಸಭೆಗೆ ವಿವರಿಸಿದರು.

ಪದವಿಪೂರ್ವ ತರಗತಿಯ ದ್ವಿತೀಯ ವರ್ಷದ
ಶಾಂಶ ಆದೇ ತಾನೇ ಪ್ರಕಟವಾಗಿತ್ತು. ಕಾಲೇಜಿನ
ನ ಬಳಿಯಲ್ಲಿ ಬುರ್ಖಾ ತೊಟ್ಟ ಹಲವಾರು ವಿದ್ಯಾರ್ಥಿ

ನೀಡುವಲ್ಲಿ ಹಿಂದೆ ಬೀಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳ ಕಲಿಕೆ ಭಾಷೆಗಳನ್ನು ಕಲಿಯುವುದಕ್ಕೇ ವ್ಯಯವಾಗಿ ಅವರು ಗಣಿತ ಮತ್ತು ವಿಜ್ಞಾನದಲ್ಲೂ ಹಿಂದೆ ಬೀಳುತ್ತಾರೆ.

ಕನ್ನಡ ಮಾಧ್ಯಮದಲ್ಲಿ ಕಲಿತ ಮಕ್ಕಳಿಗೂ ಪಿಯುಸಿಯಲ್ಲಿ ವಿಜ್ಞಾನ ಕಲಿಯಲು ಸಾಧ್ಯವೇ ಇಲ್ಲ ಎಂಬಂತಾಗಿದೆ. ಅದಕ್ಕಾಗಿ ದುಬಾರಿ ವೆಚ್ಚದ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಪ್ರಾರಂಭವಾದವು. ಆ ಶಾಲೆಗಳ ಮೇಲೆ ಸರ್ಕಾರಕ್ಕೆ ಯಾವ ನಿಯಂತ್ರಣವೂ ಇಲ್ಲ. ಒಂದು ತರಗತಿಯಲ್ಲಿ ನೂರರವರೆಗೂ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದು ಒಂದೆಡೆಯಾದರೆ ಈ ಶಾಲೆಗಳಲ್ಲಿ ಶಿಕ್ಷಕ ತರಬೇತಿ (ಟಿಸಿಎಚ್, ಬಿಎಡ್) ಪಡೆಯದವರು ಅಧ್ಯಾಪಕರಾಗಿರುವುದು ಇನ್ನೊಂದೆಡೆ. ಮಕ್ಕಳ ಶೈಕ್ಷಣಿಕ ಪ್ರಗತಿಯ ಕುರಿತು ಇವರಿಂದ ಹೆಚ್ಚಿನ ಸಾಧನೆಯನ್ನೇನೂ ಮಾಡಲಾಗುವುದಿಲ್ಲ. ಹೀಗಾಗಿ ಇಂದು ಹೈಸ್ಕೂಲುಗಳಲ್ಲಿ ಕಲಿಯುತ್ತಿರುವ ಮಕ್ಕಳು ಕನ್ನಡ, ಇಂಗ್ಲಿಷ್, ಹಿಂದಿ ಎಲ್ಲಾ ಭಾಷೆಗಳಲ್ಲೂ ಹಿಂದೆ ಬೀಳುತ್ತಾರೆ. ಅವರ ಪರಿಸ್ಥಿತಿ ಅತ್ತ ಕನ್ನಡವೂ ಇಲ್ಲ ಇತ್ತ ಇಂಗ್ಲಿಷೂ ಇಲ್ಲ ಎಂಬಂತಾಗಿದೆ. ಇಂತಹ ವಿದ್ಯಾರ್ಥಿಗಳಿಗೆ ವಿಜ್ಞಾನ ಕಲಿಯಲು ಸೀಟು ದೊರೆಯುವುದೂ ಇಲ್ಲ. ಇದರ ಪರಿಣಾಮವೆಂದರೆ ವಿಜ್ಞಾನದಲ್ಲಿ ಉನ್ನತ ಶಿಕ್ಷಣ ನೀಡಲು ಅಧ್ಯಾಪಕರೇ ದೊರೆಯುವುದಿಲ್ಲ ಎಂಬ ಮಾತುಗಳೂ ಕೇಳಿಬರುತ್ತಿದೆ. ದೇಶಾದ್ಯಂತ

> ಉರ್ದು ಭಾಷೆ ಮುಸ್ಲಿಮರ ಭಾಷೆ ಎಂಬ ತಪ್ಪು ಕಲ್ಪನೆ ಮುಸ್ಲಿಮರಲ್ಲೂ ಇದೆ. ಮುಸ್ಲಿಮೇತರರಲ್ಲೂ ಇದೆ. ಇತರ ಎಲ್ಲಾ ಭಾಷೆಗಳಂತೆ ಉರ್ದು ಕೂಡಾ ಇಂಡಿಯಾದ ಒಂದು ಭಾಷೆ ಎಂದು ತಿಳಿಯಬೇಕೇ ಹೊರತು ಅದಕ್ಕೆ ಒಂದು ಧಾರ್ಮಿಕ ಸಮುದಾಯದ ಹಣೆಪಟ್ಟಿ ನೀಡಬೇಕಾಗಿಲ್ಲ. ನಮ್ಮ ಭಾಷಾಂಧತೆಯಾಗಲಿ, ಮತಾಂಧತೆಯಾಗಲಿ ನಮ್ಮ ಮಕ್ಕಳ ಭವಿಷ್ಯಕ್ಕೆ ತೊಡಕಾಗಬಾರದು. ಶೈಕ್ಷಣಿಕವಾಗಿ ಹಿಂದುಳಿದವರ ತಲೆಯೊಳಗೆ ಮತಾಂಧತೆ ತುಂಬಿ ಅವರ ಮೆದುಳು ತೊಳೆದು ಅವರನ್ನು ಕೋಮುವಾದಿಗಳಾಗಿಸುವುದು ಸುಲಭ.

ಮಾತೃಭಾಷೆಯಾಗಿ ಉಳ್ಳವರಾಗಿದ್ದಾರೆ. ಬಾಕಿ ಪಂಥದವರು ಎಲ್ಲಾ ರಾಜ್ಯಗಳಲ್ಲೂ ಆಯಾ ರಾಜ್ಯ ಭಾಷೆಗಳನ್ನೇ ಮಾತೃಭಾಷೆಯಾಗಿಸಿಕೊಂಡಿದ್ದಾರೆ. ತಮಿಳು, ತೆಲುಗು, ಮರಾಠಿ, ಗುಜರಾತಿ, ಕನ್ನಡ ಮುಂತಾದ ಎಲ್ಲ ಭಾಷೆಗಳನ್ನಾಡುವ ಮುಸ್ಲಿಮರೂ ಇದ್ದಾರೆ. ಕೇರಳದ ಮುಸ್ಲಿಮರ ಉರ್ದು ಭಾಷೆಯನ್ನು ತಿರುಗಿಯೂ ನೋಡಲಾರರು. ಹೀಗಾಗಿಯೇ ಕೇರಳ ಮತ್ತು ತಮಿಳುನಾಡಿನಲ್ಲಿ ಕೋಮುವಾದವನ್ನು ಬೆಳೆಸಲು ಸಾಧ್ಯವಾಗಿಲ್ಲ. ಆದರೆ ಇಂದಿನ ಮತಾಂಧತೆಯಿಂದಾಗಿ ಮುಸ್ಲಿಮರನ್ನು ಉರ್ದು ಭಾಷೆ ಕಲಿಯಲು ಪ್ರೇರೇಪಿಸಿದ ಕಾರಣ ಇತರ ಭಾಷೆ ಮೂಲೆಗೊತ್ತರಿಸಲ್ಪಡುವುದೂ ಇದೆ. ಕಾಶ್ಮೀರಿ ಭಾಷೆಯಲ್ಲಿ ಸಾಹಿತ್ಯ ಕೃತಿ ರಚಿಸುತ್ತಿದ್ದ ಮುಸ್ಲಿಮರು ಇತ್ತೀಚೆಗೆ ಉರ್ದು ಭಾಷೆಯಲ್ಲಿ ಬರೆಯಲಾರಂಭಿಸಿದ್ದು ಹಿಂದೂಗಳು ಹಿಂದಿ ಭಾಷೆಗೆ ಅಂಟಿಕೊಳ್ಳಲಾರಂಭಿಸಿ ಕಾಶ್ಮೀರಿ ಭಾಷೆ ಮೂಲೆಗೊತ್ತರಿಸಲ್ಪಡುತ್ತಿದೆಯೆಂದೂ ಅಕಾಡೆಮಿ ಕಾರ್ಯಕ್ರಮವೊಂದರಲ್ಲಿ ಕಾಶ್ಮೀರದಿಂದ ಬಂದವರೊಬ್ಬರು ಹೇಳಿದ್ದರು. ಕರ್ನಾಟಕದಲ್ಲಿ ಕನ್ನಡಕ್ಕೆ ಅಂತಹ ಪರಿಸ್ಥಿತಿ ಬರಲಾರದಾದರೂ ಮುಸ್ಲಿಮರು ಉರ್ದುವಿಗಂಟಿಕೊಂಡರೆ ಆ ಮಕ್ಕಳ ಭವಿಷ್ಯ ನಾಶವಾಗಬಹುದು. ಇಂದು ಎಲ್ಲರೂ ಉದ್ಯೋಗವನ್ನರಸಿಕೊಂಡು ಕೊಲ್ಲಿ ರಾಷ್ಟ್ರಗಳಿಗೆ ಪ್ರಯಾಣ ಮಾಡುತ್ತಾರೆ. ಅಲ್ಲಿ ಉತ್ತಮ ಉದ್ಯೋಗದಲ್ಲಿರುವವರು ಅಮೆರಿಕಾ, ಇಂಗ್ಲೆಂಡ್ ಮುಂತಾದ ವಿದೇಶೀಯರು. ನಮ್ಮ ದೇಶದವರು ಅವರಿಗಿಂತ ಕೆಳಗಿನ ಉದ್ಯೋಗಗಳಲ್ಲಿದ್ದಾರೆ. ಪದವಿ ಇಲ್ಲದ ಸಮನಾದ ಶಿಕ್ಷಣವಿಲ್ಲದ ನಮ್ಮ ನಾಡಿನ ಮುಸ್ಲಿಮರು ತೀರಾ ಕೆಳಮಟ್ಟದ ಕೂಲಿ ಕಾರ್ಮಿಕರಾಗಿ ಅಥವಾ ಚಿಕ್ಕಪುಟ್ಟ ವ್ಯಾಪಾರ ಮಾಡಿಕೊಂಡು ಕಷ್ಟದಿಂದ ಬದುಕುತ್ತಿರುವುದನ್ನು ನಾನು ಕಂಡೆ.



ಭಾಷಾಂಧತೆ, ಮತಾಂಧತೆ ಮಕ್ಕಳ ಭವಿಷ್ಯಕ್ಕೆ ತೊಡಕಾಗಬಾರದು

ಇಂದು ಪಿಯು ಕಾಲೇಜಿನಲ್ಲಿ ಉರ್ದು ಭಾಷೆಗೆ ಅವಕಾಶವಿಲ್ಲದ ಕಾರಣ, ಕಾಲೇಜಿಗೆ ಹೋಗಿ ಪದವಿ ಪಡೆದುಕೊಂಡು ತಮ್ಮ ಭವಿಷ್ಯವನ್ನು ಉತ್ತಮ ಪಡಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯಿಂದಿದ್ದ ಈ ವಿದ್ಯಾರ್ಥಿನಿಯರು ಭಾಷಾ ಸಮಸ್ಯೆಯಿಂದಾಗಿ ತಮ್ಮ ಶಿಕ್ಷಣವನ್ನೇ ಸ್ಥಗಿತಗೊಳಿಸಬೇಕಾಯಿತು. ಕನ್ನಡ ಸುಲಭದ ಭಾಷೆಯಾಗಿದ್ದು ಕಲಿಕೆಯ ಇಚ್ಛಾಶಕ್ತಿ ಇದ್ದರೆ, ಪ್ರಾಥಮಿಕ ತರಗತಿಗಳಲ್ಲೇ ಕಲಿಯಲಾರಂಭಿಸಿದರೆ, ಕನ್ನಡವನ್ನು ಸುಲಭದಲ್ಲಿ ಕಲಿಯಬಹುದು. ಆದರೆ ಉರ್ದು ಶಾಲೆಗಳಲ್ಲಿ ಕನ್ನಡ ಪಠ್ಯಪುಸ್ತಕಗಳೇ ದೊರೆಯುತ್ತಿಲ್ಲವೆಂದರೆ ಕನ್ನಡ ಕಲಿಯುವುದಾದರೂ ಹೇಗೆ ಎಂಬುದು ಸಭಿಕರೊಬ್ಬರ ಪ್ರಶ್ನೆಯಾಗಿತ್ತು. ಉರ್ದುವನ್ನು ಮೂಲೆಗೊತ್ತರಿಸಲು ಇದು ಕನ್ನಡಿಗರ ಹುನ್ನಾರವಾಗಿರಬಹುದು ಎಂಬ ಸಂದೇಹವನ್ನೂ ಉರ್ದು ಭಾಷಿಕರು ಹೊರಹಾಕಿದರು. ತಮ್ಮ ಈ ಭಾಷಾ ಪ್ರೇಮವೇ ತಮ್ಮ ಮಕ್ಕಳ ಭವಿಷ್ಯವನ್ನು ಮೊಟಕುಗೊಳಿಸುತ್ತಿದೆ ಎಂಬುದೂ ಇವರಿಗೆ ಅರ್ಥವಾಗುತ್ತಿಲ್ಲ.

ನನಗೆ ಈ ಭಾಷಾ ಪ್ರೇಮವೇ ಅರ್ಥವಾಗುತ್ತಿಲ್ಲ. ನನ್ನ ಮಾತೃಭಾಷೆ ಮಲಯಾಳವಾಗಿದ್ದರೂ ನಾನು ಮತ್ತು ನನ್ನ ಅಣ್ಣತಮ್ಮಂದಿರೆಲ್ಲರೂ ಶಿಕ್ಷಣ ಪಡೆದದ್ದು ಕನ್ನಡದಲ್ಲಿ. ನನ್ನ ಹೆತ್ತವರಿಗೆ ಶಿಕ್ಷಣ ಮುಖ್ಯವಾಗಿತ್ತೇ ಹೊರತು ಭಾಷೆ ಮುಖ್ಯವಾಗಿರಲಿಲ್ಲ. ಹೀಗಾಗಿ ಮನೆಯ ಸಮೀಪದ ಕನ್ನಡ ಶಾಲೆಯಲ್ಲಿ ನಮ್ಮ ವ್ಯಾಸಂಗ ನಡೆಯಿತು.

ನಮ್ಮ ಭಾಷಾಂಧತೆಯಾಗಲಿ, ಮತಾಂಧತೆಯಾಗಲಿ ನಮ್ಮ ಮಕ್ಕಳ ಭವಿಷ್ಯಕ್ಕೆ ತೊಡಕಾಗಬಾರದು. ಶೈಕ್ಷಣಿಕವಾಗಿ ಹಿಂದುಳಿದವರ ತಲೆಯೊಳಗೆ ಮತಾಂಧತೆ ತುಂಬಿ ಅವರ ಮೆದುಳು ತೊಳೆದು ಅವರನ್ನು ಕೋಮುವಾದಿಗಳಾಗಿಸುವುದು ಸುಲಭ. ನಮಗೆ ಎಲ್ಲವೂ 'ಅಲ್ಲಿ' ದೊರೆಯಲಿದೆಯೆಂದು ಮೇಲಕ್ಕೆ ಕೈ ತೋರಿಸುತ್ತಾ, ಇಲ್ಲಿ ಪ್ರಾರ್ಥನೆ ಮಾಡುತ್ತಾ ದಿನಗಳೆಯಬೇಕೆಂದು ಹೇಳುತ್ತಾ ಮಹಿಳೆಯರನ್ನು ನಿಷ್ಕ್ರಿಯರಾಗಿಸಬಹುದು. ಆದರೆ 'ಅಲ್ಲಿ'ಗೆ ಹೋಗುವವರೆಗೆ ಇಲ್ಲಿ ನಾವು ಮನುಷ್ಯರಂತೆ, ನೆರೆಹೊರೆಯವರೊಡನೆ ಹೊಂದಿಕೊಂಡು ಬಾಳಬೇಕು ಎಂಬ ಪಾಠವನ್ನು ಹೇಳಿಕೊಡುತ್ತಾರಾ? ಕೋಮು ಸೌಹಾರ್ದವೆಂಬುದು ಮೇಲ್ಭಾಗದ ಹರಿವು ಮಾತ್ರ. ಒಳಪ್ರವಾಹದಲ್ಲಿ ಕೋಮುವಾದವೇ ತುಂಬಿಕೊಂಡಿದೆ. ಆರು ವರ್ಷದ ಹೆಣ್ಣು ಮಗುವಿಗೂ ತಲೆ ತುಂಬ, ಮೈತುಂಬ ಬಟ್ಟೆ ಸುತ್ತಿ ಮದ್ರಾಸಗೆ ಕಳುಹಿಸುತ್ತಿರುವುದು ಮೂಲಭೂತವಾದದ ಪರಿಣಾಮವೇ ಆಗಿದೆ.

ಉರ್ದು ಶಾಲೆಗಳಲ್ಲಿ ಕಾಲಕಾಲಕ್ಕೆ ಸರಿಯಾಗಿ ಕನ್ನಡ ಪಠ್ಯಪುಸ್ತಕಗಳು ದೊರೆಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂಬುದು ಈ ಅಧ್ಯಾಪಕರುಗಳ ಕಳಕಳಿಯ ವಿನಂತಿಯಾಗಿದೆ.

• ಸಾರಾ ಅಬೂಬಕ್ಕರ್

ರು ನಿಂತುಕೊಂಡು ಅಳುತ್ತಿದ್ದರು. ಕಾರಣವೇನೆಂದು
ವರೆ ಇವರೆಲ್ಲರೂ ಕನ್ನಡ ಭಾಷೆಯಲ್ಲಿ ಅನುತ್ತೀರ್ಣ
ದ್ದರು. ವಿದ್ಯಾರ್ಥಿಗಳ ಈ ದುರಂತವನ್ನು ಕಂಡು
ಕದಿಂದ ಈ ಅಧ್ಯಾಪಕರುಗಳು ಇಂತಹ ಒಂದು
ವೇಶವನ್ನು ಹಮ್ಮಿಕೊಳ್ಳಲು ಚಿಂತನೆ ನಡೆಸಿದಾಗ
ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಸಹಕಾರ ನೀಡಿದರು.
ದ್ಯಾರ್ಥಿಗಳು ಕನ್ನಡದಲ್ಲಿ ಹಿಂದೆ ಬೀಳಲು ಕಾರಣವೇನು
ಬುದೇ ಚರ್ಚೆಯ ವಿಷಯವಾಗಿತ್ತು.

0 ನೇ ತರಗತಿಯವರೆಗೆ ಉರ್ದುವಿನಲ್ಲಿ ವ್ಯಾಸಂಗ
ದ ವಿದ್ಯಾರ್ಥಿಗಳು ಪಿಯುಸಿ ತರಗತಿಗೆ ಬಂದಾಗ
ಕಲಿಕೆಯನ್ನು ಕನ್ನಡ ಭಾಷೆಯಲ್ಲಿ ಮುಂದುವರಿಸ
ಯಿತು. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ
ರ್ಥಿಗಳಿಗೆ ಇಂಗ್ಲಿಷ್ ಕಬ್ಬಿಣದ ಕಡಲೆಯಂತಾದರೆ
ರ್ದು ಮಾಧ್ಯಮದಲ್ಲಿ ಓದಿದ ಮಕ್ಕಳಿಗೆ ಕನ್ನಡ ಮತ್ತು
ಷ್ ಎರಡು ಭಾಷೆಗಳೂ ಕಬ್ಬಿಣದ ಕಡಲೆಯೇ ಆಯಿತು.
ಕೂಲಿನಲ್ಲಿ ಕನ್ನಡದಲ್ಲಿ ಪ್ರಶ್ನೆ ಕೇಳಿದರೂ ಉರ್ದುವಿನಲ್ಲೇ
ಸುತ್ತಿದ್ದ ವಿದ್ಯಾರ್ಥಿಗಳಿಗೆ ಈಗಲಾದರೂ ತಮ್ಮ
ಅರಿವಾಗಿದೆಯೇ?

ಈ ಪರಿಸ್ಥಿತಿಗೆ ಯಾರನ್ನು ದೂರಬೇಕು? ದೇವರಾಜ
ು ಮುಖ್ಯಮಂತ್ರಿಗಳಾಗಿದ್ದಾಗ ಮುಸ್ಲಿಮರ ಬೇಡಿಕೆಗನು
ಗಿ ಒಂದು ಸಾವಿರ ಪ್ರಾಥಮಿಕ ಶಾಲೆಗಳಲ್ಲಿ ಉರ್ದು
ಗಳನ್ನಾರಂಭಿಸಲು ಅನುಮತಿ ನೀಡಿದರು. ಅವರು
ಮುಖಂಡರೊಡನೆ ಚರ್ಚಿಸಿ ಉರ್ದು ಭಾಷೆಯನ್ನು
ತಿ ತರಗತಿಗೆ ತರುವುದರ ದುಷ್ಪರಿಣಾಮದ ಕುರಿತು
ಎಚ್ಚರಿಸಬಹುದಿತ್ತು, ಹಾಗೆ ಅವರ ಮನವೊಲಿಸಿ
ಂದು ಈ ಸಮಾಜದ ವಿದ್ಯಾರ್ಥಿಗಳಿಗೆ ಇಂತಹ
ಬರುತ್ತಿರಲಿಲ್ಲ. ಇದರ ಪರಿಣಾಮವೆಂದರೆ ಐದನೇ
ಯಿಂದ ಶಿಕ್ಷಣ ಮುಂದುವರಿಯಲಾಗದೆ ಅಲ್ಲಿಗೆ
ಶಿಕ್ಷಣ ಸ್ಥಗಿತಗೊಂಡದ್ದನ್ನು ನಾನು ರಾಯಚೂರಿನ
ಗಮನಿಸಿದ್ದೇನೆ. ಈಗ ಉರ್ದು ಭಾಷೆ 10 ನೇ
ಯವರೆಗೆ ಇದ್ದು ಈ ವಿದ್ಯಾರ್ಥಿಗಳು ಪದವಿ
ತರಗತಿಯನ್ನು ದಾಟದಂತಾಗಿದೆ.

ರ್ದು ಭಾಷೆ ಮಾತ್ರವಲ್ಲ, ಇಂದಿನ ಈ ಕಲಿಕಾ
ಈ ಹಿಂದುಳಿಯುವಿಕೆಗೆ ಕಾರಣವಾಗಿದೆ.
ಕ ತರಗತಿಯ ಮುಸ್ಲಿಂ ಮಕ್ಕಳು ಇಂದು ಕನ್ನಡ,
ಹಿಂದಿ, ಉರ್ದು, ಅರೇಬಿಕ್ ಎಂದು ಐದು
ನ್ನು ಕಲಿಯಬೇಕಾಗಿದೆ. ಈಗಿನ ಧಾರ್ಮಿಕ ಹೊಸ
ಈ ಮಕ್ಕಳ ರಾತ್ರಿಗಳ ಮದ್ರಸಾಗಳಿಗೆ
ಕಡ್ಡಾಯವಾಗಿದೆ. ಅವರಿಗೆ ರಾತ್ರಿಯಲ್ಲಿ
ಮಾಡಲು ವೇಳೆ ಇಲ್ಲ. ಅಧ್ಯಾಪಕರಂತ
ಈ ಮಕ್ಕಳಿಗೆ ಸಮರ್ಪಕವಾಗಿ ಮಾರ್ಗದರ್ಶನ


ವಿಕರೂಪ ಶಿಕ್ಷಣ ವ್ಯವಸ್ಥೆ ಜಾರಿಗೆ ಬರದಿದ್ದರೆ ಈ ಎಲ್ಲ ಅವ್ಯವಸ್ಥೆಗಳೂ ಹೀಗೆಯೇ ಮುಂದುವರಿಯುತ್ತವೆ.

ಉರ್ದು ಭಾಷೆ ಮುಸ್ಲಿಮರ ಭಾಷೆ ಎಂಬ ತಪ್ಪು ಕಲ್ಪನೆ ಮುಸ್ಲಿಮರಲ್ಲೂ ಇದೆ. ಮುಸ್ಲಿಮೇತರರಲ್ಲೂ ಇದೆ. ಇತರ ಎಲ್ಲಾ ಭಾಷೆಗಳಂತೆ ಉರ್ದು ಕೂಡಾ ಇಂಡಿಯಾದ ಒಂದು ಭಾಷೆ ಎಂದು ತಿಳಿಯಬೇಕೇ ಹೊರತು ಅದಕ್ಕೆ ಒಂದು ಧಾರ್ಮಿಕ ಸಮುದಾಯದ ಹಣೆಪಟ್ಟಿ ನೀಡಬೇಕಾಗಿಲ್ಲ. ಮೊಗಲ ಅರಸರ ಕಾಲದಲ್ಲಿ ಈ ಭಾಷೆ ಬಳಕೆಗೆ ಬಂದಿತು ಎನ್ನಲಾಗಿದೆ. ಆ ಬಳಿಕ ಎಷ್ಟೋ ಮಂದಿ ಮುಸ್ಲಿಮೇತರರು ಈ ಭಾಷೆಯನ್ನು ಕರಗತ ಮಾಡಿಕೊಂಡು ಅದರಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಿದರು. ಖ್ಯಾತ ಸಾಹಿತಿ ಪ್ರೇಮಚಂದ್ ಉರ್ದುವಿನಲ್ಲಿ ಬರೆದರು. ಖುಷ್ವಂತ್ ಸಿಂಗ್, ಕನ್ನಡದ ಶಾಂತರಸ ಮುಂತಾದ ಎಷ್ಟೋ ಸಾಹಿತಿಗಳು ಉರ್ದು ಪ್ರೇಮಿಗಳಾಗಿದ್ದಾರೆ. ಆರ್‌ಎಸ್‌ಎಸ್ ತತ್ವಗಳನ್ನು ಪ್ರಚಾರ ಮಾಡುತ್ತಿದ್ದ ಪಂಜಾಬಿನ 'ಪಂಜಾಬ್ ಕೇಸರಿ' ಎಂಬ ಪತ್ರಿಕೆ ಉರ್ದುವಿನಲ್ಲೇ ಪ್ರಕಟವಾಗಿತ್ತು ಎನ್ನಲಾಗಿದೆ. ಹಿಂದಿ ಭಾಷೆಗೆ ತೀರಾ ಸಮೀಪವಾಗಿರುವ ಈ ಭಾಷೆಯ ಲಿಪಿ ಮಾತ್ರ ಅರೇಬಿಕ್ ಲಿಪಿಯಿಂದ ಹುಟ್ಟಿಕೊಂಡು ಬಲಗಡೆಯಿಂದ ಎಡಗಡೆಗೆ ಬರೆಯಲ್ಪಡುತ್ತದೆ. ಬಹುಶಃ ಆ ಕಾರಣಕ್ಕಾಗಿ ಉರ್ದುವನ್ನು ಮುಸ್ಲಿಮರ ಭಾಷೆ ಎಂದು ತಿಳಿದುಕೊಂಡಿರಬಹುದು. ಮುಸ್ಲಿಮರು ಖುರ್‌ಆನ್ ಓದಲು ಅರೇಬಿಕ್ ಲಿಪಿ ಕಲಿಯುವುದು ಕಡ್ಡಾಯವಾಗಿದ್ದು ಉರ್ದು ಓದಲು, ಬರೆಯಲು ಅವರಿಗೆ ಸುಲಭವಾಗಿರಬಹುದು. ಈ ಎಲ್ಲ ಕಾರಣಗಳಿಂದಾಗಿ ಉರ್ದು ಮುಸ್ಲಿಮರ ಭಾಷೆ ಎಂದೇ ಹೆಸರು ಪಡೆಯಿತು. ಮುಸ್ಲಿಮರ ಭಾಷೆ ಎಂದುಕೊಂಡೇ ಮುಸ್ಲಿಮೇತರರು ಅದನ್ನು ದ್ವೇಷಿಸುವಂತಾಯಿತು. ಇಂದಿನ ಕೋಮುವಾದವೂ ಈ ದ್ವೇಷವನ್ನು ಅಧಿಕಗೊಳಿಸುವಲ್ಲಿ ಸಹಕಾರಿಯಾಯಿತೆಂದುಕೊಂಡಿದ್ದೇನೆ.

ಇಡೀ ದೇಶದಲ್ಲಿ ಹನಫಿ ಪಂಥದವರು ಮಾತ್ರ ಉರ್ದು


ಖಾಲಿ ಖಾಲಿ

ಗುಂಪುಗಳಿಲ್ಲ
ಘೋಷಣೆಗಳಿಲ್ಲ ಮೈಕುಗಳಿಲ್ಲ
ಮೆರವಣಿಗೆಗಳಿಲ್ಲ
ಜಯಕಾರ ಧಿಕ್ಕಾರಗಳಿಲ್ಲ
ಕೆಂಬಾವುಟಗಳಿಲ್ಲ
ಕರಪತ್ರಗಳಿಲ್ಲ
ಪ್ಲಕಾರ್ಡುಗಳಿಲ್ಲ
ಪ್ರತಿಭಟನೆಗಳಿಲ್ಲ
ಹಾಗಂತ ಈ ನಾಡು
ಸುಭಿಕ್ಷವಾಗಿದೆ ಎಂದೇನೂ ಅಲ್ಲ
ಇಲ್ಲಿನ ಮನುಷ್ಯ ಸತ್ತುಹೋಗಿದ್ದಾನೆ
ಅಥವಾ ಸತ್ತುಹೋದಂತಹ ನಿದ್ರೆಯಲ್ಲಿದ್ದಾನೆ
ಈಗವನ ಬಡಿದೆಬ್ಬಿಸಲು
ನಾನು ಕವಿತೆ ಬರೆಯಲೇಬೇಕು
ನೀವದನ್ನು ಹಾಡಲೇಬೇಕು.



• ಕು.ಸ.ಮಧುಸೂದನ

ಅರಬ್ ಲೋಕದಲ್ಲಿ ಕೋಲಾಹಲ



ಪ್ರಜಾಪಾದವೂ ಪ್ರೀತಿಯಂತೆಯೇ. ಒಳಗಿನಿಂದ ಹರಿದುಬರಬೇಕು. ಸದ್ಯದ ಪರಿಸ್ಥಿತಿಯನ್ನು ನೋಡಿದರೆ ಅರಬ್ ಲೋಕದಲ್ಲಿ ಪ್ರಜಾಪಾದ ಒಳಗಿನಿಂದ ಉಕ್ಕಿ ಹರಿಯುತ್ತಿರುವಂತೆ ಕಾಣಿಸುತ್ತಿದೆ. ಅದರ ಕಿಡಿ ಮೊದಲು ಹತ್ತಿದ್ದು ಟ್ಯುನೀಸಿಯಾದಲ್ಲಿ.

ಸಿದಿ ಬೌಜಿದ್ ಟ್ಯುನಿಸಿಯಾದ ಒಂದು ಸಣ್ಣ ಪಟ್ಟಣ. ಕಳೆದ ಡಿಸೆಂಬರ್‌ನಲ್ಲಿ ಪೊಲೀಸರು ಇಪ್ಪತ್ತಾರು ವರ್ಷದ ಹಣ್ಣು ಮಾರುವವನ ತಳ್ಳುಗಾಡಿಯನ್ನು ಕಸಿದುಕೊಂಡು ಅವನ ಜೀವನೋಪಾಯಕ್ಕೇ ಕಲ್ಲು ಹಾಕಿದರು. ಹತ್ತಿ ಉರಿದ ಹತಾಶೆಯಲ್ಲಿ ಆತ ತನ್ನ ದೇಹವನ್ನೇ ದಹಿಸಿಕೊಂಡ. ಆ ಕಿಡಿಯಿಂದ ಹತ್ತಿದ ಹಿಂಸಾಪೂರ್ಣ ಪ್ರತಿಭಟನೆ ಟ್ಯುನೀಸಿಯಾದ ಇತರ ಭಾಗಗಳಿಗೆ ಹರಡಲು ತಡವೇನೂ ಆಗಲಿಲ್ಲ. ಎರಡೇ ದಿನಗಳಲ್ಲಿ ಇಪ್ಪತ್ತೆರಡು ವರ್ಷದ ಯುವಕನೊಬ್ಬ ಅದೇ ರೀತಿಯಲ್ಲಿ ತನ್ನ ಬದುಕನ್ನೂ ಕೊನೆಗಾಣಿಸಿಕೊಂಡ. 'ನಿರುದ್ಯೋಗ ಸ್ಥಿತಿಯೂ ಬೇಡ, ಬದುಕೆಂಬ ದುರ್ಗತಿಯೂ ಬೇಡ' ಎಂದು ಘೋಷಿಸಿ ತನ್ನನ್ನು ತಾನು ಸುಟ್ಟು ಬೂದಿ ಮಾಡಿಕೊಂಡ. ಕೇವಲ ಎರಡೇ ವಾರಗಳಲ್ಲಿ ಯುವಜನತೆಯ ಹತಾಶೆ ಇಡೀ ದೇಶವನ್ನು ಹಬ್ಬಿಕೊಂಡಿತು. ಅಧ್ಯಾಪಕರು, ವಕೀಲರು ಮತ್ತು ಮಧ್ಯಮವರ್ಗದ ಜನ ವಿದ್ಯಾರ್ಥಿಗಳ ಪ್ರತಿಭಟನಾ ಪ್ರದರ್ಶನಗಳಲ್ಲಿ ಭಾಗಿಯಾದರು. ಅಧಿಕಾರಕ್ಕೆ ಸಡ್ಡು ಹೊಡೆದು ಹೆಂಗಸರು ಬೀದಿಗಿಳಿದರು. ಮೂರು ವಾರದೊಳಗೆ ಟ್ಯುನೀಸಿಯಾದ ಸೇನೆ ಈ ಜನಪರ ಚಳವಳಿಯನ್ನು ಹತ್ತಿಕ್ಕಲು ನಿರಾಕರಿಸಿದಾಗ ಬೆನ್ ಅಲಿಯ ಇಪ್ಪತ್ತೆರಡು ವರ್ಷದ ದಬ್ಬಾಳಿಕೆ ಪ್ರಭುತ್ವ ನೆಲ ಕಚ್ಚಿತು.

ಬೆನ್ ಅಲಿ ಮತ್ತವನ ಹೆಂಡತಿ ಚೀಲಗಟ್ಟಲೆ ಚಿನ್ನ, ಹಣ, ಶಸ್ತ್ರಗಳೊಂದಿಗೆ ದೇಶದಿಂದ ಪರಾರಿಯಾದರು. ಯುರೋಪಿನ ಆಕಾಶದಲ್ಲಿ ಗಿರಕಿ ಹೊಡೆಯುತ್ತಾ ಅವರ ವಿಮಾನ ಹೇಗೋ ಎಲ್ಲೋ ಆಶ್ರಯವನ್ನು ಹೊಂಚಿಕೊಳ್ಳಲು ಪ್ರಯತ್ನಿಸಿತು. ಚೀಲಗಟ್ಟಲೆ ಚಿನ್ನದ ಆಸೆಗೆ ಮಾಲ್ಟಾ ಬಲಿಯಾಗಲು ನಿರಾಕರಿಸಿತು. ಪೂರ್ವ ಕಾಲದ ಫ್ರೆಂಚ್ ಪಾಹುತುಶಾಹಿಗಳು 'ಹೋಗಲೇ!' ಎಂದರು. ಕೊನೆಗೆ ಬೆನ್ ಅಲಿ ಜೆಡ್ಡಾದಲ್ಲಿ ಇಳಿಯಬೇಕಾಯಿತು. ಅಲ್ಲಿಯ ರಾಜ ಮನೆತನ ಹೀನಾಯವಾಗಿ ಅಧಿಕಾರದಿಂದ ಕೆಳಗಿಳಿಯಬೇಕಾದ ಈ ದಬ್ಬಾಳಿಕೆ ಪ್ರಭುವಿಗೆ ಆಶ್ರಯ ಕೊಡಲು ಒಪ್ಪಿಕೊಂಡಿತ್ತು. ಸೌದಿಯ ಅರಮನೆಯಲ್ಲಿ ಮೊಟ್ಟಮೊದಲ ಅತಿಥಿ ತಾನೇ, ಅದರ ಅತ್ಯುತ್ತಮ ಕೊಠಡಿಯನ್ನು ತಾನು ಆಯ್ದುಕೊಳ್ಳಬಹುದು ಎಂದು ಬೆನ್ ಅಲಿ ಬೀಗಬಹುದು ಅಷ್ಟೇ. ಇನ್ನೊಬ್ಬ ದಬ್ಬಾಳಿಕೆ ಪ್ರಭುವಾದ ಲಿಬಿಯಾದ ಮುಹಮ್ಮದ್ ಗಡಾಫಿ ಬೆನ್ ಅಲಿಯ ಹೀನಾಯ ಅಪಮಾನ ತನಗೆ ಇನ್ನಿಲ್ಲದ ನೋವು ತಂದಿದೆ ಎಂದು ಹೇಳಿಕೊಂಡಿದ್ದಾನೆ. ಮುಂದಿನದು ತನ್ನ ಸರತಿ ಎಂದು ಎಲ್ಲೋ, ಯಾವುದೋ ಮೂಲೆಯಲ್ಲೋ ಹೊಳೆದಿರಬಹುದು!

ಜೆಡ್ಡಾ ಅರಮನೆಗೆ ಇನ್ನಷ್ಟು ಅತಿಥಿಗಳು ಬಂದಿಳಿಯುವ ನಿರೀಕ್ಷೆಯಿದೆ. ಕಾದು ನೋಡಿ!

ಬೈ ಬೈ ಮುಬಾರಕ್?

ಬೀಸುತ್ತಿರುವ ದೊಣ್ಣೆಗೆ ಮುಂದಿನ ತುತ್ತು ಈಜಿಪ್ಟಿನ ಹೊಸ್ನಿ ಮುಬಾರಕ್ ಇರಬಹುದು. ಮುಬಾರಕನ ದಬ್ಬಾಳಿಕೆಯಲ್ಲಿ ಇಪ್ಪತ್ತೇಳು ವರ್ಷ ನಲುಗಿರುವ ಈಜಿಪ್ಟ್ ಟ್ಯುನೀಸಿಯಾದಲ್ಲಿ ನಡೆಯುತ್ತಿರುವ ಕ್ರಾಂತಿಯ ಅಲೆಗಳನ್ನು ತನ್ನ ನೆಲದಲ್ಲಿಯೂ ಕಾಣಹತ್ತಿದೆ. ಹತ್ತು ಸಾವಿರದಷ್ಟು ಈಜಿಪ್ಟಿಯನ್ನರು ಬೀದಿಗಿಳಿದಾಗ ಪಶ್ಚಿಮದ ದೇಶಗಳು 'ಈಜಿಪ್ಟ್ ಸಹ ಟ್ಯುನೀಸಿಯಾದ ಹಾದಿಯನ್ನೇ ತುಳಿಯಿತೇ!' ಎಂದು ಕಣ್ಣಾಡ್ಜಿಕೊಂಡು ನೋಡಿದವು. ಅದು ಹೇಗೆ ಸಾಧ್ಯ? ಈಜಿಪ್ಟಿನ ಸಾಂಸ್ಥಿಕ ಶಕ್ತಿಗಳು ಮಜಬೂತಾಗಿವೆಯಲ್ಲಾ? ಅಮೆರಿಕಾ ತನ್ನ ಮಿತ್ರ ಪ್ರಭುತ್ವವೊಂದನ್ನು ಸುಮ್ಮನೇ ಬಿಟ್ಟು ಕೊಡಲು ಒಪ್ಪುತ್ತದೆಯೆ? ಇಸ್ರೇಲ್ ಮಧ್ಯೆ ಪ್ರವೇಶಿಸಲೇ ಬೇಕಲ್ಲಾ? ಸರಕಾರ ಕ್ರಾಂತಿಕಾರಿ ಶಕ್ತಿಗಳನ್ನು ಹಿಗ್ಗಾಮುಗ್ಗಾ ಜಾಡಿಸಲು ಅನುವು ಮಾಡಿಕೊಡಲೆಂದೇ ನಿತ್ಯ ಹುಮ್ಮಸ್ಸಿನ ಅಲ್ ಜಜೀರಾ ಮಾಧ್ಯಮದ ಬಾಯನ್ನು ಬಿಗಿಯಾಗಿ ಮುಚ್ಚಿ ಕೂರಿಸಲಾಗಿದೆಯಲ್ಲ? ಇಷ್ಟೆಲ್ಲ ಮಾಡಿದ ಮೇಲೆ ಬೆಂಕಿ ನಂದಲೇಬೇಕು ಎಂದರು ಎಲ್ಲವನ್ನೂ ಬಲ್ಲ ದೊಡ್ಡವರು!

ಆದರೆ ದೊಡ್ಡವರೆಲ್ಲಾ ಜಾಣರಲ್ಲಾ ಎನ್ನುವುದೂ ಸತ್ಯವಾಯಿತಲ್ಲ!

ಅಲೆಕ್ಸಾಂಡ್ರಿಯಾ, ಸುಯೆಜ್ ಮತ್ತು ಕೈರೋದ ಜನ ನೆಲದ ಹಕ್ಕೊತ್ತಾಯಕ್ಕೆ ಬೀದಿಗಿಳಿದಿದ್ದನ್ನು ಎಲ್ಲರೂ ನೋಡಿದರು. ಕೈರೋದ ತಹ್ರೀರ್ ಚೌಕ ಈಗ ರಾಜಕೀಯ ಸ್ಫೋಟಕೇಂದ್ರವಾಗಿದೆ. ಮಿಲಿಯನ್‌ಗಟ್ಟಲೆ ಜನ ದಬ್ಬಾಳಿಕೆ ಪ್ರಭುತ್ವವನ್ನು ಧಿಕ್ಕರಿಸಿ ಅಲ್ಲಿ ಪ್ರದರ್ಶನಗಳನ್ನು ನಡೆಸಲಾರಂಭಿಸಿದ್ದಾರೆ. ಅವರನ್ನು ಹತ್ತಿಕ್ಕಲು ಸೇನೆ ನಿರಾಕರಿಸುತ್ತಲೇ ಇದೆ. ಹೊಸ್ನಿ ಮುಬಾರಕನ ನಿದ್ದೆ ಹಾಳಾಗುತ್ತಲೇ ಇದೆ. 'ಹೋಗುತ್ತೇನೆ, ಆದರಿನ್ನೂ ಕಾಲ ಬಂದಿಲ್ಲ' ಎಂದು ಹೇಳುತ್ತಿರುವ ಅವನ ಟಿವಿ ಸಂದರ್ಶನಗಳು ಪ್ರತಿಭಟನಾಕಾರರನ್ನು ಇನ್ನಷ್ಟು ರೊಚ್ಚಿಗೇಳಿಸುತ್ತಿವೆ. ಒಬಾಮಾ ಸರಕಾರ ಅಮೆರಿಕಾದ ಮಿತ್ರ ಪ್ರಭುತ್ವವೊಂದರ ದಿನಗಳು ಮುಗಿದಿವೆ ಎನ್ನುವ ವಾಸ್ತವಕ್ಕೆ ಎಚ್ಚೆತ್ತುಕೊಂಡಂತಿದೆ. ಅಧಿಕಾರ ಬಿಟ್ಟು ಕೆಳಗಿಳಿಯುವುದೇ ಹಿತ ಎನ್ನುವ ಅದರ ಸೂಚನೆಯನ್ನು ತಹ್ರೀರ್ ಚೌಕದ ಪ್ರತಿಭಟನಾಕಾರರು ಸ್ವಾಗತಿಸಿದ್ದಾರೆ. ಮುಬಾರಕ್ ಮಹಾನುಭಾವ ಪರಿಸ್ಥಿತಿಯ ಭಾರಕ್ಕೆ ಇನ್ನಾದರೂ ಬಾಗಿ, ಕೆಳಗಿಳಿದು, ಗಂಟು ಮೂಟೆ ಕಟ್ಟಿ ಜೆಡ್ಡಾದ ಕಡೆಗೆ ವಿಮಾನದಲ್ಲಿ ಪ್ರಯಾಣ ಬೆಳೆಸಬಹುದೆ?

ಯೆಮೆನ್, ಅಲ್ಜೀರಿಯಾ, ಲೆಬನನ್, ಜೋರ್ಡಾನ್ ಮತ್ತು ಸಿರಿಯಾಗಳೂ ಸಹ ಯಾವುದೋ ಪ್ರಯಾಣಕ್ಕೆ ಸಜ್ಜಾಗಿ ನಿಂತಿರುವಂತೆ ಕಾಣಿಸುತ್ತಿವೆ. ಈ ಪ್ರಯಾಣ ಸಾಮಾನ್ಯ ಜನರ ಹಕ್ಕೊತ್ತಾಯಗಳಿಂದ ಮೂಡಿದೆ ಎನ್ನುವ ವಾಸ್ತವವೇ ಸಮಾಧಾನ ಮೂಡಿಸುವ ಅಂಶ.

ಸ್ವಾತಂತ್ರ್ಯದ ಹಾದಿಯಲ್ಲಿ

ಸಾಮ್ರಾಜ್ಯಶಾಹಿ ಶಕ್ತಿಗಳು ಅಫಘಾನಿಸ್ತಾನ ಮತ್ತು ಇರಾಕಿನಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ನಡೆಸಿದ ವಿಫಲ ಕಾರ್ಯಾಚರಣೆಗಳ ಸರಣಿಯೊಂದಿಗೆ ಈ ಇತ್ತೀಚಿನ ಬೆಳವಣಿಗೆಗಳನ್ನು ಹೋಲಿಸದೆ ಇರಲು ಹೇಗೆ ಸಾಧ್ಯ? ಬಿಲಿಯನ್‌ಗಟ್ಟಲೆ ಡಾಲರುಗಳನ್ನು ಪೋಲು ಮಾಡಿದ ಮೇಲೆ, ಅದಕ್ಕಿಂತ ಹೆಚ್ಚಾಗಿ ಸಾವಿರಾರು ಜೀವಗಳನ್ನು ಬಲಿ ತೆಗೆದುಕೊಂಡ ಮೇಲೆ, ಜನರ ಒತ್ತಾಸೆ ಇಲ್ಲದಿದ್ದರೆ ಯಾವ ಮಟ್ಟಗಿನ ಶಕ್ತಿ ಪ್ರಯೋಗವೂ ದಂಡ ಎನ್ನುವ ಸಾಮಾನ್ಯ ಸತ್ಯ ಆ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಹೊಳೆದಂತಿದೆ. ರಸ್ತೆಯ ಮೇಲಿನ ಜನರ ಪ್ರತಿಭಟನೆ ಭ್ರಷ್ಟಾಚಾರದಿಂದ ಕೊಳೆತು ನಾರುತ್ತಿರುವ ತಮ್ಮ ಸರಕಾರದ ವಿರುದ್ಧ ಅಷ್ಟೇ ಅಲ್ಲ, ಮೂಗು ತೂರಿಸಿ ಪರಿಸ್ಥಿತಿಯನ್ನು ಗಬ್ಬೆಬ್ಬಿಸುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುವ ಹೊರಗಿನ ಶಕ್ತಿಗಳ ವಿರುದ್ಧವೂ ಹೌದು. ಆ ಪಶ್ಚಿಮದ ಶಕ್ತಿಗಳ ದಬಾವಣೆ ಇಲ್ಲದಿದ್ದರೆ ಈ ಕ್ರಾಂತಿ ಯಾವತ್ತೋ ನಡೆದಿರಬೇಕಿತ್ತು.



ಕಳೆದ ಎರಡು ದಶಕಗಳಲ್ಲಿ ಪಾಶ್ಚಿಮಾತ್ಯ ಶಕ್ತಿಗಳು ತಮಗೆ ಬೇಕಾದ ಕಡೆಗಳಲ್ಲಿ ನಾಮಕಾವಸ್ಥೆ ಲೊಳಲೊಟ್ಟೆ ಪ್ರಭುಗಳನ್ನು ಕೂರಿಸಿ, ಹಣದ ಹೊಳೆ, ಮಿಲಿಟರಿ ಸಹಾಯದಿಂದ ಅವರನ್ನು ಕೊಬ್ಬಿಸಿ, ನಂತರ ಜನರಿಗೆ ಸ್ವಾತಂತ್ರ್ಯ ನೀಡುವ ಸೋಗಿನಲ್ಲಿ ಆ ದೇಶದ ಮೇಲೆ ಬಾಂಬಿನ ಮಳೆ ಸುರಿಸುವ ಅಟ್ಟಹಾಸವನ್ನೇ ಮೆರೆದಿದೆ. ಬುಶ್-ಬ್ಲೇರ್ ನಂತಹ ಯುದ್ಧಪಾತಕ ಶಕ್ತಿಗಳು ತಾವು ಇರಾಕನ್ನು ದುರಾಕ್ರಮಿಸಿದ ಮೇಲೆ ಅಲ್ಲಿ ನಡೆದ ರಾಜಕೀಯ ಘಟನೆಗಳೇ ನೆರೆಹೊರೆಯ ದೇಶಗಳನ್ನೂ ಆಕ್ರಮಿಸಿಕೊಳ್ಳುತ್ತವೆ ಎಂದು ನಂಬಿದ್ದವು. ಹಾಗಾಗಲಿಲ್ಲ, ಎರಡು ದಿನದ ಹಿಂದೆಯೂ ಬುಶ್‌ನ ಕುನ್ನಿಮರಿ ಎಂದೇ ಗುರುತಿಸಲ್ಪಡುವ ಬ್ಲೇರ್ ಮುಬಾರಕ್ ಈಜಿಪ್ಟಿನ ಮುಖ್ಯಸ್ಥನಾಗಿ ಅಧಿಕಾರದಲ್ಲಿರಬೇಕಾದ್ದರ 'ಮಹತ್ವ'ದ ಬಗ್ಗೆ ನಿರರ್ಗಳವಾಗಿ ವಾದಿಸಿದ್ದಾನೆ. ಅರಬ್ ಬೀದಿಗಳಲ್ಲಿ ನಡೆಯುತ್ತಿರುವ ಜನಪರ ಪ್ರತಿಭಟನೆಗಳಿಂದಾದರೂ ಈ ಶಕ್ತಿಗಳು ಪ್ರಜಾಪ್ರಭುತ್ವವೆಂದರೇನು ಎನ್ನುವುದರ ಪ್ರಾಥಮಿಕ ಪಾಠಗಳನ್ನು ಕಲಿಯಬೇಕಾಗಿದೆ.

ಅತಿಕ್ರಮಿಸಿಯೋ, ಮೂಗು ತೂರಿಸಿಯೋ, ದಬಾವಣೆ ನಡೆಸುವ ಶಕ್ತಿಗಳನ್ನು ಗುರುತಿಸಿ, ವಿರೋಧಿಸಿ, ಅವುಗಳನ್ನು ಹೊರಗಟ್ಟುವ ಪ್ರಕ್ರಿಯೆಯಲ್ಲಿ ಒಂದು ಸತ್ಯವನ್ನು ನೆನಪಿಟ್ಟುಕೊಳ್ಳುವ ಎಚ್ಚರದ ಅಗತ್ಯವಿದೆ. 1966 ರಲ್ಲಿ ಪ್ರಕಟವಾದ ತಾಯಿಬ್ ಸಲೀಹ್‌ನ 'Season of Migration to the North' ಕೃತಿಯಲ್ಲಿನ ಯೂನಿವರ್ಸಿಟಿ ಪದವೀಧರನೊಬ್ಬ ತನ್ನ ತಾಯ್ನಾಡಾದ ಸೂಡಾನಿಗೆ ಹಿಂತಿರುಗಿರುತ್ತಾನೆ. ದೇಶ ಹೊಸ ಸ್ವಾತಂತ್ರ್ಯದ ಹುಮ್ಮಸ್ಸಿನಲ್ಲಿ ಬೀಗುತ್ತಿರುತ್ತದೆ. ಹಳ್ಳಿಯ ಮುದಿಯನೊಬ್ಬ ಅವನಿಗೆ ಎಚ್ಚರ ನೀಡುತ್ತಾನೆ: 'ನಮ್ಮ ನೆಲದಲ್ಲಿ ನಾವು ಸ್ವತಂತ್ರರಾಗಿದ್ದೇವೆ ಎನ್ನುವುದೇನೋ ನಿಜವಿರಬಹುದು. ಆದರೆ ಎಚ್ಚರವಿರಲಿ. ಅವರು ಹೋದರೇನು? ಅವರಂತೇ ಯೋಚಿಸುವ ನಮ್ಮ ಜನರನ್ನು ಬಿಟ್ಟು ಹೋಗಿದ್ದಾರಲ್ಲ?'

ಅಲ್ಲಿ, ಯುರೋಪಿನಲ್ಲಿ

ಅರಬ್ ಬೀದಿಗಳಲ್ಲಿ ಸ್ವಾತಂತ್ರ್ಯದ ಕಾವು ಏರುತ್ತಿರುವಾಗಲೇ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬೇರೆ ರೀತಿಯ ಬೆಂಕಿ ಹಬ್ಬುತ್ತಿರುವಂತೆ ಕಾಣುತ್ತಿದೆ. ಇವತ್ತು ನಾನು, ನಾಳೆ ನೀನು ಎನ್ನುವ ತರದಲ್ಲಿ ದೇಶಗಳು ಆರ್ಥಿಕವಾಗಿ ದಿವಾಳಿಯೇಳುತ್ತಿರುವುದನ್ನು ನೋಡಿದಾಗ ಯುರೋಪಿಯನ್ ಒಕ್ಕೂಟ ಭೇದಿ ಹಿಡಿದ ಖಾಯಿಲಸ್ಥನಂತೆ ಕಂಡರೆ ಆಶ್ಚರ್ಯವೇನಿಲ್ಲ. ಗ್ರೀಸ್ ಮತ್ತು ಐರ್ಲೆಂಡುಗಳು ಆಗಲೇ ಡ್ರಿಪ್ಸ್ ಹಾಕಿಕೊಂಡು ಮಲಗಿವೆ. ಸ್ಪೇನ್ ಭಿಕ್ಷಾಪಾತ್ರೆ ಹಿಡಿದು ಹೊರಡಲು ತಯಾರಾಗುತ್ತಿದೆ. ಇಟಲಿ ಮತ್ತು ಪೋರ್ಚುಗಲ್ ತುಂಬ ದಿನಗಳ ಮಟ್ಟಿಗೇನೂ ಹಿಂದೆ ಉಳಿಯುವುದಿಲ್ಲ. ಅತ್ತ ಅಮೆರಿಕಾದ ಸಂಯುಕ್ತ ಸಂಸ್ಥಾನ ಮತ್ತು ಬ್ರಿಟನ್ ತಮ್ಮವರಿಗೇ ಉದ್ಯೋಗವನ್ನು ಹೊಂಚಲಾಗದೇ ತತ್ತರಿಸುತ್ತಿವೆ. ಹತ್ತು ವರ್ಷದ ರಕ್ತಪಾತ ಯುದ್ಧದ ನಂತರ ಯಾವುದೇ ರೀತಿಯ ಮಿಲಿಟರಿ ಮಧ್ಯಪ್ರವೇಶಕ್ಕೆ ಸಂಪನ್ಮೂಲಗಳು ಬೇಕಲ್ಲ? ಸಾಮ್ರಾಜ್ಯಬಡುಕ ಶಕ್ತಿಗಳು ಮೂರನೆಯ ಜಗತ್ತಿನ ದೇಶಗಳಿಗೆ ಯಾವುದೇ ರೀತಿಯ ಸಲಹೆಯನ್ನು ನೀಡುವ ನೈತಿಕ ಸ್ಥೈರ್ಯವನ್ನೇ ಕಳೆದುಕೊಂಡಿರುವಾಗ ಅರಬ್ ಲೋಕದ ಚಳವಳಿಗಳಿಗೆ ಇದು ಸೂಕ್ತ ಸಮಯವೆಂದೇ ಕಾಣುತ್ತದೆ.

ಆಫ್ರಿಕನ್ ಕಾದಂಬರಿಕಾರ ಚಿನು ಅಚಿಬೆ 'ಅವರು ಬರೆಯುವ ನಿನ್ನ ಕತೆ ಬೇಡವೆಂದಾದರೆ ನೀನೇಕೆ ನಿನ್ನ ಕತೆ ಬರೆಯಲ್ಲ?' ಎಂದು ಹೇಳಿದ್ದ. ಟ್ಯುನೀಸಿಯಾ ಮತ್ತು ಈಜಿಪ್ಟಿನ ಜನ ಮಾಡಿರುವುದು ಅದನ್ನೇ. ಆದರೆ ಈ ಕ್ರಾಂತಿಯ ಪರಿಣಾಮಗಳೇನಾಗಬಹುದು? ಇರಾನಿನಲ್ಲಿ ನಡೆದಂತೆ ಇಸ್ಲಾಮಿಕ್ ಮೂಲಭೂತ ಶಕ್ತಿಗಳು ನಿರಂಕುಶ ಆಳ್ವಿಕೆಯತ್ತ ಸಾಗುತ್ತವೆಯೆ? ಅಥವಾ ಆ ದೇಶಗಳು ಹೆಚ್ಚು ಪ್ರಗತಿಪರ ಕಾಳಜಿಗಳನ್ನು ಗುರಿಯಾಗಿಟ್ಟುಕೊಂಡು ನಿಜವಾದ ಸ್ವಾತಂತ್ರ್ಯದತ್ತ ಮುಖ ಮಾಡುತ್ತವೆಯೆ? ಅರಬ್ ಲೋಕದಲ್ಲಿ 'ಮುಂದೇನು?' ಎಂಬ ಪ್ರಶ್ನೆ ದಬ್ಬಾಳಿಕೆ ಪ್ರಭುಗಳನ್ನು ಕೆಳಗೆ ದಬ್ಬುವ ಪ್ರಕ್ರಿಯೆಯಷ್ಟೇ ಮಹತ್ವವನ್ನು ಮುಂದಿನ ದಿನಗಳಲ್ಲಿ ಪಡೆದುಕೊಳ್ಳಲಿದೆ.

• ಹರಿಶಂಕರ್

[illegible] ಅವರ 'ಮಂಗನ ಬೇಟೆ' ಈ ವಾರ ಪ್ರಕಟವಾಗುತ್ತಿಲ್ಲ [illegible]

ಸುತ್ತೂರು ಸ್ವಾಮಿ ಎಡೂರಪ್ಪನಿಗೆ ಬಿಳಿಬಟ್ಟೆ ಹೊದಿಸಿದ್ರಂತೆ!

ಕೆಣಗೆಲಸ ಮುಗಿದಿತ್ತು, ಕಾಳಮಾವನ ನಿರೀಕ್ಷೆಗೂ ರಿ ರಾಗಿಮೂಟೆ ಮನೆ ಸೇರಿದ್ದವು. ವರ್ಷದ ದಾಸ್ತಾನು ಭಾರ ಕಡಿಮೆ ಮಾಡಿದ್ದರಿಂದ ಮನಸ್ಸು ಹಗುರವಾಗಿತ್ತು. ರಿಂದ ಜುಮ್ಮಿ ಕಡೆಗೆ ಕೈಚಾಚಿ,

ಯ ಲು ಸೀ ಮ

ಕಟ್ಟೆಪುರಾಣ

▶ಬಿ. ಚಂದ್ರೇಗೌಡ

"ಬಾಯಿಗೇನಾರ ಕೊಡ್ತೆ ಜುಮ್ಮಿ" ಎಂದ.

ಜುಮ್ಮಿ ಒಂದೆರಡು ಎಲೆ ತೆಗೆದು ಅವನ್ನ ಸೀರೆ ನಲ್ಲಿ ವರೆಸಿ, ಒಂದು ಎಲೆಯನ್ನು ಅರ್ಧ ಮಾಡಿ ಇಟ್ಟುಕೊಂಡು, ಒಂದೂವರೆ ಎಲೆಯ ಜೊತೆಗೆ ದೆರಡು ಅಡಕೆ ಸೇರಿಸಿ 'ಕ್ವಾ' ಎಂದಳು.

ಕೂಡಲೇ ಸೀರ,

"ನನಿಗೂ ಕೊಡ್ತೆ ತಾಯಿ, ಆಟೊತ್ತಿಂದ ಬಾಯಿ ನ್ಯಸಾ ಅಂತಾ ಅದೆ." ಎಂದ.

"ಬಾಯಿ ನ್ಯಸ ನ್ಯಸಾ ಅನ್ನೋನು ಜೋಬಲ್ಲಿ ಯಲೆ ಕಿ ಮಡಿಕಂಡಿರಬೇಕು ಕಣೊ. ಯಣ್ಣೆ ಬ್ಯೆಣ್ಗೆ ಕಂಡಿತ ಹೆರೋಳಂಗೆ ನನ್ನ ಚೀಲ ನೋಡಿದೇಟಿಗೆ ಬಾಯಿ ಬುಡ್ತು ಅನ್ನು" ಎಂದಳು.

"ಇದ್ರು ಕೊಡೆ. ಯಲೆ ಅಡಕೆ ಕೊಡಕೂ ಆಟೊಂತರ ಶಾಡ್ತಿಯಲ್ಲ" ಎಂದ ಉಗ್ರಿ.

"ನೀನು ಸಸ್ನೆ ಕುಂತಗಳ್ಳ. ಯಲೆ ಅಡಕೆ ರೇಟು ದ್ದಿಲಾ? ತೆವುಲು ಮಾಡೋರು ತಗದಿಟಗಬೇಕು. ಸೀರ ಮಾವುನಿಗೇಳ್ಳಿಲ್ಲ" ಎನ್ನುತ್ತಲೇ ಜುಮ್ಮಿ ಯುಡಿಕೆ ಜೊತೆಗೆ ಒಣ ಸುಣ್ಣ ಸೇರಿಸಿ,

"ತಗಳೊ ಸೀರ ಮಾವ" ಎಂದಳು.

ಸೀರ ಎಲೆಯಡಿಕೆಯನ್ನು ಆಡು ಸೊಪ್ಪು ಮೇದಂತೆ ೇ ಉಸುರಿಗೆ ಬಾಯಾಡಿಸಿದ್ದರಿಂದ ಅವನ ತುಟಿ ಸುಡಿಯೆಲ್ಲಾ ಕೆಂಪೇರಿತು. ಅದನ್ನ ನೋಡಿದ ಉಗ್ರಿ, "ಸೀರ ಮಾವನ ಮುಖ ಎಡೂರಪ್ಪನ ಮುಖದಂಗೆ ವಾ ಅಂತದೆ ನೋಡೆ" ಎಂದ. ಗೊಗರಿಯುವ ಊಂದಿಗೆ ನಕ್ಕ ಸೀರ,

"ಎಡೂರಪ್ಪನಿಗೆ ಯಾರೊ ಮಾಟ ಮಾಡಿಸಿ ಬುಟ್ಟಿದ್ದರಂತೆ" ಎಂದು ಕುಚೋದ್ಯದ ಸಂಗತಿಯಂತೆ ಬಿತ್ತರಿಸಿದ.

"ಅವುನ ಮ್ಯಾಲ್ಯಾರು ಮಾಡಿಸಿದ್ದರ್ಲ" ಎಂದ ಕಾಳಮಾವ.

"ಸಿದ್ದರಾಮಯ್ಯನ ಮ್ಯಾಲೆ ಹೇಳ್ತವುನೆ" ಎಂದ ಉಗ್ರಿ.

"ಅಂಗರೆ ಸಿದ್ದರಾಮಯ್ಯ ಮಾಟ ಮಾಡಿಸಿದ್ದನೆ?"

"ಸಿದ್ದರಾಮಯ್ಯೆಲ್ಲಿ ಮಾಡಸಕ್ಕೋದನೊ ಮಾವ. ಈ ಎಡೂರಪ್ಪ ನನ್ನ ಮ್ಯಾಲೆ ಯಾರೋ ಮಾಟ ಮಾಡಿಸ್ಯವುರೆ ಅಂತ ಹೇಳಿ ಸುಮ್ಮನಿದ್ರೆ ಜನಗಳು ತಮಿಗೆ ಬೇಕಾದೋರ ತಿಳಕಳರು. ಎಡೂರನೆ ಬಾಯಿಬುಟ್ಟು ಸಿದ್ದರಾಮಯ್ಯನ ಹೆಸರೇಳಿರದ್ರಿಂದ ಅವುನೆ ಸಿಗಾಯ್ಕಂಡಂಗವುನೆ."

"ಸಿದ್ದರಾಮಯ್ಯ ಸಿಗಾಯ್ಕಂಡಿದ್ದನೆ?"

"ಥೂ, ಥೂ, ಅಂಗಲ್ಲ ನಾನೇಳಿದ್ದು, ಆ ಸಿದ್ದರಾಮಯ್ಯ ದೇವ್ರುಸ್ಥಾನಕ್ಕೆ ಹೋಗದಾಗ್ಲಿ, ಪೂಜೆ ಪುನಸ್ಕಾರ ಮಾಡದಾಗ್ಲಿ, ದೇವುರಿಗೆ ಒಂದು ಗಂಧದಕಡ್ಡಿ ಬೆಳಗದಾಗ್ಲಿ ಯಾವುದ್ನೂ ಮಾಡದಿಲ್ಲ. ಯಾರು ಬೇಕಾದ್ರು ನನ್ನ ಮೇಲೆ ಮಾಟ ಮಾಡ್ಲಿ ಅಂತ ಚಾಲೆಂಜ್ ಮಾಡ್ತನೆ. ಅಂಥೋನು ನನ್ನ ಮೇಲೆ ಮಾಟಮಾಡಿಸಿಬುಟ್ಟವುನೆ ಅಂತ ಎಡೂರಪ್ಪೇಳಿ ಸಿಗಾಯ್ಕಂಡವುನೆ ಅಂದೆ."

"ಎಡೂರಪ್ಪನ್ನ ನೋಡಿದ್ರೆ ಬಾಳ ಹೆದ್ರಿಕಂಡಂಗೆ ಕಾಣ್ತನೆ ಕಂಡ್ರ" ಎಂದಳು ಜುಮ್ಮಿ.

"ಊ ಕಣೆ, ಹೆದ್ರಿ ಬುಟ್ಟವುನೆ. ಅದ್ಕೆ ಸುತ್ತೂರು ಸ್ವಾಮಿ ಕರದು ಈ ಬಿಳಿ ಬಟ್ಟೆ ಹಾಯ್ಕೊ ಏನು ಆಗದಿಲ್ಲ ಅಂದವುರಂತೆ" ಎಂದು ಉಗ್ರಿ ಹೇಳುವುದಕ್ಕೂ ವಾಟಿಸ್ಸೆ ಬರುವುದಕ್ಕೂ ಒಂದೇ ಆಯ್ತು.

"ಸುತ್ತೂರು ಸ್ವಾಮಿ ಬಿಳಿಬಟ್ಟೆ ಹೊಚ್ಚಿದ್ರೂ ಅಂದ್ರೆ ತುಂಬಾ ಸಿಂಬಾಲಿಕ್ಕಾಗಿರಂಗೆ ಕಾಣ್ತದಲ್ಲೊ ಉಗ್ರಿ" ಎಂದ ವಾಟಿಸ್ಸೆ.

"ಅಂಗರೆ ಎಡೂರಪ್ಪ ವಂಟ ಅನ್ನು?"

"ನೋ ಡವುಟ್. ಸುತ್ತೂರು ಸ್ವಾಮಿ ತುಂಬ ಓದಿಕಂಡೋನು, ತಿಳಕಂಡೋನು. ಅವರು ಎಡೂರಪ್ಪನ ಮ್ಯಾಲೆ ಬಿಳಿಬಟ್ಟೆ ಹಾಕಿ 'ಹೆದರಬ್ಯಾಡ ಹೋಗಿ ಬಾ' ಅಂದ್ರೆ ಏನರ್ಥ? ಸೊ ಇಟೀಸ್ ರಿಯಲಿ ಡೈನ್‌ಜರ್!"

"ಮಾಟ ಮಂತ್ರದ ಇಸಿಯದಲ್ಲಿ ನೀವು ತಮಾಸಿ ಮಾಡ್ತಿರಿ. ನಾವು ಕಣ್ಣಾರ ನೋಡಿದ್ದಿವಿ ಗೊತ್ತೇ?" ಎಂದ ಸೀರ ಬೆದರುಗಣ್ಣಲ್ಲಿ.

"ಏನ್ನೋಡಿದ್ದಿ ಚಿಗಪ್ಪ ಕಮಾನ್ ಟೆಲ್ ಮಿ?"

"ಇದೇ ತಮ್ಮಯ್ಯನೆಡ್ತಿ ಜವುರಪ್ಪನ ಜೇಬಲ್ಲಿ ನಲವತ್ತು ರೂಪಾಯಿ ಹೊತ್ತಗಂಡಿದ್ಲು. ಆ ಕಾಲಕ್ಕೆ ಯಾರ ಕಾಲಗೊತ್ತ ಅದು? ನೇರು ಪ್ರಧಾನಿಯಾಗಿದ್ದ ಆ ಕಾಲ್ದಲ್ಲಿ ನಲವತ್ತು ರೂಪಾಯಿ ಅಂದ್ರೆ ನಲವತ್ತು ಸವುರವೆಯ. ಅವುನು ಕೇಳಿದ. ಯಾರೂ ಬಾಯಿಬುಡ್ಲಿಲ್ಲ, ಹೋಗಿ ಹರಿನಮ್ಮನ ಮರೆಬಿದ್ದು ಮಾಟ ಮಾಡಿಸೇಬುಟ್ಟ. ಮೂರು ಮಕ್ಕಳ ತಾಯಿ ಮರಿಯಮ್ಮ ಚಟ್ಟಂತ ನ್ಯಗದು ಬಿದ್ದೋದ್ಲು ಗೊತ್ತೇ?" ಎಂದ. ಸೀರ ಆ ಕ್ಷಣಕ್ಕೂ ಹೆದರಿದವನಂತೆ ನೋಡಿದ.

"ನಿಜವೆ ದ್ವಡಪ್ಪ?" ಎಂದ ವಾಟಿಸ್ಸೆ.

"ಚೆನ್ನಾಗಿದ್ದೊಳೆ ಸತ್ತೋದ್ಲಪ್ಪ. ಅದೇನಾರ ಆಗ್ಲಿ ಸಾಯುವಾಗ ತಪ್ಪೊಪ್ಪಿಕೊಂಡೇ ಸತ್ಲು" ಎಂದ ಕಾಳಮಾವ.

"ಥೂ, ಥೂ, ಉಗ್ರಿ ನೀನು ಎಡೂರಪ್ಪನಂಗೆ ಮಾತಾಡ್ತಿ ಯಾವುದೆ ಹತ್ಯ ಜೀವ ಇರುವಾಗ್ಲೆ ಸ್ವಡಿಯೋದು. ಸತ್ತ ಮ್ಯಾಲೆ ಯಾರಾರ ಸಾಯಿಸ್ತರ? ಆ ಎಡೂರಪ್ಪನಿಗೂ ಬುದ್ದಿಲ್ಲಾ ನಿನಿಗೂ ಇಲ್ಲ"

"ಅಂತೂ ಎಡೂರಪ್ಪ ಅವದಿಗೂ ಮುಸ್ನ ವಂಟವುನೆ ಅಂತಿಯಾ."

"ಡ್ಯಪನೆಟ್ಲಿ ಕಣೊ. ಅವುನ್ನ ಕಳಸದಕ್ಕೆ ನ್ಯಡಿತಾಯಿರೊ ಕಾರ್ಯಾಚರಣೆನ ಅವುನು ಮಾಟಮಂತ್ರದ ಮ್ಯಾಲೆ ಹಾಕ್ತ ಕುಂತವುನೆ. ರಿಯಲಿ ಎಡೂರಪ್ಪ ಮನೋವೈದ್ಯರಿಗೆ ಒಳ್ಳೆ ಕೇಸು. ಯಾಕೆ ಅಂದ್ರೇ, ದೂರದಲ್ಲಿ ಬಿದ್ದಿರೊ ಜಲ್ಲಿ ಕಲ್ಲು ನಿಂಬೆಹಣ್ಣಿನಂಗೆ ಕಾಣ್ತದೆ. ವಿಧಾನಸೌಧದತ್ರ ಬಿದ್ದಿರೊ ಹಳದಿ, ಕೆಂಪು, ಹೂವು, ಹರಸಣ, ಕುಂಕುಮದಂಗೆ ಕಾಣ್ತದೆ. ದ್ಯಾವೇಗೌಡ್ರು ಮಾಟದ ಎದುರಿಗೇ ಕುಂತಂಗೆ ಕಾಣ್ತರೆ. ಆದ್ರೆ ಅವುರೆಸರೇಳಕ್ಕಾಗದೆ ಸಿದ್ದರಾಮಯ್ಯನ ಹೆಸರೇಳ್ತನೆ. ಜೊತೆಗೆ ಇನ್ನು ಎರಡೊರ್ಸ ಇರ್ತಿನಿ ಅಂತನೆ. ನನ್ನನ್ನ ಯಾರೂ ಅಲ್ಲಾಡಸಕ್ಕಾಗದಿಲ್ಲ ಅಂತನೆ. ಇದನ್ನೆಲ್ಲ ನೋಡಿದ್ರೆ ಅವುನೆ ಹೊಂಟವುನೆ ಕಣೊ. ಪೂರ್‌ಫೆಲೊ, ಜಾತಿ ಸ್ವಾಮಿಗಳ ಜೊತೆ ಇದ್ರು ಹೆದರತನೆ ಅಂದ್ರೆ ಮಾಟದ ಯಪೆಕ್ಟು ಸರಿಯಾಗೆ ವರುಕು ಮಾಡ್ತ ಅದೆ" ಎಂದ ವಾಟಿಸ್ಸೆ.



"ಸೈಕಾಲಜಿ ಯಪೆಕ್ಟು ದ್ವಡಪ್ಪ ಅದು. ಹರಿನಮ್ಮ ನನ್ನ ತಗಂಡೇ ತಗತಳೆ ಅಂದಕಂಡವ್ಳೆ. ಅದು ಮನಸಿನ ಮ್ಯಾಲೆ ಯಪೆಕ್ಟ್ ಮಾಡ್ಯದೆ. ಸಾಯದ್ಕು ಮದ್ಲೆ ಸತ್ತವ್ಳೆ" ಎಂದ ವಾಟಿಸ್ಸೆ.

"ಈಗೆಡೂರಪ್ಪನೂ ಅಂಗೇ ಬಾಯಿಬುಟ್ಟವುನಲ್ಲೊ ವಾಟಿಸ್ಸೆ. ನನ್ನನ್ನ ಜೀವ ಸಯಿತ ಮುಗಸಕ್ಕೆ ಮಸಲತ್ತು ನ್ಯಡದದೆ ಅಂತನಲ್ಲಾ, ಅದೇ ಅರ್ಥಲ್ಲವೆ?"

"ನೀನು ನಂಬತಿಲ್ಲ ಮಾಟವೇ?" ಎಂದಳು ಜುಮ್ಮಿ.


"ಲಾಯರ್ ಸಿರಾಜಿನ್, ಬಾಲರಾಜ ಮಾಡಿರೊ ಮಾಟದಲ್ಲಕ್ಕಾ ಅದ ನಾನು ನಂಬತಿನಿ. ಎಡೂರಪ್ಪನ ಬಾಯಿಲಿ ಬಂದಿರೊ ಮಾಟದ ಪ್ರಸ್ತಾಪ ಹುಡಿಕ್ಯಂಡೋದ್ರೆ ಅಲ್ಲಿಗೆ ತಲುಪ್ತದೆ, ಅಂಡರ್‌ಸ್ಟ್ಯಾಂಡ್?"

"!?"

ಅಸಹಾಯಕ ಆಸಾಮಿ

'ರಾಮಯ್ಯನವರು ನಿಮ್ಮನ್ನು ನೋಡಲು ನಾಲ್ಕು ಗಂಟೆಗೆ ಬರ್ತಾರಂತೆ. ಈಗತಾನೆ ಫೋನ್ ಮಾಡಿದ್ದರು' ದು ನನ್ನ ಸಹಾಯಕ ಹೇಳಿದ. ಯಾಕೆ, ಎಂದು ಕೇಳಲಿಲ್ಲ. ರಾಮಯ್ಯನವರು ನನಗೆ ಹಳೇ ಪರಿಚಯವಾದ್ದರಿಂದ ರು ಯಾಕೆ ಬರುತ್ತಿದ್ದಾರೆ ಎಂದು ಕೇಳುವುದರಲ್ಲಿ ಅರ್ಥವಿರಲಿಲ್ಲ. ಆದರೆ ರಾಮಯ್ಯನವರ ಫೋನ್ ಬದಲಾಗಿತ್ತು; ಗೆ ಎಲ್ಲಿಂದಲೋ ಫೋನ್ ಮಾಡಿದ ಅವರು ಯಾವ ಫೋನ್ ಹತ್ತಿರ ಇದ್ದಾರೆಂದು ಹೇಳಿರಲಿಲ್ಲ. ಇದರಿಂದೆಲ್ಲ ಗೆ ತುಂಬ ಸಿಟ್ಟು ಬಂದಿತ್ತು. ಯಾಕೆಂದರೆ ನಾನು ಯಾರನ್ನೂ ನೋಡುವ ಸ್ಥಿತಿಯಲ್ಲಿರಲಿಲ್ಲ. ತೀವ್ರ ಜಡತ್ವ, ಬ್ಬುವಂಥ ದುಗುಡ, ಯಾವುದರಲ್ಲೂ ಆಸಕ್ತಿ ಇಲ್ಲ. ಸುಮ್ಮನೇ ಕುಳಿತೆ. ಅವರು ನಾಲ್ಕು ಗಂಟೆಗೆ ಸರಿಯಾಗಿ ದರು. ಈಚೆಗೆ ಸಿಕ್ಕಿಂನ ಗ್ಯಾಂಗ್ಟಕ್‌ನಿಂದ ನನಗೆ ಕಾಗದ ಬರೆದಿದ್ದ ರಾಮಯ್ಯ ಇಳಿದುಹೋಗಿದ್ದರು. ಮಾತು ತ ಸಡಿಲಗೊಂಡ ಹಲ್ಲುಗಳ ಮೂಲಕ, ಅಸ್ಥಿರ ಶ್ವಾಸಕೋಶಗಳಿಂದ ಬಂದಂತಿದ್ದವು. ಜನತಾದಳದ ಹಲವರು ಮಯ್ಯನವರ ಬಗ್ಗೆ ಕೆಟ್ಟದಾಗಿ ಮಾತಾಡಿಕೊಂಡು, ಕಾರಣವೇ ಇಲ್ಲದೆ ಅವರ ಮೇಲೆ ಭ್ರಷ್ಟತೆಯ ಗೂಬೆ ಸಿದ್ದರು. ಮನೆಯವರು ಕೂಡ ಅವರ ನಿಷ್ಠುರ ಪ್ರಾಮಾಣಿಕತೆಯ ಬಗ್ಗೆ ಬೇಸರಗೊಂಡು ಜಗಳ ಆಡಿದ್ದರು. ಸರಿ ಇರಲಿಲ್ಲ. ರಾಮಯ್ಯನವರ ಕಾರು ಕೂಡ ಅವರಿಗೆ ಸಿಗದಂತೆ ಗ್ಯಾರೇಜಿಗೆ ಬೀಗ ಹಾಕಿಕೊಂಡು ೇಗಿದ್ದರು. ನಾನು ಈ ರಾಮಯ್ಯನವರನ್ನು ನೋಡಿ ಖೇದಗೊಂಡು ಕುಳಿತೆ. ಅವರ ಮಾತುಗಳನ್ನೆಲ್ಲ ಕೇಳಿ ರಗೊಂಡು ಹೇಳಿದೆ, "ನೋಡಿ ರಾಮಯ್ಯನವರೆ, ಜೀವನ ತುಂಬ ಕಠಿಣವಾದದ್ದು. ನೀವು ನಿಮ್ಮ ಮಕ್ಕಳನ್ನು, ಟುಂಬವನ್ನು ಬೀದಿಯಲ್ಲಿ ಬಿಟ್ಟಿಲ್ಲ; ಅವರಿಗೆ ನೆಮ್ಮದಿಯಾಗಿರುವ ವ್ಯವಸ್ಥೆಯನ್ನು ವಕೀಲರಾಗಿಯೇ ಮಾಡಿದ್ದೀರಿ. ರೂ ಅವರು ನಿಮ್ಮನ್ನು ಭ್ರಷ್ಟನಾಗು, ಎಲ್ಲರಂತೆ ಹಣದಲ್ಲಿ ಈಜಾಡು ಅಂತ ಕೇಳಿದರೆ ಅವರನ್ನು ಬಿಟ್ಟು ವ ಧೈರ್ಯ ನಿಮಗಿದ್ದರೆ ಮಾತ್ರ ಅವರು ಸರಿಹೋಗ್ತಾರೆ. ಪತ್ರಿಕಾಗೋಷ್ಠಿ ಕರೆದು ಅವರ ಹೇಳಿ ಅವರನ್ನು disown ಮಾಡಬೇಕಾದ್ದು ನಿಮ್ಮ ಮೊದಲ ಕರ್ತವ್ಯ. ಆಮೇಲೆ ಈ ೇಗೌಡರನ್ನು ನೋಡಿಕೊಳ್ಳಬಹುದು. ನೀವು ತೊಳಲಾಡುವುದನ್ನು ನೋಡಿ ಆಶ್ಚರ್ಯವಾಗ್ತಿದೆ. ನ್ನಿಸುವಂತೆ, ಯಾವುದು ನಮಗೆ ನಿಜವಾದ ಸಂತೋಷ, ಸಾರ್ಥಕ್ಯ ಕೊಡುವುದಿಲ್ಲವೋ ಒಳ್ಳೆಯ ಕೆಲಸವಲ್ಲ. ಗಾಂಧೀಜಿ ಕೂಡ ಎಷ್ಟೇ ತ್ಯಾಗ ಮಾಡಿ ರಾಜಕೀಯದಲ್ಲಿದ್ದರೂ ದಿಂದ ಖುಷಿಪಡ್ತಿದ್ದರು, ರಾಜಕೀಯದಿಂದ ಸಂತೋಷ ಪಡೀತಿದ್ರು. ನಿಮಗೂ ಈ ಕೀಯ ಖುಷಿ ಕೊಡಬೇಕು, ಇಲ್ಲದಿದ್ದರೆ ಅದು ಒಳ್ಳೆಯದಲ್ಲ" ಅಂದೆ. ರಾಮಯ್ಯ ಾಡುತ್ತಾ ಹೋದರು. ನಾನು ಹೇಳಿದೆ, "ಕರ್ನಾಟಕದ ರಾಜಕೀಯ crisis ನಲ್ಲಿದೆ. ನಾವು ದಿಕ್ಕುತೋಚದ ಸ್ಥಿತಿಯಲ್ಲಿದ್ದೇವೆ. ಆದರೆ ನೆನಪಿಡಿ, ನಾವು ನಿಮ್ಮಂಥ ರಾಜಕಾರಣಿಗಳ ಲಕ್ಷಿಸ್ತೇವೆ. ನೀವು ಒಬ್ಬಂಟಿಯಲ್ಲ, ನಿಟ್ಟುಸಿರುಗರೆಯಬಾರದು. ನೀವೇ ಅಸಹಾಯಕರಾದ್ರೆ ಗೆ ಹೇಗೆ ಧೈರ್ಯ, ಹುಮ್ಮಸ್ಸು ತರ್ತೀರಿ?" ಅಂದೆ.

ರಾಜಕೀಯ ಇಷ್ಟು ಕ್ರೂರವಾದದ್ದು ಮೇಲೆ ಬರುವುದಕ್ಕಾಗಿ ರಾಜಕೀಯದಲ್ಲಿ ಯಾರ ಬನ್ನಾದರೂ ಕತ್ತರಿಸುವ ಕೇಡಿಗಳು ಇದ್ದಾರೆ. ಜನಕ್ಕೆ ನಾವೆಲ್ಲ ಹೇಳುವುದಕ್ಕೆ ಮುಂಚೆಯೇ ರಾಜಕಾರಣಿಗಳಿಗೆ ಯಾರು ಕೇಡಿಗಳು, ಯಾರು ಒಳ್ಳೆಯವರು ಎಂಬುದು ಗೊತ್ತಾಗಿರುತ್ತದೆ.



ವೃದ್ಧಾಪ್ಯದ ಬಿಸಿನೆನಪು

ಪಾವೆಂ ಆಚಾರ್ಯ ಅವರು ಸ್ವಲ್ಪ ಮನಸ್ಸು ಮಾಡಿದ್ದರೆ ದೊಡ್ಡ ಧ್ವನಿಯಲ್ಲಿ, ಸಾರ್ವಜನಿಕವೆನ್ನಿಸುವ ಹಾಗೆ ಅಸಹಜವಾಗಿ ಮಾತಾಡಬಹುದಿತ್ತು. ಎಲ್ಲರಂತೆ ವಿಶ್ವವಿದ್ಯಾಲಯದಲ್ಲಿ ದೊಡ್ಡದೊಡ್ಡ ಪರೀಕ್ಷೆ ಪಾಸ್ ಮಾಡದ ಪಾವೆಂ ಡಾಕ್ಟರಲ್ಲ, ಮೀಮಾಂಸಕಾರರಲ್ಲ.



ಯಾವುದೋ ಒಂದು ಮಾಸಪತ್ರಿಕೆಯ ಉಪಸಂಪಾದಕರಾಗಿದ್ದು ತಮಾಷೆ ಲೇಖನ ಬರೆಯುತ್ತಿದ್ದ ಈತ ಇಳಿವಯಸ್ಸಿನಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಎಂದೋ ಓದಿದ ಸಂಸ್ಕೃತದ ತುಣುಕು ಪದ್ಯಗಳನ್ನು ಕನ್ನಡಕ್ಕೆ ಇಳಿಸಲೆತ್ನಿಸಿದರು. ಮುಖ್ಯವಾಗಿ ಸುಡುಸುಡುವ ಲೈಂಗಿಕ ಪದ್ಯಗಳಾದ ಇವನ್ನು ಕನ್ನಡೀಕರಿಸಲು ಪಾವೆಂ ಹೃದಯ ಬೆಚ್ಚಗಿರಲಿಲ್ಲ, ಹೆಣ್ಣಿನ ಆಸೆ ಆದಮ್ಯವಾಗಿ ನುಗ್ಗಿಬರುತ್ತಿರಲಿಲ್ಲ, ಪ್ರೇಮದ ವಿಚಾರ ತೆಗೆದುಕೊಂಡರೆ ಮಾತು ಉಕ್ಕಿಉಕ್ಕಿ ಹರಿಯುತ್ತಿರಲಿಲ್ಲ, ಆದ್ದರಿಂದ ಈ ಪದ್ಯ ಸ್ವಲ್ಪ ತಣ್ಣಗಿವೆ. ಆದರೂ ಮೂಲವನ್ನು ಊಹಿಸಬಹುದು. ಫೂರ್ತಿ ಚೆಂದವನ್ನು ಸವಿಯಬಹುದು. ಬಹಳ ದಿನದಿಂದ ನನ್ನಲ್ಲಿದ್ದ ಇವರ ಪುಸ್ತಕವನ್ನು ತಿರುವಿಹಾಕುತ್ತಿದ್ದೆ-ಬಿಸಿಗಾಗಿ ತವಕಿಸುತ್ತಾ. ಪುಟಾಣಿ ಪದ್ಯಗಳು ಕೆಲವು ಹೀಗಿದ್ದವು...

ಹೋಗಲೇ ಬೇಕಿರಲು ಹೋಗಿಬಿಡು ನಲ್ಲ,
ಹೋಗುವೆನು ಹೋಗುವೆನು ಎನ್ನುತಿರಬೇಡ;
ಸಿಡಿಲು ಬಂದೆರಗಿದರೆ ನೋವಿನರಿವಿಲ್ಲ
ಎರಗಲಿದೆಯೆಂಬರಿವು ಕಲಕುವುದು ಜೀವ

*

ತುಟಿಯ ಸವಿದಾಯ್ತು ಮೊಲೆಯ ಮಿಡಿದಾಯ್ತು,
ತೊಡೆಯ ಬಟ್ಟೆಯೂ ಸರಿದುಹೋಯಿತು;
ಉಡಿಯ ಗಂಟನೆಡೆ ತಡೆವೆಯೇಕೆ ಕೈ
ಆನೆ ಮಾರಿ ಅಂಕುಶಕೆ ಜಗಳವೇ?

*

ಹೊಗಳುನಲ್ಲನು ಬೇರೆ, ಕೊಡುವ ನಲ್ಲನು ಬೇರೆ.
ಕೊಳುವ ನಲ್ಲನು ಮತ್ತೆ ಬೇರೆ,
ಕಾವ ನಲ್ಲನು ಬೇರೆ, -ಬೆಲೆವೆಣ್ಣು ಬದುಕಿನಲಿ,
ಮನದ ಮೆಚ್ಚಿನ ನಲ್ಲ ಬೇರೆ.

*

ಕಣ್ಣು ಹುಬ್ಬು ಕುಡಿನೋಟದೆ
ಹೆಚ್ಚೆಸಗಿತು ತಪ್ಪು;
ನಿರಪರಾಧಿ ಜಘನವದಕೆ
ತಿನ್ನಬೇಕು ಪೆಟ್ಟು.

*

ತನ್ನ ಗುಣಗಳ ತಾನೆ ಡಂಗುರ
ಹೊಯ್ಯಲೇನು ಸುಖ?
ತನ್ನ ಕುಚಗಳ ತಾನೆ ಮಿಡುವುದು
ಹೆಣ್ಣಿಗೇನು ಸುಖ?

-ಜನವರಿ 4, 1995

ಮಾಟ-ಪ್ರತಿಮಾಟ ವಿಶ್ವವಿದ್ಯಾಲಯ!

ಎಚ್.ಎಲ್. ಕೇಶವಮೂರ್ತಿ

ಅಣಕ



ಲೆಗೂಸೆ ಪೊರೆ ಕಳಚಿದ ಹಾವನ್ನು ನೋಡಬೇಕು. ಮಿರಮಿರ ಅಂತ ಮಿಂಚುತ್ತಿರುತ್ತೆ, ಮೈತುಂಬ ಹೊಸ ಕಳೆ ತುಂಬಿಕೊಂಡಿರುತ್ತೆ ಗುಣದಲ್ಲಿ ಬದಲಾವಣೆ ಆಗದಿರಬಹುದು. ಮೈಗೆ ಮೆರುಗು ತಂದುಕೊಂಡು ಹೊಸ ಹಾವಿನ ತರಹ ಕಾಣುತ್ತೆ. ಇಂತಹದ್ದೆ ಬದಲಾವಣೆ ಯಡ್ಯೂರಪ್ಪನವರಲ್ಲೂ ಆಗಿರುವಂತಿದೆ. ತುಮಕೂರಿನ ನಡೆದಾಡುವ ದೇವರು 'ಹೊಸ ಬಟ್ಟೆ, ಹೊಸ ಶಲ್ಯ ಧರಿಸಿ ಸುತ್ತೂರಿಗೆ ಬಾ' ಎಂದು ಅಪ್ಪಣೆ ಕೊಡಿಸಿತ್ತಂತೆ. ಆ ಮಾತಿನಂತೆ ನಡೆದ ಅವರು ಸಿದ್ಧಗಂಗೆಗೆ ಸರ್ಕಾರಿ ಹೆಲಿಕಾಪ್ಟರ್‌ನಲ್ಲಿ ಹೋಗಿ ಖಾಸಗಿ ದೇವರನ್ನು ಆಸೀನರೂಢರನ್ನಾಗಿಸಿಕೊಂಡು ಸುತ್ತೂರಿಗೆ ಬಂದರಂತೆ. ಅವರು ಹೊಸ ಬಟ್ಟೆ ತೊಟ್ಟಿದ್ದರಿಂದ ಹೊಸ ಮನುಷ್ಯ ಆಗಿ ಹೋದರಂತೆ! ಇವತ್ತಿನಿಂದ ಅಂದರೆ 31.1.2011 ರಿಂದ ಅವರು ಹೊಸ ಮನುಷ್ಯನಾಗಿದ್ದೀನಿ ಅಂದರಂತೆ. ಆರೆ ಈ ಹಿಂದೇನೂ ಹೀಗಂದ ಹಾಗೆ ಇತ್ತಲ್ಲ. 'ಇಂದಿನಿಂದ ಹೊಸ ಯಡ್ಯೂರಪ್ಪನ್ನ ಕಾಣ್ತೀರಿ' ಎಂದು ಹಲವು ಸಲ ಹೇಳಿದ ಹಾಗಿತ್ತಲ್ಲ ಅಂದರೆ ಇದು ಬೇರೆಯದ್ದೇ ತರಹದ್ದು. ಆಗೆಲ್ಲ ಹಳೆ 'ಬಟ್ಟೆ ಹಾಕಿಕೊಂಡು ಹೇಳಿದ್ದು, ಈಗ ಹೊಸ ಬಟ್ಟೆ ಧರಿಸಿ ಹೇಳಿದ್ದಾರೆ. ಹೊಸ ಬಟ್ಟೆ ತೊಟ್ಟರೆ ಹೊಸ ಮನುಷ್ಯ ಆಗುತ್ತಾನೆ ಎಂಬುದು ಯಡ್ಯೂರಪ್ಪ ಮಂತ್ರವೋ ಅಥವಾ ನಡೆದಾಡುವ ದೇವರ ಮಂತ್ರವೋ ಎಂಬುದು ಸ್ಪಷ್ಟ ಆಗಿಲ್ಲ.

ಇರಲಿ. ಇಂತಹ ಮಹಾನುಭಾವರಿಗೆ ವಿರೋಧಿಗಳು ಒಂದೊಂದಲ್ಲ ಕಾಟ ಕೊಡ್ತಿರೋದು. ಮುಖ್ಯಮಂತ್ರಿ ಆಗುವ ಮೊದಲೇ 'ಇವ ನೆಗೆದು ಬೀಳಲಿ' ಎಂದು ಶಿಕಾರಿಪುರದ ಹೆಲಿಪ್ಯಾಡ್‌ನಲ್ಲಿ ಮಾಟ ಮಾಡಿಸಿದ್ದು. ಅವರಿಗೇ ಮಾಡ್ಸಿದ್ದು ಎಂದು ಹೇಗೆ ಹೇಳುತ್ತೀರಿ ಅಂದರೆ ಮಾಟ ಮಾಡಿಸಿದ್ದ ಸ್ಥಳದಲ್ಲಿ ಯಡ್ಯೂರಪ್ಪನವರ ಚೆಡ್ಡಿ ಸಿಕ್ಕಿತ್ತು! ಅವರದ್ದೇ ಆ ಚೆಡ್ಡಿ ಎಂದು ಹೇಗೆ ಹೇಳುತ್ತೀರಿ ಅಂದರೆ ಶಿಕಾರಿಪುರದ ಮಹಾಜನತೆ 'ಇದು ಯಡ್ಯೂರಪ್ಪನವರ ಚೆಡ್ಡಿಯೇ' ಎಂದು ದೃಢೀಕರಿಸಿತ್ತು! ಇದಾಯಿತಲ್ಲ, ಮೊನ್ನೆ ಮೊನ್ನೆ 'ವಿಶ್ವಾಸಮತ' ಯಾಚಿಸುವ ಸಂದರ್ಭದಲ್ಲಿ ವಿಧಾನಸೌಧದ ಹೆಬ್ಬಾಗಿಲಿನಲ್ಲೇ 'ಇವನು ಸೋತು ಸುಣ್ಣ ಆಗಲಿ' ಎಂಬ ಹರಕೆಯೊಂದಿಗೆ ಕುಂಕುಮ ಹಚ್ಚಿದ ನಿಂಬೆಹಣ್ಣು, ಹುಂಜನ ತಲೆ ಇನ್ನೂ ಏನೇನೋ ಇಟ್ಟು ಮಲೆಯಾಳಿ ಮಾಂತ್ರಿಕನಿಂದ ಮಾಟ ಮಾಡಿಸಿ ಆದರೂ ಜಯಶೀಲರಾದರು ಅನ್ನಿ. ಈಗ ನೋಡಿದರೆ ದೇಶದ ದೊರೆಗೇ ಮಾಟ ಮಾಡಿಸಿದ್ದಾರಂತೆ. ಅದು ಇವರನ್ನು ಮುಗಿಸಲು ಮಾಡಿರುವ ಮಾಟ ಅಂತೆ! ಆಶ್ಚರ್ಯ ಅಂದರೆ ಸನ್ಮಾನ್ಯದ ಅಧಿಕಾರದ ಗದ್ದುಗೆ ಅಲುಗಾಡುವ ಸಂಭವ ಬಂದಾಗಲೆಲ್ಲ ಮಾಟ ಮಾಡಿಸುವುದು ಹಾಗೂ ಅದು ಬಯಲಾಗುತ್ತಿರುವುದು! ಇದರಿಂದಾಗಿ ದೊರೆಯೇ ದಿಗಿಲುಗೊಂಡಿರುವನಂತೆ! ಶಾಲೆಯಿಂದ ಮಕ್ಕಳು ಬರುವುದು ಸ್ವಲ್ಪ ತಡವಾದರೂ ತಾಯಿಯಾದವಳ ಎದೆ ಡವಡವ ಅಂತ ಹೊಡ್ಕೊಳ್ಳದಲ್ಲ ಹಾಗೆಯೇ ಇವರಿಗೆ ವಿಧಾನಸೌಧದಿಂದ ಮತ್ತೆ ಹೋಗಿ ಮನೆ ಸೇರುತ್ತೇನೋ ಇಲ್ಲವೋ ಎಂಬ ದಿಗಿಲು ಕಾಡುತ್ತಂತೆ. ಇದನ್ನೆಲ್ಲ ಖುದ್ದು ಮುಖ್ಯಮಂತ್ರಿಗಳೇ ಸುತ್ತೂರು ಪುಣ್ಯಕ್ಷೇತ್ರದಲ್ಲಿ ಹೇಳಿಕೊಂಡಿದ್ದಾರೆ. ಅದೂ ನಡೆದಾಡುವ ದೇವರು ಮತ್ತು ಸುತ್ತೂರು ಮಠಾಧೀಶರ ದಿವ್ಯಸಾನಿಧ್ಯದಲ್ಲಿ!

ಈ ಶತ್ರು ನಿರ್ಮೂಲನಾ ಮಾಟವನ್ನು ಯಾರು ಮಾಡಿಸಿರಬಹುದು ಎಂದರೆ ಇನ್ನು ಯಾರು ದೇವೇಗೌಡ



ಕುಟುಂಬ ಎಂದು ಧಾರಾಳವಾಗಿ ಹೇಳಬಹುದು. ಆದರೆ ಇದಕ್ಕೆ ಕಾರಣೀಭೂತರಾದವರು ಅವರಲ್ಲವಂತೆ! ಸಿದ್ಧರಾಮಯ್ಯ ಎಂಬ ಪಾಪಿ ಈ ಕೃತ್ಯದ ರೂವಾರಿಯಂತೆ. ಮಾಟ ಮಾಡಿ ತನಗಾಗದವರನ್ನು ನಿರ್ಮೂಲ ಮಾಡಬಹುದು ಎಂಬ ಸತ್ಯ ಅವರಿಗೆ ಹೊಳೆದಿದ್ದಾದರೂ ಹೇಗೆ ಎಂಬುದಕ್ಕೆ ಸನ್ಮಾನ್ಯ ಯಡ್ಯೂರಪ್ಪನವರೇ ಉತ್ತರಿಸಿದ್ದಾರೆ. ಅದೇನು ಅಂದರೆ ಸಿದ್ಧರಾಮಯ್ಯ ದೀರ್ಘಕಾಲ ದೇವೇಗೌಡರ ಬಳಿ ಇದ್ದವರು. ಅವರಿಂದ ಈ ವಿದ್ಯೆ ಕಲಿತುಕೊಂಡಿದ್ದಾರಂತೆ! ಕಲಿತು ಅವರೇ ಮಾಡಿಸಿದ್ದಾರೆ ಎಂದು ಯಡ್ಯೂರಪ್ಪನವರ ದೃಢ ನಂಬಿಕೆ ಇರುವಂತಿದೆ. ಸಿದ್ಧರಾಮಯ್ಯನವರೇ ಮಾಟ ಮಾಡಿಸಿಧ್ದಾರೋ ಅಥವಾ ಇಂತಹ ಆರೋಪವೊಂದು ತಮ್ಮ ಕುಟುಂಬದ ಮೇಲೆ ಬಂದರೆ ಮಹಾಜನತೆ ಸುಲಭವಾಗಿ ನಂಬುವಂತಹ ಕೀರ್ತಿ ತಮ್ಮ ವಂಶದ್ದಾದ್ದರಿಂದ ಅವರ ಹೆಸರಿನಲ್ಲಿ ದೇವೇಗೌಡ ಕುಟುಂಬವೇ ಮಾಡಿಸಿದ್ದಾರೋ ಎಂಬ ಅನುಮಾನಕ್ಕೆ ಸ್ಪಷ್ಟ ಉತ್ತರ ಸಿಕ್ಕಿಲ್ಲ.

ಕುಮಾರಸ್ವಾಮಿಯವರ ಹತ್ತಿರ 'ಹೀಗೀಗೆ ಅಂತಾಲ್ರಿ' ಅಂತ ಕೇಳಿದ್ರೆ 'ಮಾಟಗೀಟ ಇಂತಹವಕ್ಕೆಲ್ಲ ಶೋಭಾ ಕರಂದ್ಲಾಜೆನೆ ಅಥಾರಟಿ. ಬೂದಿ ಎರಚಿ ಬುದ್ಧಿ ಮಂಕು ಮಾಡೋದ್ರಲ್ಲಿ ಆಕೆ ಪ್ರವೀಣೆ. ಆಕೇನ್ನ ವಿಚಾರಿಸ್ರಿ' ಅಂತ ಲೇವಡಿ ಮಾತೆ ಆಡ್ತಾ ಎಲ್ಲೆಲ್ಲಿಗೋ ಕನೆಕ್ಷನ್ ತಗೊಂಡೋಗ್ತಾರೆ. ಹೇಗಾದರೂ ಇರಲಿ ಶೋಭಕ್ಕನ್ನೆ ಒಂದು ಮಾತು ಕೇಳಿಬಿಡೋಣ ಅಂದ್ರೆ ಕೈಗೆ ಬಾಯಿಗೆ ಸಿಗುವಲ್ರು.

ಇದು ಒಂದು ಕಡೆ ಇರಲಿ. ಯಡ್ಯೂರಪ್ಪನವರ ಮಾತ ಒಪ್ಪಿದರೆ ಅವರ ಜೀವ ಎಲ್ಲಿದೆ ಅನ್ನುವುದನ್ನು ಸಿದ್ಧರಾಮಯ್ಯ ಕಂಡು ಹಿಡಿದಿದ್ದಾರೆ ಎನ್ನುವುದನ್ನ ಒಪ್ಪಲೇಬೇಕಾಗುತ್ತೆ. ಚಂದಮಾಮ ಕತೆಗಳಲ್ಲಿ ಬರುತ್ತಲ್ಲ ರಾಕ್ಷಸನ ಜೀವ ಎಲ್ಲಿದೆ ಅನ್ನೋದು. ಅದೇ ಏಳು ಸಮುದ್ರದ ಆಚೆ ಒಂದು ಕೀಳು ಸಮುದ್ರ. ಅಲ್ಲೊಂದು ಆಲದ ಮರ. ಅದರಲ್ಲಿ ಒಂದು ಪೊಟರೆ. ಅದರೊಳಗೆ ಒಂದು ಪಂಜರ. ಆ ಪಂಜರದೊಳಗೆ ಒಂದು ಗಿಣಿ. ಆ ಗಿಣಿಯಲ್ಲಿರುತ್ತೆ ಅವನ ಪ್ರಾಣ. ಗಿಣಿ ಕಾಲು ಕಿತ್ತರೆ ರಾಕ್ಷಸನ ಕಾಲು ಬಿದ್ದೋಗುತ್ತೆ, ಕತ್ತು ಹಿಸುಕಿದರೆ ರಾಕ್ಷಸನ ಪ್ರಾಣಪಕ್ಷೀನೆ ಹಾರಿ ಹೋಗುತ್ತದೆ. ರಾಕ್ಷಸನ ಪ್ರಾಣ ಆ ಗಿಣಿ ಒಳಗಿರುತ್ತಲ್ಲ, ಅದನ್ನ ಜೋಪಾನವಾಗಿ ಕಾಯಲು ಭಯಂಕರ ಪ್ರಾಣಿ ಪಕ್ಷಿಗಳು ಇರುತ್ತವೆ. ಅವನ್ನು ದಾಟಿ ಪಂಜರದ ಒಳಗಿನ ಗಿಣಿ ಹಿಡಿಯಬೇಕು. ಅದು ರಾಕ್ಷಸನ್ನ ಸಾಯಿಸೋಕೆ ಬಂದಿರೋ ರಾಜಕುಮಾರನಿಗೆ ತಿಳಿದಿರುತ್ತದೆ. ಹಾಗೇ ಯಡ್ಯೂರಪ್ಪನವರ ಜೀವ ವಿಧಾನ ಸೌಧದ ಮೂರನೆ ಮಹಡೀಲಿ ಇರೋ ಕುರ್ಚೀಲಿ ಇದ್ದಿರಬೇಕು. ಅದನ್ನ ಕಾಯೋಕೆ ಅಂತಾನೆ ಹಲವು ಮಠಗಳು, ಅವುಗಳ ಭಕ್ತರು ಇರುತ್ತಾರೆ. ಅವರನ್ನು ವಿಧಾನಸೌಧ ಬಿಡ್ಸಕ್ಕೆ ಪ್ರಯತ್ನ ಮಾಡಿದಾಗಲೆಲ್ಲ ಗಿಣಿ ಪಂಜರದ ಹತ್ತಿರಕ್ಕೆ ಹೋದ ರಾಜಕುಮಾರನ ಮೇಲೆ ಅದನ್ನ ಕಾಯ್ತಿರೋ ಸರ್ಪಗಳು ಬುಸ್ ಅಂತ ಬರ್ತಾವಲ್ಲ ಹಾಗೇನೆ ಭಕ್ತರು ಬೀದಿಗಿಳಿದು ಬೊಬ್ಬೆ ಹಾಕ್ತಾರೆ. ಅದ್ಕೇ ವಿರೋಧಿಗಳು ಏನು ಮಾಡವ್ರಂತೆ ಅಂದರೆ ಯಡ್ಯೂರಪ್ಪನವರು ಸಕುಟುಂಬ ಪರಿವಾರ ಸಮೇತರಾಗಿ ನ್ಯಾಯಾಲಯದ ಮೆಟ್ಟಲು ಏರುವಂತೆ ಮಾಡಿ ಬೊಬ್ಬೆ ಬಾಯಿಗಳ ಬಂದ್ ಮಾಡ್ಸವ್ರಂತೆ.


ಇದೇ ಸಮಯ ಅಂತ ಸಿದ್ಧರಾಮಯ್ಯನೋರು ಏನೋ ಮಾಡಿದ್ದಾರೆ. ಯಡ್ಯೂರಪ್ಪನವರನ್ನ ವಿಧಾನಸೌಧದಲ್ಲೇ ಜೀವಸಹಿತ ಮುಗಿಸಲು ಮಾಟ ಮಾಡಿಸಿದ್ದಾರಂತೆ!

ಅಲ್ಲ ಯಡ್ಯೂರಪ್ಪನವರಿಗೆ ಈ ಮಾಟ ದಕ್ಕುತ್ತಾ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಯಾಕೆಂದರೆ ಸನ್ಮಾನ್ಯರು ಮಠಗಳ ಆಶೀರ್ವಾದದಿಂದ ಮುಖ್ಯಮಂತ್ರಿ ಆದವರು. ದೇವರಲ್ಲಿ ನಂಬಿಕೆ ಉಳ್ಳವರು. ಅಗ್ನಿ ಪರೀಕ್ಷೆಗೆ ಒಳಗಾದಾಗಲೆಲ್ಲ ದೇವರ ಹತ್ತಿರ ಓಡಿಹೋಗಿ 'ಈ ಪರೀಕ್ಷೆಯಿಂದ ಪಾರು ಮಾಡು' ಎಂದು ಪ್ರಾರ್ಥಿಸುವುದಿಲ್ಲವಂತೆ; 'ಇದನ್ನು ಎದುರಿಸುವ ಶಕ್ತಿ ದಯಪಾಲಿಸು ದೊರೆಯೆ' ಅಂತ ಬೇಡುತ್ತಾರಂತೆ. ಹಾಗೆಂದು ಅವರೇ ಸುತ್ತೂರಿನಲ್ಲಿ ಹೇಳಿದ್ದಾರೆ. ಅಂದಮೇಲೆ ಈ ಮಾಟಕ್ಕೇಕೆ ಹೆದರ ಪುಕ್ಲಿ ತರಹ ಆಡ್ತಾ ಇದಾರೆ ಅಂದರೆ ಹೀಗೂ ಆಗಿರಬಹುದು. ಅವರು ನಂಬಿ ಕಾಣಿಕೆ ಒಪ್ಪಿಸಿದ್ದು ಶಿಷ್ಟ ದೇವರುಗಳಿಗೆ. ಈ ಪಕ್ಷಪಾತದಿಂದ ಕ್ಷುದ್ರ ದೇವತೆಗಳು ಸಿಟ್ಟಿಗೆದ್ದಿರಬೇಕು. ಈ ಮರ್ಮ ಅರಿತ ಸಿದ್ಧರಾಮಯ್ಯ ಆ ದೇವತೆಗಳನ್ನು ಒಳಗಾಕಿಕೊಂಡು 'ಮಾಟ'ದ ಯಶಸ್ಸು ಕಾಣಲು ಹಂಬಲಿಸುತ್ತಿರಬೇಕು!

ಸನ್ಮಾನ್ಯ ಯಡ್ಯೂರಪ್ಪನವರಿಗೊಂದು ಸಲಹೆ ಏನೆಂದರೆ ಈ ಮಾಟಕಾಟಕ್ಕೆ ಪ್ರತಿ ಮಾಟ ತಜ್ಞರನ್ನು ತಯಾರಿಸಲು ಒಂದು ಮಾಟ-ಪ್ರತಿಮಾಟ ವಿಶ್ವವಿದ್ಯಾಲಯ ತೆರೆಯಿರಿ ಎಂಬುದು. ಹೀಗೆ ಮಾಡಿದಲ್ಲಿ 'ವಿಧಾನಸೌಧ' ಮಾಟ ಭಯದಿಂದ ತಲ್ಲಣಿಸುವುದನ್ನು ತಡೆಯಬಹುದಾಗಿದೆ!

ಇದರ ಅವಶ್ಯಕತೆಯಿಲ್ಲ. ಹೋಮ, ಯಜ್ಞಗಳಿಂದಲೇ ಇದೆಲ್ಲದರಿಂದ ಪಾರಾಗುತ್ತೇವೆ ಎನ್ನಬಹುದು. ವಾಸ್ತವವಾಗಿ ಇದು ಆಗದ ಮಾತು. ಏಕೆಂದರೆ 'ವಿಶ್ವಶಾಂತಿ' ಬಯಸಿ ಹಲವೊಂದು ಯಜ್ಞಗಳು ನಡೆಯುತ್ತಲೇ ಇವೆ. ಸರ್ಕಾರವೆಂಬ ಸರ್ಕಾರವೇ ಪ್ರಾಯೋಜಿಸುತ್ತಿದೆ. ಹಾಗಿದ್ದೂ ಹೋಮಯಜ್ಞ ನಡೆದ ರಾಜ್ಯದ ವಿಧಾನಸೌಧದಲ್ಲೇ ಮುಖ್ಯಮಂತ್ರಿಗಳಿಗೆ ಜೀವಭಯ ಇದೆ ಅಂದರೆ.... ಅಥವಾ ಅವರ ಪ್ರಾಣ ಹಾನಿ ಆಗಲಿ ಎಂದೇ.......

ಲಿಂಗಾಯತರು ಈಗಲಾದರೂ ಬೆಂಬಲ ನಿಲ್ಲಿಸಲಿ



'ಲಿಂಗಾಯತರು ಹಿಂದೂಗಳಲ್ಲ' ಎಂಬ ಮುಖಪುಟ ವರದಿಯನ್ನು ಓದಿ ಈ ಪತ್ರವನ್ನು ಬರೆಯುತ್ತಿದ್ದೇನೆ. ಈ ಕುರಿತು ಮಾತೆ ಮಹಾದೇವಿ ಅವರೊಂದಿಗಿನ ಚರ್ಚೆ ತುಂಬಾ ಚೆನ್ನಾಗಿದ್ದು ನನ್ನಲ್ಲಿ ಇದ್ದ ಹಲವಾರು ಗುಮಾನಿಗಳು ಬಗೆಹರಿದವು. ಆದರೂ ನನ್ನಲ್ಲಿ ಇನ್ನೂ ಕೆಲ ಗುಮಾನಿಗಳು ಉಳಿದಿವೆ. ಉದಾಹರಣೆಗೆ ಹಿಂದೂ ಮತ್ತು ವೀರಶೈವರಿಂದ ಲಿಂಗಾಯತರು ಹೇಗೆ ಭಿನ್ನ ಎಂಬುದರ ಬಗ್ಗೆ ಇನ್ನೊಂದು ವರದಿ ಪ್ರಕಟಗೊಂಡರೆ ಚೆನ್ನಾಗಿರುತ್ತದೆ ಮತ್ತು ನನ್ನಂತಹ ಹಲವಾರು ಜನರಿಗೆ ನೆರವಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

ಪ್ರತಿದಿನ ಈ ಕೆಟ್ಟ ರಾಜಕೀಯದ ಬಗ್ಗೆ ಓದಿ ಹೇಸಿಗೆ ಪಡುತ್ತಿದ್ದ ನನ್ನಂತಹವರಿಗೆ ನಿಮ್ಮ ಈ ವರದಿ ನೋಡಿ ಸಂತೋಷವಾಯಿತು. ಇಂತಹ ವರದಿಗಳನ್ನು ಇನ್ನೂ ಹೆಚ್ಚು ಪ್ರಕಟಿಸಬೇಕೆಂದು ಕೋರಿಕೆ.

-ಚಂದ್ರಮೌಳಿ, ಈ ಮೇಲ್ ಮೂಲಕ

ಕಲ್ಕುಳಿ ವಿಠಲ ಹೆಗ್ಡೆಯವರು ಬರೆಯುತ್ತಿರುವ 'ಮಂಗನ ಬ್ಯಾಟೆ' ಸರಣಿ ಅತ್ಯದ್ಭುತವಾಗಿದೆ. ತೇಜಸ್ವಿ ಅವರ ಬರವಣಿಗೆಯನ್ನು ನೆನಪಿಸುವ ಹೆಗ್ಡೆ ಅವರ ಬರಹದಲ್ಲಿ ನಮ್ಮ ಪ್ರಸ್ತುತ ಸಾಮಾಜಿಕ, ರಾಜಕೀಯ ಮತ್ತು ನೈಸರ್ಗಿಕ ಬಿಕ್ಕಟ್ಟುಗಳೂ ಬಿಂಬಿತವಾಗಿರುತ್ತದೆ.

ಕಲ್ಕುಳಿ ವಿಠಲ ಹೆಗ್ಡೆಯವರಿಂದ ಇನ್ನೂ ಹೆಚ್ಚೆಚ್ಚು ಬರೆಸಿ ಪ್ರಕಟಿಸಬೇಕೆಂದು ಕೋರಿಕೆ.

-ಶಶಿಕಲಾ ಶೆಟ್ಟಿ, ಬೆಂಗಳೂರು

ಈ ವಾರದ ಸಂಪಾದಕೀಯ 'ಯಡ್ಡಿ ಧರಿಸಿದ ಲಿಂಗ ದಿಟವಲ್ಲ ಪ್ರಭುವೆ' ಅರ್ಥಪೂರ್ಣವಾಗಿದೆ. ನಮ್ಮ ರಾಜ್ಯದ ರಾಜಕೀಯ ಸಂಸ್ಕೃತಿಯ ಜೊತೆಗೆ ಬಸವ ಧರ್ಮವನ್ನು ಧ್ವಂಸ ಮಾಡುತ್ತಿರುವ ಜನರನ್ನು ನೀವು ಅವಲೋಕಿಸಿದ್ದು ಸರಿಯಾಗಿದೆ.

-ಲಕ್ಷ್ಮಣ್ ಹೂಗಾರ್, ಈ ಮೇಲ್ ಮೂಲಕ

ಈ ವಾರದ ಸಂಪಾದಕೀಯ ತುಂಬಾ ಚೆನ್ನಾಗಿದೆ. ಸಕತ್ ಸ್ಟ್ರಾಂಗ್ ಮತ್ತು ಕ್ರಾಂತಿಕಾರಿಯಾಗಿದೆ.

-ಎಂ.ಎಸ್.ನಾಗೇಶ್ ಗೌಡ, ಈ ಮೇಲ್ ಮೂಲಕ

ಯಡಿಯೂರಪ್ಪ ಎಂಬ ಭ್ರಷ್ಟ ಲಿಂಗಾಯತ ಸಮುದಾಯದ ಮಾನವನ್ನು ರಾಷ್ಟ್ರಮಟ್ಟದಲ್ಲಿ ಹರಾಜು ಹಾಕುವ ಮೂಲಕ ನಮ್ಮ ಸಮುದಾಯದವರು ಎಲ್ಲೂ ಸ್ವಾಭಿಮಾನದಿಂದ ತಲೆ ಎತ್ತಿ ಓಡಾಡದಂತೆ ಮಾಡಿದ್ದಾನೆ. ಲಿಂಗಾಯತರು ಈಗಲಾದರೂ ತಮ್ಮ ತಪ್ಪನ್ನು ಅರ್ಥಮಾಡಿಕೊಂಡು ಈತನನ್ನು ಬೆಂಬಲಿಸುವುದನ್ನು ನಿಲ್ಲಿಸಲಿ.

-ಅಮರೇಶ್, ಮಸ್ಕಿ

ಅಕ್ಷರ ಅವರ ವಾದದೊಂದಿಗೆ ಭಿನ್ನಾಭಿಪ್ರಾಯವಿದ್ದರೂ 'ಹೆಗ್ಗೋಡಿನಲ್ಲಿ ಇಲ್ಲಿಯವರೆಗೆ ನಡೆದಿರಬಹುದಾದ ಚರ್ಚೆಯನ್ನೇ ಈತ ಬಹಿರಂಗವಾಗಿ ಹೇಳುತ್ತಿದ್ದಾನೆ" (ಧೂತ್ತೇರಿ, ಫೆ 2,2011ರ ಸಂಚಿಕೆ) ಎಂಬ ವಾದವನ್ನು ಒಪ್ಪಲಾರೆ. ಹೆಗ್ಗೋಡಿನಲ್ಲಿ ಜಿ.ರಾಜಶೇಖರ, ಡಿ.ಆರ್.ನಾಗರಾಜ್, ಗೋಪಾಲ್ ಗುರು, ಯು.ಆರ್.ಎ., ಕೀ.ರಂ, ಸದಾನಂದ ಮೆನನ್, ಶಮಿಕ್ ಬಂಡೋಪಾಧ್ಯಾಯ ಇವರಂತಹ ಹಲವಾರು ಜನ ಮಾತನಾಡಿದ್ದಾರೆ ಎಂದು ಮರೆಯುವುದು ಹೇಗೆ? ಅಕ್ಷರ ಅವರ ಈ ಒಂದು ಲೇಖನದ ವಾದ ಹಿಡಿದು ಹೆಗ್ಗೋಡಿನಲ್ಲಿ ನಡೆದ ಚರ್ಚೆಗಳೆಲ್ಲವೂ ಹೀಗೆ ಇತ್ತು ಎಂದು ಹೇಳುವುದು ಸರಿಯಲ್ಲವೇನೋ! ಅದೂ 'ಎಕ್ಸೆಂಪಲ್' ಆಗುತ್ತದಷ್ಟೆ ಎಂಬುದು ನನ್ನ ಅಭಿಪ್ರಾಯ.

-ಸಂವರ್ತ ಸಾಹಿಲ್

ಜನವರಿ 26, 2011ರ ಸಂಚಿಕೆಯಲ್ಲಿ 'ಆರೆಸ್ಸೆಸ್ ಭಯೋತ್ಪಾದನೆ' ಬಗ್ಗೆ ಪ್ರಕಟಗೊಂಡ ಲೇಖನ ಆರೆಸ್ಸೆಸ್ಸಿನ ದೇಶದ್ರೋಹದ ಕೆಲಸಗಳನ್ನು ಬಯಲು ಮಾಡಿದೆ. ಈಗ ಲಂಕೇಶ್ ಪ್ರಕಾಶನದಿಂದ ಈ ಬಗ್ಗೆ ಒಂದು ಸಣ್ಣ ಪುಸ್ತಕ -ಅಂದರೆ 25-30 ಪುಟಗಳ - ಒಂದು ಪುಸ್ತಕವನ್ನು ಪ್ರಕಟಿಸಿದರೆ ಚೆನ್ನಾಗಿರುತ್ತದೆ. ಏಕೆಂದರೆ ಆರೆಸ್ಸೆಸ್ಸಿನ ಭಯೋತ್ಪಾದನೆ ಬಗ್ಗೆ ನಿಮ್ಮ ಪತ್ರಿಕೆಯಲ್ಲಿ ಬಂದ ವಿಷಯಗಳನ್ನು ಓದುಗರು ಸಂಗ್ರಹಿಸಿಟ್ಟುಕೊಳ್ಳುವುದು ಕಷ್ಟದ ಕೆಲಸವಾಗುತ್ತದೆ. ಆದರೆ ಅದು ಒಂದು ಪುಸ್ತಕದ ರೂಪದಲ್ಲಿ ಬಂದರೆ ಆರೆಸ್ಸೆಸ್ಸಿನ ಜನದ್ರೋಹಿ ಕೃತ್ಯಗಳನ್ನು ಬಯಲಿಗೆಳೆಯಲು ಪ್ರಗತಿಪರ ಕಾರ್ಯಕರ್ತರಿಗೆ ಸಹಾಯವಾಗುತ್ತದೆ.

ಇಂತಹ ಒಂದು ಪುಸ್ತಕ ದಾಖಲೆ ಪುಸ್ತಕವಾಗುತ್ತದೆ. ಆದರೆ ಈ ಪುಸ್ತಕದಲ್ಲಿ ಮುಸ್ಲಿಮ್ ಮೂಲಭೂತವಾದಿಗಳ ಭಯೋತ್ಪಾದನೆ ಬಗ್ಗೆಯೂ ಲೇಖನ ಇರಬೇಕು.

-ಜೆ.ಬಿ.ಹಿರೇಮಠ, ವಕೀಲರು, ಹಾವೇರಿ

ಫೆಬ್ರವರಿ 2, 2011ರ ಸಂಚಿಕೆಯಲ್ಲಿ 'ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಶವ ಪೆಟ್ಟಿಗೆಯ ಮೊಳೆ ಜಡಿದವರು!' ಎಂಬ ವರದಿ ಓದಿದೆ. ಅಖಂಡ ಬಿಜಾಪುರ ಜಿಲ್ಲೆ ಒಡೆದು ಇಬ್ಭಾಗವಾಗಿ ಬಾಗಲಕೋಟೆ ಜಿಲ್ಲೆ ಅಸ್ತಿತ್ವಕ್ಕೆ ಬಂದಾಗ ಕಾಂಗ್ರೆಸ್‌ನ ಭದ್ರಕೋಟೆ ಎನಿಸಿಕೊಂಡಿತ್ತು. ಆದರೆ ಈಗ ಇಡೀ ಬಾಗಲಕೋಟೆ ಜಿಲ್ಲೆ ಕೇಸರಿಮಯವಾಗಿದೆ. ಕಾಂಗ್ರೆಸ್‌ನ ಒಳಜಗಳ ಮತ್ತು ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನವನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿದ್ದ ಮಾಜಿ ಮಂತ್ರಿ ಚಿಮ್ಮನಕಟ್ಟಿ ಪಕ್ಷವನ್ನು ಹೇಳಹೆಸರಿಲ್ಲದಂತೆ ಮಾಡಿಹೋದ. ಬಿಜೆಪಿಯು ತನ್ನ ಚಡ್ಡಿ ಬಲದಿಂದ ಇವತ್ತು ಜಿಲ್ಲೆಯಲ್ಲಿ ಎಂಟು ಶಾಸಕರನ್ನು ಹೊಂದಿದೆ. ಜಿಲ್ಲಾ ಕಾಂಗ್ರೆಸ್‌ಗೆ ಈಗ ಹೊಸ ಅಧ್ಯಕ್ಷನಾಗಿರುವ ಸೌದಾಗರ ಏನಾದರು ಹೊಸ ಹುಮ್ಮಸ್ಸು ತಂದುಕೊಡಬಲ್ಲರೋ ಕಾದುನೋಡಬೇಕು.

-ರಮಜಾನ್ ಕೆ.ಕೋರ್ತಿ, ಬಾದಾಮಿ, ಬಾಗಲಕೋಟೆ

ಕಲ್ಲಡ್ಕ ಭಟ್ಟನ ಬ್ರಾಹ್ಮಣಶಾಹಿಯ ಧಿಮಾಕಿನ ಧೋರಣೆ ನಿಮಗೆ ಹೊಸತಾಗಿರಬಹುದಾದರೂ ಸ್ಥಳೀಯರಿಗಲ್ಲ. ಹಿಂದೂ ಸಮಾವೇಶಗಳಲ್ಲಿ ಹಿಂದೂಗಳೆಲ್ಲ ಒಂದೇ ಎಂದು ಎಲ್ಲರನ್ನೂ ಯಾಮಾರಿಸುತ್ತಿದ್ದ ಈ ನರಿಭಟ್ಟನ ಡಿಕ್ಷ-ನರಿಯಲ್ಲಿ ಮಾತ್ರ ಹಿಂದೂ ಎನ್ನುವುದಕ್ಕೆ ಎರಡು ಅರ್ಥಗಳಿವೆ ಎಂಬುದು ಇಲ್ಲಿ ಚಾಲ್ತಿಯಲ್ಲಿರುವ ಜೋಕ್.

1. ಬಡಿದಾಟ ಬಂದಾಗ ಹಿಂದೂ-ಬ್ರಾಹ್ಮಣೇತರರು.

2. ಆದರೆ ಪ್ರಭುತ್ವದ ಪ್ರಶ್ನೆ ಎದುರಾದಾಗ ಮಾತ್ರ ಹಿಂದೂ= ಬ್ರಾಹ್ಮಣ ಮಾತ್ರರು ಎಂಬ ಅರ್ಥವಂತೆ.

ಈ ಹಿಂದೂ ವೀರ ಮೊನ್ನೆ ಶೂದ್ರರ ನಂಬಿಕೆಯ ಹರಕೆ ಯಕ್ಷಗಾನಕ್ಕೆ ಕಲ್ಲು ಹಾಕಿದಂತೆ ವರ್ಷದ ಹಿಂದೆ ಗೌಡರೊಬ್ಬರು ಬಿಜೆಪಿ ರಾಜ್ಯಾಧ್ಯಕ್ಷರಾಗಿದ್ದಾಗ ಅವರದೇ ಊರಲ್ಲಿ ಅವರದೇ ಸಮುದಾಯ (ಗೌಡ)ದ ವ್ಯಕ್ತಿ ಕಾರಿಗೆ ಅಡ್ಡ ಬಂದ ಎಂದು ತನ್ನವರನ್ನ ಕಳಿಸಿ ಬಹಿರಂಗವಾಗಿ ಎಲ್ಲರೆದುರು ಹೀನಾಯವಾಗಿ ಆ ಅಮಾಯಕನನ್ನು ಥಳಿಸಿದ ಧಿಮಾಕು ಈತನದ್ದು. ನಂತರ ಬಚ್ಚೇಗೌಡನಂತವರು ಯಾವನೋ ವ್ಯಕ್ತಿಗೆ ಬೈದದ್ದಕ್ಕೆ ಎಲ್ಲಾ ಮಾಧ್ಯಮಗಳು ಮುರಕೊಂಡು ರೀಮುಗಟ್ಟಲೆ ಬರೆದವು. ಯಾವುದೇ ಅಧಿಕಾರವಿಲ್ಲದ ಈ ಹಿಂದೂ ರಕ್ಷಕನ ಕಾರ್ಯವನ್ನ ಮೀಡಿಯಾಗಳು ಉದ್ದೇಶಪೂರ್ವಕವಾಗಿ ಮುಚ್ಚಿದ್ದವು.

-ಎಸ್.ಎಸ್. ಗೇರುಕಟ್ಟೆ


ರವಿಪೂಜೆಗೆ ಬಂದ ಹಂಸ

[illegible]ಸ್ಟಾರ್ ರವಿಚಂದ್ರನ್ ಮತ್ತು ಸಂಗೀತ ನಿರ್ದೇಶಕ [illegible] ಮತ್ತೊಮ್ಮೆ ಒಂದಾಗಿದ್ದಾರೆ. ರವಿಚಂದ್ರನ್ [illegible]ಗಿ ನಟಿಸಲಿರುವ ಮೂರು ಚಿತ್ರಗಳಿಗೆ ಹಂಸಲೇಖ [illegible]ನಿರ್ದೇಶನ ನೀಡಲಿದ್ದಾರೆ. ಹಾಗಂತ ಮೊನ್ನೆ ಸ್ವತಃ [illegible] ಅವರೇ ಅತ್ಯಂತ ಸಂತೋಷದಿಂದ ವರದಿಗಾರರ [illegible] ಗುಟ್ಟಾಗಿ ತಿಳಿಸಿದ್ದಾರೆ.

[illegible]ಲೇಖ ಮತ್ತು ರವಿಚಂದ್ರನ್ ಜೋಡಿ [illegible]ತ್ತದೆ ಎಂದಾಕ್ಷಣ ಗಾಂಧಿನಗರದ [illegible]ರರ ಕಿವಿ ನೆಟ್ಟಗಾಗುತ್ತದೆ. ಏಕೆಂದರೆ [illegible] ಹಂಸ-ರವಿ ಜೋಡಿ ಬಾಕ್ಸ್ ಆಫೀಸ್‌ನಲ್ಲಿ [illegible]ಡೆಯಬಹುದಾದ ಜೋಡಿ. ಒಂದು [illegible] ಈ ಜೋಡಿ ಮುಟ್ಟಿದ್ದೆಲ್ಲ [illegible]ತ್ತಿತ್ತು. ಆದರೂ [illegible] ನಡುವೆ ಬಿರುಕು [illegible]ಯಾವಾಗ ಇಬ್ಬರೂ [illegible]ಮ್ಮ ದಾರಿ ಹಿಡಿದರೋ [illegible]ತಿಗೆ ಬಾಕ್ಸ್ ಆಫೀಸ್ [illegible]ೀತಿಯಲ್ಲಿ [illegible]ಯಿತು ಎಂಬುದು [illegible]ರ ಪಂಡಿತರ [illegible]ು.

[illegible]ರಲ್ಲೇ ರವಿಚಂದ್ರನ್ [illegible]ಹಂಸಲೇಖ ಜೋಡಿ ಆ [illegible]ಸೂಪರ್ ಹಿಟ್ 'ಅಂಜದ [illegible]ಚಿತ್ರವನ್ನು ಪುನಃ ಬೆಳ್ಳಿ [illegible] ಮೇಲೆ ತರುತ್ತಿದೆ. [illegible] ಚಿತ್ರದ ನಿರ್ಮಾಪಕರಾದ ಗಂಗಾಧರ್ [illegible]ಂದು ಕೂಡಾ ಈ ಚಿತ್ರದ ನಿರ್ಮಾಪಕರು [illegible] ವಿಶೇಷ. ಅಂದಿನ 'ಅಂಜದ ಗಂಡಿ'ನಂತೆ [illegible] 'ಅಂಜದ ಗಂಡೂ' ಬಾಕ್ಸ್ ಆಫೀಸ್‌ನಲ್ಲಿ [illegible]ಮಾಡುತ್ತಾನೆಯೇ ಎಂದು ನೋಡಬೇಕು. [illegible] ಹೊರತಾಗಿ ಇನ್ನೂ ಎರಡು ಚಿತ್ರಗಳಿಗೆ [illegible]ನ್-ಹಂಸಲೇಖ ಜೋಡಿ ಸಹಿ ಮಾಡಿದೆ. [illegible]ವುಗಳ ಬಗ್ಗೆ ವಿವರಗಳನ್ನು ನೀಡಲು [illegible]ಸದ್ಯಕ್ಕೆ ರೆಡಿಯಾಗಿಲ್ಲ.

[illegible] ನೋಡಿದರೆ ರೀಲ್ ಲೈಫ್‌ನಂತೆ ರಿಯಲ್ [illegible] ಕೂಡ ಇವರಿಬ್ಬರೂ 'ಅಂಜದ ಗಂಡು'ಗಳೇ.' [illegible]ವಿಚಂದ್ರನ್ ಈಗ ನಿರ್ಮಿಸುತ್ತಿರುವ 'ಮಂಜಿನ [illegible]ವೇ ಸಾಕ್ಷಿ. ಈ ಚಿತ್ರದ ಶೇ 70 ಭಾಗ [illegible]ಮುಗಿದಾಗ ಆದರ ಆಗಿನ ನಿರ್ಮಾಪಕ ಸಂದೇಶ್ [illegible] ಮತ್ತು ರವಿಚಂದ್ರನ್ ನಡುವೆ ಭಿನ್ನಾಭಿಪ್ರಾಯ [illegible]ಕೊನೆಗೆ "ನಿಮ್ಮ ಸಹವಾಸವೇ ಬೇಡ" ಎಂದು [illegible] ನಿರ್ಮಾಪಕ ಸಂದೇಶ್ ನಾಗರಾಜ್ ಈ ಚಿತ್ರಕ್ಕೆ ಹೂಡಿದ್ದ ಬಂಡವಾಳವನ್ನು ಬಡ್ಡಿ ಸಮೇತ ಹಿಂದಿರುಗಿಸಿದರು. ಅಷ್ಟೇ ಅಲ್ಲ, ಅಷ್ಟೊತ್ತಿಗಾಗಲೇ ಚಿತ್ರೀಕರಣ ಮಾಡಿದ್ದ ಶೇ 70 ಭಾಗವನ್ನು ಸಂಪೂರ್ಣವಾಗಿ ಕಸದಬುಟ್ಟಿಗೆ ಹಾಕಿದರು. ಆನಂತರ ತಮ್ಮ ಈಶ್ವರಿ ನಿರ್ಮಾಣ ಸಂಸ್ಥೆಯ ಹೆಸರಿನಲ್ಲಿ ಅದೇ ಚಿತ್ರವನ್ನು ಮತ್ತೆ ಹೊಸದಾಗಿ ಆರಂಭಿಸಿದರು. ಈಗ ಸದ್ಯಕ್ಕೆ ಶೇ 60 ರಷ್ಟು ಈ ಚಿತ್ರ ಸಂಪೂರ್ಣಗೊಂಡಿದೆ. ಬರುವ ಮೇ ತಿಂಗಳಲ್ಲಿ ತಮ್ಮ 50ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಈ ಚಿತ್ರವನ್ನು ಬಿಡುಗಡೆ ಮಾಡಬೇಕೆಂದು ರವಿ ನಿರ್ಧರಿಸಿದ್ದಾರೆ. ಈಗಾಗಲೇ 'ಮಂಜಿನ ಹನಿ' ಚಿತ್ರಕ್ಕಾಗಿ ಕೆಲ ವರ್ಷಗಳನ್ನು ಮತ್ತು ಸುಮಾರು ಏಳು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.



ಅವತ್ತೇ ತಮ್ಮ ಮಗ ಮನರಂಜನ್‌ನನ್ನು ನಾಯಕನನ್ನಾಗಿ ಕನ್ನಡ ಚಿತ್ರರಂಗಕ್ಕೆ ರವಿಚಂದ್ರನ್ ಪರಿಚಯಿಸಲಿದ್ದಾರೆ. ಆ ಚಿತ್ರವನ್ನು ಸ್ವತಃ ರವಿಚಂದ್ರನ್ ನಿರ್ದೇಶಿಸುತ್ತಿದ್ದಾರೆ. ಇತ್ತೀಚೆಗೆ ರವಿಚಂದ್ರನ್ ನಾಯಕನಾಗಿ ನಟಿಸಿರುವ 'ಹ್ಯಾಪಿ' ಚಿತ್ರದ ಚಿತ್ರೀಕರಣ ಮುಗಿದಿದೆ. ಒಂದೆರಡು ವಾರಗಳಲ್ಲಿ ಅವರ ಅಭಿನಯದ 'ಮಲ್ಲಿಕಾರ್ಜುನ' ಕೂಡ ಮುಗಿಯಲಿದೆ. ಅದರ ಬೆನ್ನಿಗೆ ಅವರ ಜೀವನದ ಮಹತ್ವಾಕಾಂಕ್ಷೆಯ 'ಮಂಜಿನ ಹನಿ' ಕೂಡ ಮುಗಿದುಬಿಡುತ್ತದೆ. ಅಂದರೆ 2011 ರಲ್ಲಿ ರವಿಚಂದ್ರನ್ ಅವರ ಹಲವಾರು ಚಿತ್ರಗಳು ಬಿಡುಗಡೆಯಾಗಲಿವೆ. ಒಂದೆಡೆ ಅವರ ಚಿತ್ರಗಳು ಬಿಡುಗಡೆಯಾಗುತ್ತಿದ್ದಂತೆ ಮತ್ತೊಂದೆಡೆ ಅವರ ಹೊಸ ಚಿತ್ರಗಳು ಸೆಟ್ಟೇರುತ್ತಿರುವುದು ರವಿಚಂದ್ರನ್ ಬೇಡಿಕೆಯಲ್ಲಿರುವುದನ್ನು ತೋರಿಸುತ್ತದೆ. ಕೆಲವೇ ದಿನಗಳಲ್ಲಿ 'ಪರಮಶಿವ' ಎಂಬ ರವಿ ನಟಿಸಲಿರುವ ಹೊಸ ಚಿತ್ರ ಆರಂಭವಾಗಲಿದೆ.

ಗುಣಮಟ್ಟದ ಕಾರಣಕ್ಕಾಗಿ ಚಿತ್ರವೊಂದನ್ನು ಎರಡು ಮೂರು ವರ್ಷ ನಿರಂತರವಾಗಿ ಚಿತ್ರೀಕರಿಸುವ, ಸೋತು ಸುಣ್ಣವಾಗಿದ್ದರೂ ಯಾವುದೇ ಕಾರಣಕ್ಕೂ ಕ್ರಿಯಾಶೀಲತೆಯಲ್ಲಿ ರಾಜಿಯಾಗದ, ರವಿಚಂದ್ರನ್‌ರನ್ನು 'ಅಂಜದ ಗಂಡು' ಎಂದಲ್ಲದೆ ಬೇರೇನೆಂದು ಕರೆಯಲು ಸಾಧ್ಯ?!


ಇವರಂತೆ ಹಂಸಲೇಖ ಕೂಡ ಸ್ವಾಭಿಮಾನಿ ಮತ್ತು ಸ್ವಾವಲಂಬಿ. ರವಿಚಂದ್ರನ್ ಅವರ ಸ್ನೇಹ ಸಂಕೋಲೆಯಿಂದ ಕಳಚಿಕೊಂಡ ನಂತರ ಹಂಸಲೇಖ ಜಮಾನ ಮುಗಿದೇ ಹೋಯಿತು ಎಂದೇ ಎಲ್ಲರೂ ಭಾವಿಸಿದ್ದರು. ಅದೇ ಸಂದರ್ಭಕ್ಕೆ ಸರಿಯಾಗಿ ಅಬ್ಬರದ ಸಂಗೀತ ನಿರ್ದೇಶನಕ್ಕೆ ಹೆಸರಾದ ಗುರುಕಿರಣ್ ಚಿತ್ರರಂಗಕ್ಕೆ ಕಾಲಿಟ್ಟು ದಿನದಿಂದ ದಿನಕ್ಕೆ ಜನಪ್ರಿಯತೆ ಗಳಿಸಲಾರಂಭಿಸಿದರು. ಗುರು ನಂತರ ಕಲ್ಯಾಣ್, ಅದಾದನಂತರ ಮನೋಹರ್, ಕೊನೆಗೆ ಅಮೆರಿಕಾದಿಂದ ಬಂದ ಮನೋಮೂರ್ತಿ ಹೀಗೆ ಪ್ರತಿಯೊಬ್ಬ ಸಂಗೀತ ನಿರ್ದೇಶಕರು ಒಂದಿಷ್ಟು ಕಾಲ ರಾಜ್ಯಭಾರ ಮಾಡಿದರು. ಈಗ ಇಡೀ ಕನ್ನಡ ಚಿತ್ರರಂಗದ ಸಂಗೀತ ಲೋಕ 'ಹರಿಕೃಷ್ಣ'ಮಯವಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಹಂಸಲೇಖ ಮತ್ತೆ ಮೈಕೊಡವಿ ಎದ್ದು ನಿಂತಿದ್ದು ಸಿನಿಮಾ ರಂಗದಿಂದಲ್ಲ, ಅದರ ಬದಲಿಗೆ ಅವರ ಹೃದಯಕ್ಕೆ ಹತ್ತಿರವಾದ ಜಾನಪದ ಮತ್ತು ಶಿಕ್ಷಣ ಕ್ಷೇತ್ರದಲ್ಲಿ. ಅವರ ಕಲ್ಪನೆಯ ಕೂಸಾದ 'ಹಂಸಲೇಖ ದೇಸೀ ಕಾಲೇಜ'ನ್ನು ಅವರು ಆರಂಭಿಸಿಯೇ ಬಿಟ್ಟರು. ಇಂದು ಈ ದೇಸೀ ಕಾಲೇಜು ಕರ್ನಾಟಕದಲ್ಲಿ ಮನೆಮಾತಾಗಿದೆ. ಸಿನಿಮಾರಂಗದಲ್ಲಿ ಕಳೆದುಕೊಂಡಿದ್ದನ್ನು ಹಂಸಲೇಖ ಈ ಕ್ಷೇತ್ರದಲ್ಲಿ ವಾಪಾಸ್ ಪಡೆದಿದ್ದಾರೆ.


ಹೀಗೆ ಹಂಸಲೇಖ ಮತ್ತು ರವಿಚಂದ್ರನ್ ಇಬ್ಬರೂ ಕೂಡ ತಮ್ಮ ತಮ್ಮ ಕ್ಷೇತ್ರದಲ್ಲಿ 'ಅಂಜದ ಗಂಡು'ಗಳಾಗಿ ಮೆರೆದವರು. ಇಂತಹ ಇಬ್ಬರು ಅಪ್ಪಟ ಪ್ರತಿಭಾವಂತ ಕಲಾವಿದರು ಮೂರು ಸಿನಿಮಾಗಳಲ್ಲಿ ಮತ್ತೆ ಒಟ್ಟಿಗೆ ಕೆಲಸ ಮಾಡುತ್ತಿದ್ದಾರೆ ಎಂದರೆ ಅದು ಖಂಡಿತವಾಗಿಯೂ ಗಾಂಧಿನಗರದಲ್ಲಿ ಚೇತೋಹಾರಿ ವಾತಾವರಣವನ್ನು ಸೃಷ್ಟಿಸಲಿದೆ ಎಂದೇ ಹೇಳಬಹುದು.

ರವಿಚಂದ್ರನ್ ಮತ್ತು ಹಂಸಲೇಖ ನಡುವೆ ಅನೇಕ ಸಾಮ್ಯತೆಗಳಿವೆ. ಇಬ್ಬರೂ ದಿನದ 20 ಗಂಟೆ ಕೆಲಸ ಮಾಡುವ ವರ್ಕೋಹಾಲಿಕ್‌ಗಳು. ಆಲ್ಕೋಹಾಲಿಕ್‌ಗಳೇ ಹೆಚ್ಚಾಗಿರುವ ಚಿತ್ರರಂಗದಲ್ಲಿ ಇವರಂತಹ ಶ್ರಮಜೀವಿಗಳು ಜೊತೆಗೂಡಿ ರೀ-ಎಂಟ್ರಿ ಕೊಡುತ್ತಿರುವುದು ಹೊಸ ಹುಡುಗರಲ್ಲಿ ನಡುಕವನ್ನು ಹುಟ್ಟಿಸಿದರೂ ಅಚ್ಚರಿ ಇಲ್ಲ.

• ಶೆಣೈ




ವಿಷ್ಣುಗೆ ಅನ್ಯಾಯ ಮಾಡಿದ ಪದ್ಮ!



ಕೇಂದ್ರ ಸರ್ಕಾರ 'ಪದ್ಮ ಪ್ರಶಸ್ತಿ'ಗಳನ್ನು ನೀಡುವಲ್ಲಿ ಕನ್ನಡಿಗರಿಗೆ ಅನ್ಯಾಯ ಮಾಡುತ್ತಿದೆಯಾ?

ಬಾಲಿವುಡ್‌ನಲ್ಲಿ ಬೆರಳೆಣಿಕೆಯ ಚಿತ್ರಗಳನ್ನು ಮಾಡಿದ ಚಿಳ್ಳೆಪಿಳ್ಳೆಗಳಿಗೆಲ್ಲಾ ಪದ್ಮಶ್ರೀಯಂತಹ ಪ್ರತಿಷ್ಠಿತ ಪ್ರಶಸ್ತಿಗಳನ್ನು ನೀಡುವ ಕೇಂದ್ರ ಸರ್ಕಾರ ಕನ್ನಡದ ಕಲಾವಿದರು, ತಂತ್ರಜ್ಞರನ್ನು ಯಾಕೆ ಅಗೌರವದಿಂದ ಕಾಣುತ್ತಿದೆಯೋ ಗೊತ್ತಿಲ್ಲ. ಕೇಂದ್ರ ಸರಕಾರವೇ ಮಲತಾಯಿ ಧೋರಣೆ ಅನುಸರಿಸುತ್ತಿದೆಯೋ ಅಥವಾ ನಮ್ಮ ರಾಜ್ಯ ಸರಕಾರವು ಪ್ರಶಸ್ತಿ ಶಿಫಾರಸುಗಳಿಗೆ ಸಮರ್ಥ ಆಧಾರ ನೀಡುತ್ತಿಲ್ಲವೋ?

ಕನ್ನಡ ಚಿತ್ರರಂಗಕ್ಕೆ ಪದ್ಮ ಪ್ರಶಸ್ತಿ ಕೈಗೆಟುಕಿ ಅಜಮಾಸು ಇಪ್ಪತ್ತೆಂಟು ವರ್ಷಗಳೇ ಕಳೆದುಹೋಗಿದೆ. ಇತ್ತೀಚೆಗೆ ಅರುಂಧತಿ ನಾಗ್ ಮತ್ತು ಗಿರೀಶ್ ಕಾರ್ನಾಡರಿಗೆ ಪದ್ಮ ಪ್ರಶಸ್ತಿಗಳು ಲಭಿಸಿವೆಯಾದರೂ ಅವರು ಸಂಪೂರ್ಣವಾಗಿ ಚಿತ್ರರಂಗದಲ್ಲಿ ತಮ್ಮನ್ನ ತೊಡಗಿಸಿಕೊಂಡವರಲ್ಲ. ಈ ನಿಟ್ಟಿನಲ್ಲಿ ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿಗೆ ಈ ವರ್ಷ ಪದ್ಮ ಪ್ರಶಸ್ತಿ ಸಿಕ್ಕಿರುವುದು ಆ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನೀಗಿಸಿರುವುದು ನಿಜ. ಆದರೆ ಸ್ವತಃ ಕಾಸರವಳ್ಳಿ ಅವರೇ ಕನ್ನಡಿಗರಿಗೆ ಮರೀಚಿಕೆಯಾಗಿರುವ ಪದ್ಮ ಪ್ರಶಸ್ತಿಗಳ ಬಗ್ಗೆ ದನಿಯೆತ್ತಿದ್ದಾರೆ. "ವಿಷ್ಣುವರ್ಧನ್ ಬದುಕಿದ್ದಾಗ ಯಾವುದೇ ಪ್ರಶಸ್ತಿಗಳ ಹಿಂದೆ ಅವರು ಬಿದ್ದವರಲ್ಲ, ಆದರೆ ಪ್ರಶಸ್ತಿಗಳೇ ಅವರನ್ನು ಹುಡುಕಿಕೊಂಡು ಬರಬೇಕಿತ್ತು, ಅವರಿಗೆ ರಾಷ್ಟ್ರದ ಉನ್ನತ ಪ್ರಶಸ್ತಿಗಳು ಕೈಸೇರದಿರುವುದು ನಿಜಕ್ಕೂ ಬೇಸರದ ಸಂಗತಿ. ಪದ್ಮಶ್ರೀ ಪಡೆದಿರುವ ಬಾಲಿವುಡ್ ನಟಿ ಕಾಜೋಲ್‌ಗಿಂತ ನಮ್ಮ ವಿಷ್ಣುವರ್ಧನ್ ಯಾವುದರಲ್ಲಿ ಕಡಿಮೆ? ಪುಟ್ಟಣ್ಣ ಕಣಗಾಲ್, ಜಿ.ವಿ. ಅಯ್ಯರ್, ಬಿ.ಎಸ್. ರಂಗಾ, ಅಶ್ವತ್ಥ್, ವಿಷ್ಣುವರ್ಧನ್, ಜಯಂತಿ ಮುಂತಾದವರಿಗೆ ಯಾವತ್ತೋ ಈ ಪ್ರಶಸ್ತಿ ಸಿಗಬೇಕಿತ್ತು. ನನ್ನ ಪ್ರಕಾರ ನಮ್ಮ ರಾಜ್ಯ ಸರಕಾರ ಸೂಕ್ತವಾಗಿ ನಾಮಕರಣಗೊಳಿಸದೇ ಇರುವುದು ಮತ್ತು ಪ್ರಶಸ್ತಿಯ ಆಯ್ಕೆ ಸಮಿತಿಗೆ ಮನದಟ್ಟು ಮಾಡುವಲ್ಲಿ ವಿಫಲವಾಗಿರುವುದು ಕನ್ನಡಿಗರು ಈ ಪ್ರಶಸ್ತಿಯಿಂದ ವಂಚಿತರಾಗಲು ಕಾರಣವಿರಬಹುದು" ಎಂದು ಕಾಸರವಳ್ಳಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಕಾಸರವಳ್ಳಿ ಅವರ ಅಸಮಾಧಾನಕ್ಕೆ ಕಾರಣವೂ ಇದೆ. ನಮ್ಮ ಕನ್ನಡದವರೇ ಆದ ಬಿ. ಸರೋಜಾದೇವಿ ಅವರನ್ನು ಪದ್ಮ ಪ್ರಶಸ್ತಿಗೆ ಶಿಫಾರಸ್ಸು ಮಾಡಿದ್ದು ನೆರೆಯ ತಮಿಳುನಾಡು ಸರ್ಕಾರ! ತಮಿಳುನಾಡಿನ ಸರ್ಕಾರ ಅಲ್ಲಿನ ಗೌರ್ಮೆಂಟು ವಡಿವೇಲು, ವಿವೇಕ್‌ರಂಥ ಹಾಸ್ಯ ನಟರಿಗೂ ಪದ್ಮ ಪ್ರಶಸ್ತಿಗಳು ಸಂದಾಯವಾಗುವಂತೆ ಮುತುವರ್ಜಿ ವಹಿಸಿದೆ. ಆದರೆ ಕನ್ನಡದಲ್ಲಿ ಇನ್ನೂರು ಚಿತ್ರಗಳಲ್ಲಿ ನಟಿಸಿ ದಾಖಲೆ ನಿರ್ಮಿಸಿದ್ದಲ್ಲದೆ ಕಲಾರಸಿಕರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿರುವ ವಿಷ್ಣುಗೆ ಮರಣೋತ್ತರ ಪ್ರಶಸ್ತಿಯೂ ದಕ್ಕಲಿಲ್ಲ ಎಂದರೆ ಅದು ಅನ್ಯಾಯವಲ್ಲವೆ? ಕಳೆದ ವರ್ಷವಷ್ಟೇ ಕಣ್ಣುಮುಚ್ಚಿದ ವಿಷ್ಣು ಹೆಸರನ್ನು ಕಳೆದೆರಡು ಸಾಲಿನಿಂದಲೂ ರಾಜ್ಯ ಸರ್ಕಾರ ಶಿಫಾರಸ್ಸು ಮಾಡುತ್ತಲೇ ಬಂದಿದೆ. ಆದರೆ ರಾಷ್ಟ್ರದ ಆಡಳಿತಗಾರರಿಗೆ ಕೇಂದ್ರ ಸರ್ಕಾರ ನಾಲ್ಕಾಣೆಯ ಮನ್ನಣೆಯನ್ನೂ ನೀಡಿಲ್ಲ.

ವಿಷ್ಣು ಎಂಬ ಮೇರು ಶಿಖರಕ್ಕೆ ಅಭಿಮಾನಿಗಳು ತೋರುವ ಗೌರವ, ಪ್ರೀತಿ ಯಾವ ಪ್ರಶಸ್ತಿಗೂ ಸಮವಲ್ಲ, ಹಾಗೆಂದು ವಿಷ್ಣು ಹೆಸರಿಗೆ ಈ ಪರಿಯ ಅಸಡ್ಡೆ ತೋರೋದು ಸರಿಯೇ?

• ಅರುಣ್



ಜೋಳಿಗೆ ತುಂಬಿಸಿಕೊಂಡ ಜೋಗಯ್ಯನ ಋಣಭಾರ...

ತಮಿಳು ಚಿತ್ರರಂಗದಲ್ಲಿ ಯಾರೇ ಒಬ್ಬ ನಟ, ನಿರ್ದೇಶಕ, ಗೀತಸಾಹಿತಿ ದಾಖಲೆಗಳನ್ನು ನಿರ್ಮಿಸಿದರೆ ಆಗ ಒಂದು ಸಮಾರಂಭವನ್ನು ಏರ್ಪಡಿಸಿ ಅದಕ್ಕೆ ಇಡೀ ಚಿತ್ರರಂಗದವರು ಹಾಜರಾಗಿ ಸಂಭ್ರಮ ಪಡುತ್ತಾರೆ. ಉದಾಹರಣೆಗೆ, ರಜನೀಕಾಂತ್ ಚಿತ್ರಜೀವನಕ್ಕೆ ಅಡಿಯಿಟ್ಟು ಇಪ್ಪತ್ತೈದು ವರ್ಷಗಳಾದಾಗ 'ರಜನಿ 25' ಎಂಬ ಬೃಹತ್ ಸಮಾರಂಭವೊಂದು ನಡೆದಿತ್ತು. ಇದೇ ರೀತಿ ಕರುಣಾನಿಧಿ, ಕಮಲ ಹಾಸನ್, ಕವಿಗಳಾದ ವೈರಮುತ್ತು ಮತ್ತು ವಾಲಿ ಅವರ ದಾಖಲೆಯ ವರ್ಷಗಳಲ್ಲಿ ದೊಡ್ಡ ಮಟ್ಟದ ಸಭೆಗಳು ಏರ್ಪಾಡಾಗಿದ್ದವು.

ಆದರೆ ನಮ್ಮಲ್ಲಿ ಅಂತಹದ್ದೆಲ್ಲ ನಡೆಯುವುದೇ ಇಲ. ಉದಾಹರಣೆಗೆ ಕನ್ನಡ ಚಿತ್ರರಂಗದ ಅದ್ಭುತ ನಟ ಅನಂತ್ ನಾಗ್ ಅರವತ್ತಕ್ಕೆ ಕಾಲಿಟ್ಟದ್ದು ಯಾರಿಗೂ ಗೊತ್ತಾಗಲಿಲ್ಲ. ಹಾಗೆಯೇ ರವಿಚಂದ್ರನ್ ಚಿತ್ರರಂಗಕ್ಕೆ ಬಂದು 25 ವರ್ಷ ಕಳೆದರೂ ಅದರ ಸುದ್ದಿಯಾಗಲೇ ಇಲ್ಲ.

ಇಂತಹ ಪರಿಸ್ಥಿತಿಯಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಸ್ವತಃ ಒಂದು ಸಮಾರಂಭವನ್ನು ನಡೆಸಲು ಉತ್ಸುಕರಾಗಿದ್ದಾರೆ.

"2011ರ ಫೆಬ್ರವರಿ 19ಕ್ಕೆ ನಾನು ಕನ್ನಡ ಚಿತ್ರರಂಗ ಪ್ರವೇಶಿಸಿ 25 ವರ್ಷಗಳು ತುಂಬಲಿವೆ. ಆ ವರ್ಷವೇ ನಾನು ಗೀತಾಳನ್ನು ಮದುವೆಯಾಗಿದ್ದು. ಹಾಗಾಗಿ ನನಗೆ ಮತ್ತು ನನ್ನ ಪತ್ನಿಗೆ ಆ ದಿನ ಬೆಳ್ಳಿಹಬ್ಬ. ಆದ್ದರಿಂದ ಮಾರ್ಚ್ 2 ರಂದು ಒಂದು ಸಮಾರಂಭವನ್ನು ಏರ್ಪಡಿಸಿ ನನ್ನ ವೃತ್ತಿಜೀವನದಲ್ಲಿ ಪಾತ್ರ ವಹಿಸಿದವರನ್ನೆಲ್ಲ ಸನ್ಮಾನಿಸುತ್ತೇನೆ" ಎಂದು ಶಿವಣ್ಣ ಹೇಳಿದ್ದಾರೆ.

ಡಾ. ರಾಜ್-ಪಾರ್ವತಮ್ಮ ದಂಪತಿಗಳ ಮಗನಾಗಿ ಹುಟ್ಟಿ, ಪುಟ್ಟಸ್ವಾಮಿಯಾಗಿ ಬೆಳೆದು, ಶಿವರಾಜ್‌ಕುಮಾರ್ ಆಗಿ ಹ್ಯಾಟ್ರಿಕ್ ಹೀರೋ ಆದ ಶಿವಣ್ಣ ಎಂದು ತಾವು ನಡೆದು ಬಂದ ಹಾದಿ ಬಂದ ಉದ್ದಕ್ಕೂ ಮೆಲುಕು ಹಾಕಲಿದ್ದಾರಂತೆ. "ನನ್ನ ಮೊದಲ ಚಿತ್ರದ ನಿರ್ಮಾಪಕಿ ನನ್ನ ತಾಯಿ ಪಾರ್ವತಮ್ಮ ರಾಜ್‌ಕುಮಾರ್ ಅವರಿಂದ ಹಿಡಿದು 100ನೇ ಚಿತ್ರದ ನಿರ್ಮಾಪಕಿ ರಕ್ಷಿತಾ ಪ್ರೇಮ್‌ವರೆಗೆ ಎಲ್ಲಾ ನಿರ್ಮಾಪಕರಿಗೆ ಮಾರ್ಚ್ 2ರಂದು ಸನ್ಮಾನ ಮಾಡಿ ಗೌರವಿಸುತ್ತೇನೆ" ಎಂದಿರುವ ಶಿವಣ್ಣ ಆ ಮೂಲಕ ಅನ್ನದಾತರ ಋಣ ತೀರಿಸಲು ಹೊರಟಿದ್ದಾರೆ.

1985ರ ಹೊತ್ತಿಗೆ ಶಿವರಾಜ್‌ಕುಮಾರ್ ಜೊತೆಜೊತೆಗೇ ಚಿತ್ರರಂಗ ಪ್ರವೇಶಿಸಿದ ರವಿಚಂದ್ರನ್, ಜಗ್ಗೇಶ್ ಮತ್ತು ರಮೇಶ್ ಅರವಿಂದ್ ಅವರನ್ನು ಈ ಸಮಾರಂಭದಲ್ಲಿ ಸನ್ಮಾನಿಸಲು ಉದ್ದೇಶಿಸಿರುವುದು ಹೆಡ್ ಆಫೀಸ್‌ನ ದೊಡ್ಡ ಗುಣ!

ಈ ಕಾರ್ಯಕ್ರಮದ ಅಂದಚೆಂದವನ್ನು ಹೆಚ್ಚಿಸಲು ಹರ್ಷ, ನಾಗೇಶ್, ಕಲಾಯಿ, ಇಮ್ರಾನ್ ಸರ್ದಾರಿಯಾ ಮುಂತಾದ ನೃತ್ಯ ನಿರ್ದೇಶಕರು ಸಾಥ್ ನೀಡುತ್ತಿದ್ದಾರೆ. "ನನ್ನ ಸಹ ನಟರೆಲ್ಲರನ್ನೂ ಪಾಲ್ಗೊಳ್ಳುವಂತೆ ಆಹ್ವಾನಿಸಿದ್ದೇನೆ" ಎಂದಿರುವ ಶಿವಣ್ಣ, ಅಭಿಮಾನಿಗಳು ಮತ್ತು ಸಾರ್ವಜನಿಕರು ಕಾರ್ಯಕ್ರಮಕ್ಕೆ ಬರಬಹುದು ಎಂದು 'ಉಚಿತ'ವಾಗಿ ಆಹ್ವಾನಿಸಿದ್ದಾರೆ. "ಕರ್ನಾಟಕ ಬಿಟ್ಟು ಹೊರಗಿನ ಯಾರೊಬ್ಬರನ್ನೂ ಕಾರ್ಯಕ್ರಮಕ್ಕೆ ಅತಿಥಿಗಳನ್ನಾಗಿ ಕರೆದಿಲ್ಲ, ಕಾರ್ಯಕ್ರಮದಲ್ಲಿ ಪ್ರಮುಖ ಅತಿಥಿ ಅಂತೇನೂ ಇರೋದಿಲ್ಲ, ಎಲ್ಲರೂ ನನಗೆ ಅತಿಥಿಗಳೇ. ಬನ್ನಿ, ಹಾರೈಸಿ" ಎಂದಿರುವ ಶಿವಣ್ಣ ನಿಜಕ್ಕೂ ಗ್ರೇಟ್...

● ಅರುಣ್



'ಗಂಡುಬೀರಿ'ಯ ಮದುವೇನಾ?

'ಜಂಭದ ಹುಡುಗಿ' ಪ್ರಿಯಾಹಾಸನ್‌ಗೆ ಮದುವೆಯಂತೆ. ಆಗಲೇ ಎಂಗೇಜ್‌ಮೆಂಟೂ ಮುಗಿದುಹೋಗಿದೆಯಂತೆ...! ಹೀಗೊಂದು ಸುದ್ದಿ ಈ ವಾರದ ಆರಂಭದಲ್ಲಿ ಒಂದೇಸಮನೆ ಉಕ್ಕಲು ಶುರುವಾಗಿತ್ತು.


ಈ ಸುದ್ದಿಯನ್ನು ಕೇಳಿ 'ಬಿಂದಾಸ್' ಆಗಿ ಒಂದರ ಹಿಂದೆ ಒಂದು ಸಿನಿಮಾ ಅನೌನ್ಸ್ ಮಾಡುತ್ತಾ ತಿರುಗುತ್ತಿರುವ ಪ್ರಿಯಾಹಾಸನ್ ಇದ್ದಕ್ಕಿದ್ದ ಹಾಗೆ ಯಾಕೆ ಮದುವೆಗೆ ಮುಂದಾಗಿದ್ದಾಳೆ? ಈ 'ಗಂಡುಬೀರಿ'ಯನ್ನು ಮದುವೆಯಾಗುತ್ತಿರುವ ಪುಣ್ಯಾತ್ಮ ಯಾರು? ಎಂದು ಈಕೆಯ ಕೋಟ್ಯಾನುಕೋಟಿ ಅಭಿಮಾನಿಗಳು ತಲೆಮೇಲೆ ಬಿಸಿನೀರು ಬಿದ್ದವರಂತೆ ಯೋಚಿಸಲು ಶುರು ಮಾಡಿದ್ದರಂತೆ. ಐಶ್ವರ್ಯಾ ರೈ ಮದುವೆಯ ಸುದ್ದಿ ಕೇಳಿ ಖಿನ್ನರಾದ ಅಭಿಮಾನಿಗಳಂತೆ ಪ್ರಿಯಾ ಫ್ಯಾನುಗಳೂ ಆಕೆಯ ಮನೆಯ ಸುತ್ತ ಗಿರ್ರನೆ ತಿರುಗಲು ಶುರು ಮಾಡಿದ್ದರಂತೆ. ಅಷ್ಟರಲ್ಲಿ ನಿಜ ಸಂಗತಿ ಕೂಡಾ ಹೊರಬಿತ್ತು.

ಅದೇನೆಂದರೆ ಫೇಸ್ ಬುಕ್‌ನಲ್ಲಿ ಪ್ರಿಯಾ ಹಾಸನ್‌ಗೆ ಭಯಂಕರ ಅಭಿಮಾನಿಗಳಿದ್ದಾರಂತೆ. ಇವರ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಲಾಗದ ಪ್ರಿಯಾ ತನ್ನ ಮ್ಯಾನೇಜರ್‌ಗೆ ಫೇಸ್ ಬುಕ್‌ನಲ್ಲಿನ 'ಸ್ಟೇಟಸ್' ಜಾಗದಲ್ಲಿ 'ಪ್ರಿಯಾ ಹಾಸನ್ ತುಂಬಾ ಬ್ಯುಸಿ' ಅಂತ ಹಾಕಲು ಹೇಳಿದಳಂತೆ. ಆದರೆ ಆ ಪೆದ್ದು ಮ್ಯಾನೇಜರ್ ಫೇಸ್ ಬುಕ್‌ನಲ್ಲಿ 'ಬ್ಯುಸಿ' ಎಂದು ನಮೂದಿಸುವ ಬದಲಾಗಿ 'Priya Engaged' ಎಂದು ದಾಖಲಿಸಿದನಂತೆ.

ಅದನ್ನು ನೋಡಿದವರೆಲ್ಲ 'ಆಹಾ ಪ್ರಿಯಾ ಮದ್ವೆಯಂತೆ...' ಎಂದು ಹಾಡಲು ಶುರು ಮಾಡಿಬಿಟ್ಟಿದ್ದರಂತೆ. ಈ ಸದ್ದು ಕೇಳಿದ ಪ್ರಿಯಾಳ ಅಣ್ಣ ಮೋಹನ್ ಗೌಡನೂ ಗಾಬರಿಯಾದನಂತೆ. "ನನ್ನ ತಂಗಿ ನಂಗೂ ಹೇಳದೇ ಮದುವೆಗೆ ಮುಂದಾಗಿದ್ದಾಳೆ" ಅಂತಾ ಒಂದೇ ಕಣ್ಣಲ್ಲಿ ಅಳುತ್ತಾ ಕರ್ಚೀಫು ಒದ್ದೆ ಮಾಡಿಕೊಂಡನಂತೆ.

ಛೇ ಪಾಪ!





'ದುರಹಂಕಾರಿ' ದರ್ಶನ್ ವಿರುದ್ಧ 'ದುಷ್ಟ' ನಾಣಿ ಕಿಡಿ!

ನಿರ್ದೇಶಕ ಎಸ್. ನಾರಾಯಣ್ ಇದ್ದಕ್ಕಿದ್ದಂತೆ ದರ್ಶನ್ ವಿರುದ್ಧ ಕಿಡಿಕಾರಿದ್ದಾರೆ!

ತನಗೆ ಕಾಲ್‌ಶೀಟ್ ಕೊಡಲು ಆಟವಾಡಿಸುವ ನಟನಟಿಯರನ್ನು ಕಂಡರೆ ನಾಣಿಗೆ ಭಯಾನಕ ಸಿಟ್ಟು. ಅದಕ್ಕೆ ಅಂತಹ ನಟನಟಿಯರೆಲ್ಲಾ ಆಗಾಗ್ಗೆ ನಾಣಿ ಬಾಯಿಗೆ ಆಹಾರವಾಗುವುದು ಸಂಪ್ರದಾಯ!

ಈ ಬಾರಿ ನಾರಾಯಣ್ ಆರೋಪಪಟ್ಟಿ ಸಲ್ಲಿಸಿರುವುದು ದರ್ಶನ್ ಎಂಬ ಹೀರೋ ವಿರುದ್ಧ.

ಏನಾಯಿತೆಂದರೆ, ಒಂದು ದಿನ ನಾರಾಯಣ್ ದರ್ಶನ್‌ಗೆ ಫೋನ್ ಮಾಡಿದರಂತೆ. ನಾಣಿ ಕರೆಯನ್ನು ಸ್ವೀಕರಿಸಿದ ದರ್ಶನ್ "ದರ್ಶನ್ ಅಣ್ಣ ತುಂಬಾ ಬ್ಯುಸಿ ಇದಾರೆ. ಅವರು ಈಗ ಸಿಗೋದಿಲ್ಲ, ವಿಷಯ ಏನೆಂದು ಹೇಳಿದರೆ ನಾನು ಅಣ್ಣನಿಗೆ ಹೇಳ್ತೀನಿ" ಎಂದು ಕಾಗೆ ಹಾರಿಸಿದರಂತೆ. ಸ್ವತಃ ದರ್ಶನ್ ಕಾಲ್ ರಿಸೀವ್ ಮಾಡಿದರೂ ತನ್ನ ಧ್ವನಿ ಬದಲಿಸಿ ಆತ ಮಾತಾಡಿದ್ದು ನಾಣಿಗೆ ಗೊತ್ತಾಗಿಬಿಟ್ಟಿತಂತೆ.



"ಒಂದು ಕಾಲದಲ್ಲಿ ನನ್ನ ಮನೆ ಮುಂದಿನ ಕರೆಂಟು ಕಂಬಕ್ಕೆ ಒರಗಿ ನಿಲ್ಲುತ್ತಿದ್ದ ದರ್ಶನ್ ಈಗ ಈ ಪಾಟ ಧಿಮಾಕು ಮಾಡುತ್ತಿದ್ದಾನೆ. ಎಲ್ಲರೂ ತನ್ನನ್ನು 'ಅಣ್ಣ' ಎಂದೇ ಕರೆಯಬೇಕು ಅಂತ ದರ್ಶನ್ ಬಯಸುತ್ತಿದ್ದಾನೆ. ಆದರೆ ಯಾವತ್ತೂ ಗೌರವವನ್ನು ಕೇಳಿ ಪಡೆಯಬಾರದು, ಅದು ತನ್ನಿಂತಾನೇ ಬರಬೇಕು. ಅಷ್ಟಕ್ಕೂ ನಾನು ಎಲ್ಲರಿಗೂ ಗೌರವ ಕೊಡುವ ವ್ಯಕ್ತಿ. ಅದಕ್ಕೂ ಹೆಚ್ಚು ಮಿತಿಮೀರಿದ ಗೌರವ ಬೇಕೆಂದರೆ ನನ್ನಿಂದ ಸಾಧ್ಯವಿಲ್ಲ. ದರ್ಶನ್‌ನಂಥ ಹೀರೋ ಕನ್ನಡ ಚಿತ್ರರಂಗದಲ್ಲೇ ಇಲ್ಲ. ದರ್ಶನ್‌ಗಿಂತ ಸುದೀಪ್ ಎಷ್ಟೋ ವಾಸಿ. ಕನ್ನಡ ಚಿತ್ರರಂಗದ ಕೆಲವು ನಾಯಕರಿಗೆ ಬಕೆಟ್ ಹಿಡಿಯದಿದ್ದರೆ ಅವರ ಕಾಲ್‌ಶೀಟ್ ಸಿಗುವುದೇ ಇಲ್ಲ. ಅವರನ್ನು ಅಣ್ಣ ಎಂದೇ ಕರೆಯಬೇಕು. ಆದರೆ ನಾನು ಹಾಗೆಲ್ಲಾ ಸಿಕ್ಕಸಿಕ್ಕವರಿಗೆಲ್ಲ ಅಣ್ಣಾ ಎಂದು ಜೈಕಾರ ಹಾಕುವ ಜಾಯಮಾನದವನಲ್ಲ. ಡಾ. ರಾಜ್‌ಕುಮಾರ್, ಡಾ. ವಿಷ್ಣುವರ್ಧನ್ ಮತ್ತು ಅಂಬರೀಷ್ ಬಿಟ್ಟು ಬೇರೆ ಯಾರನ್ನೂ ನಾನು ಅಣ್ಣ ಎಂದು ಕರೆಯಲಾರೆ" ಎಂದೆಲ್ಲ ನಾಣಿ ಕೆಂಡಕಾರಿದ್ದಾರೆ.

ನಾಣಿ ಕುರಿತಂತೆ ಚಿತ್ರರಂಗದಲ್ಲಿ ಏನೇ ಅಸಮಾಧಾನಗಳಿರಬಹುದು. ಆದರೆ ದರ್ಶನ್‌ನಂಥ ಎಳಸು ನಟ ಇಡೀ ಚಿತ್ರರಂಗಕ್ಕೆ ತಾನೇ 'ಬಾಸ್' ಎಂಬಂತೆ ಉದ್ಧಟತನ ತೋರಿದರೆ ಎಲ್ಲರೂ ಅದನ್ನು ವಿರೋಧಿಸುತ್ತಾರೆ. ತೆರೆಯ ಮೇಲಿನ ಸಿನಿಮಾಕ್ಕೂ ನಿಜಜೀವನದ ರೌಡಿಸಂಗೂ ವ್ಯತ್ಯಾಸವಿಲ್ಲದಂತೆ, ನಿರ್ಮಾಪಕ, ನಿರ್ದೇಶಕರು ಸೇರಿದಂತೆ ಪತ್ರಕರ್ತರೊಂದಿಗೂ ಯದ್ವಾತದ್ವಾ ನಡೆದುಕೊಳ್ಳುವ ದುರಹಂಕಾರಿ ನಟ ದರ್ಶನ್‌ಗೆ ಅದಿನ್ಯಾವಾಗ ಬುದ್ಧಿ ಬರುತ್ತದೆಯೋ?

ನಾರಾಯಣ ನಾರಾಯಣ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate...